ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಹಲಸಂಗಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ಸುಮಿತ್ ಮೇತ್ರಿ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೮೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**HALASANGI:** An Introducing Book on the Places in Karnataka that Played q Major Role in the Freedom struggle, Written by Sumit Metri, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**

ಡಾ. ಬಿ.ವಿ. ವಸಂತಕುಮಾರ್

ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**

೧. ಡಾ. ಎಸ್. ಜಿ. ರಾಮದಾಸ ರೆಡ್ಡಿ

೨. ಡಾ. ಮೃತ್ಯುಂಜಯ ರುಮಾಲೆ

೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.

೪. ಡಾ. ಪ್ರಕಾಶ ಗ. ಖಾಡೆ

೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ: ೨೦೨೨

ಪ್ರತಿಗಳು: ೧೦೦೦

ಬೆಲೆ: ರೂ. ೩೦/-

ಪುಟ: ೮೦

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:

ಕರಿಯಪ್ಪ ಎನ್., ರಿಜಿಸ್ಟ್ರಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು

**ರಶ್ಮಿ ಪ್ರಿಂಟರ್ಸ್**

ಸುಧಾಮನಗರ, ಬೆಂಗಳೂರು


ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**

ಮುಖ್ಯಮಂತ್ರಿ

ವಿಧಾನಸೌಧ

ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

## ಬರುವದೇನುಂಟೊಮ್ಮೆ ಬರುವ ಕಾಲಕೆ...

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಹಲಸಂಗಿ ಕೆಲವೇ ಕೇಂದ್ರಗಳಲ್ಲಿ ಒಂದಾಗಿತ್ತು. ಹಲಸಂಗಿ ಗೆಳೆಯರ ಬಳಗದ ಪ್ರಮುಖರಲ್ಲಿ ಮಧುರಚೆನ್ನರು, ಸಿಂಪಿ ಲಿಂಗಣ್ಣನವರು, ಕಾಪಸೆ ರೇವಪ್ಪನವರು, ಪಿ. ಧೂಲಾ ಸಾಹೇಬರು. ಇವರೆಲ್ಲರ ಸಾಹಿತ್ಯ ಚಟುವಟಿಕೆಗಳು, ಸಾಹಿತ್ಯ ಕೃಷಿ ಅಗಾಧವಾದದ್ದು. ಕಾವ್ಯ, ಖಂಡಕಾವ್ಯ, ಕಥೆ, ನಾಟಕ, ಕಾದಂಬರಿ, ಅನುವಾದ, ಸಂಶೋಧನೆ, ಜನಪದ, ಆಧ್ಯಾತ್ಮಿಕ, ಇತಿಹಾಸ, ಶಾಸನಗಳ ಅಧ್ಯಯನ, ಲಿಪಿಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಚಿತ್ರಕಲೆ ಜೊತೆಗೆ ನಾಡಹಬ್ಬ, ಸಭೆ ಸಮಾರಂಭಗಳು, ರಾಷ್ಟ್ರೀಯ ಉತ್ಸವಗಳು, ನಾಟಕ ಪ್ರದರ್ಶನ ಮೂಲಕ ನಾಡು, ನುಡಿ, ಸಂಸ್ಕೃತಿ ಉಳಿಯಬೇಕೆಂಬ ಮತ್ತು ಕನ್ನಡಿಗರಲ್ಲಿ ಸ್ವಾಭಿಮಾನದ ಜಾಗೃತಿ, ಸಂಸ್ಕೃತಿಯ ಪರಂಪರೆಯನ್ನು ಪುನರುಜ್ಜೀವನಗೊಳಿಸುವ, ರಾಷ್ಟ್ರದ ಹೋರಾಟಗಳಲ್ಲಿ ಪಾಲ್ಗೊಳ್ಳುವಂತೆ, ಕನ್ನಡನಾಡಿನ ಒಂದು ಪ್ರಮುಖ ಸಾಂಸ್ಕೃತಿಕ, ಸಾಹಿತ್ಯಕ, ಸಾಮಾಜಿಕ ಕೇಂದ್ರವಾಗಿತ್ತು ಎಂದರೆ ತಪ್ಪಾಗಲಾರದು. ಹಲಸಂಗಿ ಗೆಳೆಯರು ಬರೆಯುತ್ತಿದ್ದ ಕಾಲಕ್ಕೆ ರಾಷ್ಟ್ರೀಯ ಆಂದೋಲನಗಳು ಅವರನ್ನು ತೀವ್ರವಾಗಿ ತಟ್ಟಿದ್ದವು. ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಭದ್ರ ತಳಹದಿಯ ಮೇಲೆ ಕಟ್ಟುವ ಕಾರ್ಯವನ್ನು ಸದ್ದುಗದ್ದಲವಿಲ್ಲದೆ ಸೇವೆ ಮಾಡಿದ್ದ ಹಲಸಂಗಿ ಗೆಳೆಯರ ಬಳಗ ನಾಡು, ನುಡಿ, ನೆಲ, ಜಲ ಹೀಗೆ ವಿಶೇಷ ರೀತಿಯಲ್ಲಿ, ಬೇರೆ ಬೇರೆ ಬಗೆಯಲ್ಲಿ ಸಕ್ರಿಯವಾಗಿ ಅನೇಕ ಕಾರ್ಯ ಚಟುವಟಿಕೆಗಳ ಜೊತೆಜೊತೆಗೆ ಸಾಹಿತ್ಯದ ಮೂಲಕ ನಾಡಿಗೆ ಸೇವೆ ಸಲ್ಲಿಸುವ, ಕನ್ನಡಿಗರಲ್ಲಿ ಜಾಗೃತಿಮೂಡಿಸುವ,

ಹಿಂದೂ ಸೇವಾದಳ, ಸ್ವದೇಶಿ ಚಳುವಳಿ, ಖಾದಿ ಪ್ರಚಾರ, ಕರ್ನಾಟಕ ಏಕೀಕರಣ ಚಳುವಳಿ, ಸ್ವಾತಂತ್ರ್ಯ ಹೋರಾಟದಲ್ಲಿ ಪರೋಕ್ಷವಾಗಿ, ಅಪರೋಕ್ಷವಾಗಿ ಕಾರಣವಾಗಿದೆ. ಸ್ವಾತಂತ್ರ್ಯ ಕಿಚ್ಚನ್ನೂ ಸಾಹಿತ್ಯದ ಜ್ಯೋತಿಯಾಗಿಸಿದ ಹಲಸಂಗಿ ಸಾಹಿತಿಗಳು ಒಂದು ಮಾದರಿಯಾಗಿದ್ದಾರೆ.

ಮಧುರಚೆನ್ನರು ಸಾಹಿತ್ಯ, ಆಧ್ಯಾತ್ಮಿಕ ನೆಲೆಯಲ್ಲಿ ಗೆಳೆಯರೊಂದಿಗೆ ಸಕ್ರಿಯರಾಗಿದ್ದರೆ, ಸಿಂಪಿ ಲಿಂಗಣ್ಣನವರು ತಮ್ಮ ಶಿಕ್ಷಕ ವೃತ್ತಿಯೊಂದಿಗೆ ಸಾಹಿತ್ಯ, ಖಾದಿ ಪ್ರಚಾರ, ನಾಡು, ನುಡಿ, ದೇಶಭಕ್ತಿ ಈ ಆಯಾಮದಲ್ಲಿ ತೊಡಗಿಕೊಂಡಿದ್ದರು. ಸ್ವಾತಂತ್ರ್ಯ ಹೋರಾಟ ಎಂದ ತಕ್ಷಣ ನೆನಪಾಗುವ ಹಲಸಂಗಿ ಗೆಳೆಯರ ಬಳಗದಲ್ಲಿನ ಮೊದಲ ಹೆಸರು ಕಾಪಸೆ ರೇವಪ್ಪನವರದು. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಸೆರೆಮನೆ ವಾಸವನ್ನು ಕೂಡ ಅನುಭವಿಸಿದವರು. ಸ್ವಾತಂತ್ರ್ಯ ಹೋರಾಟಗಾರರಾಗಿ ಹಲಸಂಗಿ ಊರಿನ ಸುತ್ತಮುತ್ತಲಿನ ಹಳ್ಳಿಗಳ ಮೇಲೆ ಪ್ರಭಾವ ಬೀರಿದವರು. ಈ ನಿಟ್ಟಿನಲ್ಲಿ ಹಲಸಂಗಿ ಗೆಳೆಯರ ಬಳಗದಲ್ಲಿ ಕೇಳಿಬರುವ ಇನ್ನೊಂದು ಹೆಸರು ಪಿ. ಧೂಲಾ ಸಾಹೇಬರು. ರಾಷ್ಟ್ರಪ್ರೇಮಿ, ಕನ್ನಡ ಪ್ರೇಮಿ, ಆದರ್ಶವಾದಿಯೂ ಆಗಿದ್ದ ಪಿ. ಧೂಲಾ ಸಾಹೇಬರು ರಾಷ್ಟ್ರೀಯ ಸೇವಾದಳದಲ್ಲಿ ಕಾರ್ಯ ನಿರ್ವಹಿಸುವುದರ ಜೊತೆಗೆ ದೇಶಕ್ಕೆ ಸ್ವಾತಂತ್ರ್ಯ ದೊರಕುವವರೆಗೂ “ತಲೆಗೂದಲು ಕತ್ತರಿಸುವುದಿಲ್ಲ ಮತ್ತು ಮದುವೆಯಾಗುವುದಿಲ್ಲ” ಎಂಬ ಸಂಕಲ್ಪ ಮಾಡಿದ್ದವರು. ಹೀಗೆ ಹಲಸಂಗಿ ಎಂಬ ಪುಟ್ಟ ಪ್ರಪಂಚ ನವೋದಯದ ಕಾಲಘಟ್ಟದಲ್ಲಿ ನಾಡು, ನುಡಿ, ನೆಲ, ಜಲ ವಿಷಯಗಳಲ್ಲಿ ಕಂಕಣಬದ್ಧವಾಗಿತ್ತು ಎಂಬುವುದು ಈನಿಟ್ಟಿನಲ್ಲಿ ಕಾಣಬಹುದಾಗಿದೆ.

2022ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಪ್ರಯುಕ್ತ 75 ಪುಸ್ತಕಗಳನ್ನು ಪ್ರಕಟಿಸಲು ಆಸ್ಥೆ ವಹಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾರ್ಯ ಅಭಿನಂದನಾರ್ಹ. ಅಕಾಡೆಮಿ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್ ಅವರಿಗೂ ಹಾಗೂ ಸರ್ವ ಪದಾಧಿಕಾರಿಗಳಿಗೂ ಕೃತಜ್ಞತೆಗಳು. ಸಂಪಾದಕರಾದ ಡಾ. ಪ್ರಕಾಶ ಗ. ಖಾಡೆ ಅವರಿಗೂ ಹಾಗೂ



ವಿವಿಧ ಗ್ರಂಥಋಣ ಲೇಖಕರಿಗೂ, ಮೌಖಿಕವಾಗಿ ಸಲಹೆ ಸೂಚನೆಗಳನ್ನು ನೀಡಿದ ಎಲ್ಲಾ ಹಿರಿಯರಿಗೂ ವಂದನೆಗಳು. ಕರ್ನಾಟಕದಲ್ಲಿ ಗುರುತಿಸಿದ 75 ಹಳ್ಳಿಗಳಲ್ಲಿ ಹಲಸಂಗಿಯನ್ನು ಆಯ್ಕೆಮಾಡುವ ಮೂಲಕ ಈ ‘ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ’ ಎಂಬ ಕೃತಿ ಪ್ರಕಟವಾಗುತ್ತಿರುವುದು ಸಂತಸ ತಂದಿದೆ.

**ಸುಮಿತ್ ಮೇತ್ರಿ**
ಹಲಸಂಗಿ

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ೧. ನಿಶ್ಯಬ್ದ ನಿಶ್ಯಬ್ದ ಶಬ್ದದಾಚೆಯ ಶಬ್ದ ಪ್ರವೇಶಿಸುವ ಮುನ್ನ | ೧೭ |
| ೨. ಸರ್ವಜನಾಂಗದ ಶಾಂತಿಯ ತೋಟ; ಹಲಸಂಗಿ ಎಂಬ ಕನ್ನಡ ದೇಶದೊಳ್ | ೨೩ |
| ೩. ಊರು ಬಾ ಎಂದು ಕರೆಯುತ್ತಿದೆ | ೨೭ |
| ೪. ಹಲಸಂಗಿ ಗೆಳೆಯರು | ೩೨ |
| ● ಖಾದಿ ಪ್ರಿಯ ಸಿಂಪಿ ಲಿಂಗಣ್ಣ | ೩೮ |
| ● ಸ್ವಾತಂತ್ರ್ಯ ಹೋರಾಟಗಾರ ಕಾಪಸೆ ರೇವಪ್ಪ | ೪೧ |
| ● ಅಪ್ಪಟ ದೇಶಭಕ್ತ ಪಿ. ಧೂಲಾ | ೪೫ |
| ೫. ಲಾವಣಿ ರತ್ನ ಖಾಜಾಭಾಯಿ | ೫೦ |
| ೬. ಹಲಸಂಗಿ ಭವದೊಳವತರಿಸಿದ ಗಾಂಧಿ | ೫೫ |
| ೭. ನಾಡಹಬ್ಬ ಉತ್ಸವ | ೫೭ |
| ೮. ಹಲಸಂಗಿ ಎಂಬ ಪುಟ್ಟ ಪ್ರಪಂಚ | ೬೦ |
| ಅನುಬಂಧ–೧ ನರಬಲಿ | ೬೮ |

ಅನುಬಂಧ–೨

ಗ್ರಂಥ ಋಣ ೭೪

ಅನುಬಂಧ–೩

ಮೌಖಿಕ ಋಣ ೭೫

ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೭೬

---

## ೧. ನಿಶ್ಶಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ ಪ್ರವೇಶಿಸುವ ಮುನ್ನ

**ದೇವಲೀಲೆಯೊ ಕಾಣೆ ಕರ್ಮಜಾಲವೊ ಕಾಣೆ**
**ಅದು ನಮ್ಮ ಬುದ್ಧಿಯಾಚೆಗಿನ ಮಾತು**
**ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು**
**ಭವದಲ್ಲಿ ಕಾಣೆ ಮನಗಂಡ ಮಾತು**

– ಮಧುರಚೆನ್ನ

ಅನುಭಾವ ಕವಿ ಮಧುರಚೆನ್ನರ ಆತ್ಮವೀಣೆಯ ಆಲಾಪಗಳಂತಿದ್ದ ಅಧ್ಯಾತ್ಮ ಪ್ರಧಾನ ಕವನಗಳು. ಹಲಸಂಗಿ ಎಂದರೆ ಮಧುರಚೆನ್ನ ಗೆಳೆಯರ ಬಳಗ, ಸಾಹಿತ್ಯ, ಜನಪದ, ಲಾವಣಿ, ಸಾಂಸ್ಕೃತಿಕ, ಆಧ್ಯಾತ್ಮಿಕ ನೆಲೆ. ಹಲಸಂಗಿ ಗೆಳೆಯರ ಬಳಗ ಪ್ರೀತಿಯ ತಳಹದಿಯ ಮೇಲೆ ನಿರ್ಮಾಣವಾದ ಒಂದು ಸೌಧ. ಹೊಸಗನ್ನಡ ಸಾಹಿತ್ಯದಲ್ಲಿ ಹಲಸಂಗಿಯದು, ಮಧುರಚೆನ್ನರದು ಮರೆಯಲಾರದ ಹೆಸರು. ಅವರ 'ನನ್ನ ನಲ್ಲ' ನವೋದಯ ಕಾವ್ಯದಲ್ಲಿ ಒಂದು ಮೀಸಲು ಕವಿತೆ. ಡಾ. ವಿ. ಕೃ. ಗೋಕಾಕರು ಈ ಕಾವ್ಯದ ಕುರಿತಾಗಿ ಹೀಗೆ ಹೇಳುತ್ತಾರೆ: "ಮಧುರಚೆನ್ನರ ನನ್ನ ನಲ್ಲ ಎಂಬ ನೀಳ್ಗವನವು ವಿಶ್ವದ ಯಾವುದೇ ಉಜ್ವಲವಾದ ಅನುಭಾವ ಗೀತೆಯೊಡನೆ ಸರಿ ತೂಗಿ ನಿಲ್ಲಬಲ್ಲದು. ಅನುಭಾವ ಗೀತದ ಹೊಸ ಪರಿಯನೊಂದು ಅವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದರು ಹಾಗೂ ಕನ್ನಡಿಗರು ಹೆಮ್ಮೆ ಪಡುವಂತಹ ಕೃತಿಯದು."

ಇಂತಹ ಉತ್ಕೃಷ್ಟ ಕಾವ್ಯವನ್ನು ನೀಡಿದ ಕವಿ ಮಧುರಚೆನ್ನರು ಕನ್ನಡ ನಾಡಿಗೆಲ್ಲ ಪರಿಚಿತವಾಗಿರುವ ವಿಜಯಪುರ ಜಿಲ್ಲೆಯ ಹಲಸಂಗಿಯವರು. ಅವರು ಕನ್ನಡದ ವರಕವಿ ದ. ರಾ. ಬೇಂದ್ರೆ ಅವರ ಆತ್ಮೀಯ ಗೆಳೆಯರಾಗಿ, ಗೆಳೆಯರ ಗುಂಪಿನ ಅನನ್ಯ ಸ್ನೇಹಿತರಾಗಿ, ಹಲಸಂಗಿಯಲ್ಲಿ ಗೆಳೆಯರ ಗುಂಪನ್ನು

ಕಟ್ಟಿ, ಬೆಳೆಯಿಸಿ ತನ್ಮೂಲಕ ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಆರಾಧನೆಯನ್ನು ಮಾಡಿದವರು. ಇಡೀ ತಮ್ಮ ಬದುಕಿನುದ್ದಕ್ಕೂ ಆಧ್ಯಾತ್ಮಿಕ ಸಾಧನೆಯ ಅಸಾಧಾರಣ ಹೋರಾಟದಲ್ಲಿಯೇ ಜೀವಿಸಿದರು ಎನ್ನುವುದು ಅವರ ಜೀವನದಿಂದಲೇ ತಿಳಿದುಬರುತ್ತದೆ. ಆಧ್ಯಾತ್ಮಿಕ ಅನುಪಮ ಸಾಧನೆಯನ್ನು ಮಾಡಿ, ಅನುಭಾವ ಕಾವ್ಯಗಳನ್ನು ಕನ್ನಡಕ್ಕೆ ನೀಡಿದ ಮಧುರಚೆನ್ನರು ಕನ್ನಡ ಸಾಹಿತ್ಯಕ್ಕೆ ಇನ್ನೂ ಹಲವು ಬಗೆಯಲ್ಲಿ ಕಾಣಿಕೆಯನ್ನು ನೀಡಿದ್ದಾರೆ. ಜನಪದ ಸಾಹಿತ್ಯ ಇತಿಹಾಸದಲ್ಲಿ ಅವರು ಗೆಳೆಯರ ಜೊತೆಗೂಡಿ ಮಾಡಿರುವ ಕಾಯಕ ಚಿರಸ್ಮರಣೀಯವಾದದ್ದು. ಜನಪದ ಸಾಹಿತ್ಯದ ಕುರಿತು ಕೃಷಿ ಮಾಡಿದವರಲ್ಲಿ ಅವರು ಆದ್ಯರು. ಜನಪದ ಸಾಹಿತ್ಯ ಸಂಗ್ರಹ ಕಾರ್ಯದಲ್ಲಂತೂ ಅವರದು ಅದ್ವಿತೀಯ ಕೊಡುಗೆ. ಅವರು ಗೆಳೆಯರ ಜೊತೆಗೂಡಿಕೊಂಡು ಸಂಗ್ರಹಿಸಿದ 'ಗರತಿಯ ಹಾಡು' (೧೯೩೧), ಜೀವನ ಸಂಗೀತ (೧೯೩೩), ಮಲ್ಲಿಗೆ ದಂಡೆ (೧೯೩೫) ಜನಪದ ಸಾಹಿತ್ಯ ಸಂಗ್ರಹದ ಕೃತಿಗಳು. ಈ ಸಂಗ್ರಹವನ್ನು ಮೀರಿಸುವ ಕೃತಿ ಇಂದು ಇನ್ನೂ ಕಾಣಲು ಸಾಧ್ಯವಾಗಿಲ್ಲ ಎಂದೇ ಹೇಳಬಹುದು. ಒಂದು ಕಾಲಮಾನದಲ್ಲಿ ಬೇಂದ್ರೆಯವರು ಮಧುರಚೆನ್ನರಿಗೆ ಅಣ್ಣನಾಗಿದ್ದರೆ, ಮಧುರಚೆನ್ನರು ಹಲಸಂಗಿ ಗೆಳೆಯರಿಗೆಲ್ಲ ಅಣ್ಣನಾಗಿದ್ದರು. ಹಲಸಂಗಿ ನಾಡಿನ ಸಮಸ್ತ ಜನತೆ ಮಧುರಚೆನ್ನರನ್ನು 'ಅಣ್ಣಾವ್ರ' ಎಂದೇ ಗುರುತಿಸುತ್ತಿದ್ದರು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣ ಇದ್ದಂತೆ ಈ 'ಚೆನ್ನಮಲ್ಲಪ್ಪಣ್ಣ' (ಮಧುರಚೆನ್ನರು) ಇದ್ದರು ಎಂದು ಬೇಂದ್ರೆಯವರು ಒಂದು ಕಡೆ ಬರೆಯುತ್ತಾರೆ.

ಮಧುರಚೆನ್ನರ ಕಾವ್ಯ ಮತ್ತು ಗದ್ಯ ಲೇಖನದ ಯೋಗ್ಯತೆ ತಿಳಿಸಿ ಹೇಳುವಷ್ಟು ನನಗೆ ಅರ್ಹತೆ ಇಲ್ಲ. ಇದನ್ನು ಹುಸಿ ವಿನಯ ಎಂದು ಯಾರೂ ಭಾವಿಸಬಾರದು. ಅವರ 'ನನ್ನ ನಲ್ಲ' ಕನ್ನಡವಷ್ಟೇ ಏಕೆ, ಭಾರತದ ಯಾವುದೇ ಭಾಷೆಯ ಸಾಹಿತ್ಯಕ್ಕೂ ಭೂಷಣವಾದ, ಬೌದ್ಧಿಕವಾಗಿ ಸೃಷ್ಟಿಸಲು ತೀರಾ ಅಸಾಧ್ಯವಾದ ರಚನೆ. ಇಂಥ ವಿಷಯಗಳನ್ನೆಲ್ಲ ಅವರು ಭಾಷೆಯಲ್ಲಿ ಬರೆದಿಟ್ಟಿದ್ದಾರೆ ಎಂಬುದೇ ಒಂದು ವಿಸ್ಮಯ. ಅವರಿಗೆ ಬೇರೊಂದರ ಪರಿವೆ ಇರಲಿಲ್ಲ. ತಾವು ಹುಟ್ಟಿದ್ದೇ ಬೆಳಕಿನ ಲೋಕದ ಖಾಯಂ ನಿವಾಸಿಯಾಗಲು ಎಂಬುದು ಅವರಿಗೆಲ್ಲ ಬಾಲ್ಯದಲ್ಲೇ ಖಾತ್ರಿಯಾಗಿಬಿಟ್ಟಿತ್ತು. ಮಧುರಚೆನ್ನರು



ಬದುಕಿದ ಬದುಕು ನೋಡಿದರೆ ಇದು ಹೊಳೆಯುತ್ತದೆ. ಅವರು ಜನಿಸಿದ್ದು ೩೧ ಜುಲೈ ೧೯೦೩ರಂದು. ಅಂದು ಶ್ರಾವಣಮಾಸದ ಸಿರಿಯಾಳ ಷಷ್ಠಿ. ಭಕ್ತ ಸಿರಿಯಾಳ ಮಹಾಶಿವಭಕ್ತ. ಮಧುರಚೆನ್ನರು ಬದುಕಿದ್ದು ಕೇವಲ ಐವತ್ತು ವರ್ಷ. ಅದರಲ್ಲೂ ಎರಡನೇ ೨೫ ವರ್ಷಗಳು ಅವರು ತೀವ್ರ ಅನಾರೋಗ್ಯದ ನಡುವೆ, ಸಾಧಕರಾಗಿ ಯೋಗ, ವೇದಾಂತಗಳ ಸಮುದ್ರದಲ್ಲಿ ಈಜಾಡಿದರು. ವಿವಿಧ ಆಧ್ಯಾತ್ಮಿಕ ಪಂಥಗಳ ಮಹಾನುಭಾವರ ಗ್ರಂಥಗಳ ನಡುವೆ ತಲೆನೆಟ್ಟು ತಪಸ್ಸು ಮಾಡಿದರು. ದೇಹ ಬಳಲಿತು. ಅವರು ದೇಹ ಬಿಟ್ಟದ್ದೂ ಸಿರಿಯಾಳ ಷಷ್ಠಿ ದಿನವೇ ೧೫ ಆಗಸ್ಟ್ ೧೯೫೩.ಅವರು ತಮ್ಮ ೨೬ನೇ ವಯಸ್ಸಿನಲ್ಲಿ ಅಂದರೆ ೧೯೨೯ ಡಿಸೆಂಬರ್ ೦೪ರಂದು ಆತ್ಮಸಾಕ್ಷಾತ್ಕಾರದ ಬೆಳಕು (ಬ್ರಹ್ಮ ಸಂಸ್ಪರ್ಶ)ಕಂಡಿದ್ದು ಅನಿರ್ವಚನೀಯ. ಕಂಡ ಆನಂದವನ್ನು, ಅದನ್ನು ಪಡೆದ ದಾರಿಯನ್ನು, ಈ ಜ್ಞಾನಭಿಕ್ಷು ತನ್ನಂಥ ಸಾಧಕ ಜೀವಿಗಳ ಸಲುವಾಗಿ ಪೂರ್ವರಂಗ (೧೯೭೭), ಕಾಳರಾತ್ರಿ (೧೯೭೮), ಬೆಳಗು (೧೯೮೪), ಆತ್ಮಸಂಶೋಧನೆ (೧೯೫೮) ಎಂಬ ನಾಲ್ಕು ಭಾಗಗಳಲ್ಲಿ ಬರೆದರು. ಮಧುರಚೆನ್ನರ ಈ ದೃಷ್ಟಿ ಪಂಡಿತ ತಾರಾನಾಥರಂತಹ ಮಹಾಮಹಿಮರನ್ನೂ ಒಂದು ಕ್ಷಣ ತಬ್ಬಿಬ್ಬು ಮಾಡಿತ್ತು. ಮಧುರಚೆನ್ನರನ್ನು ಮಾತ್ರವಲ್ಲ ಅಲ್ಲಮಪ್ರಭು, ರತ್ನಾಕರವರ್ಣಿ, ಹರಿಹರ, ರಮಣ ಮಹರ್ಷಿ, ಶ್ರೀ ಅರವಿಂದರು, ಓಶೋ ಇವರನ್ನು ಅರಿಯಲೂ ಕೀಲಿಕೈ ಆತ್ಮಶೋಧ. "ಅದು ತತ್ವಜ್ಞಾನದ ಪುಸ್ತಕವಲ್ಲ, ಅದು ಅನುಭಾವ ಪಥದ ಒಂದು ಚಿಕ್ಕ ನಕ್ಷೆ ಮಾತ್ರ. ತತ್ವಜ್ಞಾನ ಅಥವಾ ಫಿಲಾಸಫಿ ಮತ್ತು ಅನುಭಾವ ಅಥವಾ ಮಿಸ್ಟಿಸಿಜಮ್ ಎಂಬ ಎರಡು ಸ್ವತಂತ್ರ ಶಾಖೆಗಳಲ್ಲಿ ಒಂದು ಬುದ್ಧಿಪ್ರಧಾನ, ಇನ್ನೊಂದು ಭಾವಪ್ರಧಾನ." ಒಟ್ಟಿನಲ್ಲಿ ಮಧುರಚೆನ್ನರನ್ನು ವಿಲಿಯಂ ಬ್ಲೇಕ್, ಅಲ್ಲಮಪ್ರಭು, ನಿಸರ್ಗದತ್ ಮಹಾರಾಜ್ ಮೊದಲಾದವರ ಯಾವತ್ತೂ ಸಾಹಿತ್ಯ ಓದುವಂತೆ ಓದಬೇಕೇ ಹೊರತು ಕೇವಲ ಭಕ್ತಿಪಂಥದ ಒಬ್ಬ ನವೋದಯದ ಕವಿಯೆಂಬ ಕಾರಣಕ್ಕೆ ಅಲ್ಲ. ಈ ದೃಷ್ಟಿಯಿಂದ ಗೋವಿಂದ ಪೈ, ಕುವೆಂಪು, ಬೇಂದ್ರೆ, ಪುತಿನ ಅವರಿಗಿಂತ ಮಧುರಚೆನ್ನರ ಸಾಹಿತ್ಯ ಬೇರೆ ರುಚಿಯದು. ಇವರಿಗೆಲ್ಲ ಸಾಹಿತ್ಯ ಕಾವ್ಯಯೋಗವಾಗಿತ್ತು. ಮಧುರಚೆನ್ನರಿಗೆ ಅದು ಯೋಗಕಾವ್ಯವಾಗಿತ್ತು. ಅಂದರೆ ಬೇಂದ್ರೆ, ಕುವೆಂಪು ಮೊದಲು ಕವಿಗಳು

ನಂತರ ಅನುಭಾವದ ಕಡೆ ಮುಖಮಾಡಿದವರು, ಮಧುರಚೆನ್ನರು ಪೂರ್ಣವಾಗಿ ಅನುಭಾವದ ಕಡೆ ಹೊರಟು ಅದರ ಅನುಭವಗಳನ್ನೇ ಸಾಹಿತ್ಯವಾಗಿಸಿದರು.

ಪ್ರಾಚೀನ ಶಾಸನಗಳನ್ನು ಓದಿ ಕನ್ನಡಕ್ಕೆ ಅತ್ಯಂತ ಪ್ರಾಚೀನ ಕವಿಯನ್ನು ಪರಿಚಯಿಸಿದ ಅಭಿನವ ಪಂಪನ ಸ್ಥಳವನ್ನು ಗುರುತಿಸಿಕೊಟ್ಟ, ಬಸವಣ್ಣನವರ ಜೀವನವನ್ನು ತಿಳಿಯಲು ಸಹಾಯಕ ಸಾಮಗ್ರಿಯನ್ನು ಒದಗಿಸಿಕೊಟ್ಟ ಶ್ರೇಯಸ್ಸು, ಅಷ್ಟೇ ಅಲ್ಲದೆ 'ಕನ್ನಡ ಪ್ರಾಚೀನ ಲಿಪಿ ಬೋಧಿನಿ' ಎಂಬ ಲಿಪಿಶಾಸ್ತ್ರ ಕುರಿತಾಗಿ ಮೊದಲಿಗೆ ಕೃತಿಯನ್ನು ರಚಿಸಿದವರು. ಭಾಷಾಶಾಸ್ತ್ರ ಕುರಿತು ಅವರು ಮಾಡಿರುವ ಅಧ್ಯಯನ ಅಸಾಮಾನ್ಯವಾಗಿದೆ. ಆರ್ಯ ದ್ರಾವಿಡ ಭಾಷಾ ಸಮನ್ವಯ ಎಂಬ ಲೇಖನವು ಭಾಷಾಶಾಸ್ತ್ರ ಅಧ್ಯಯನದಲ್ಲಿ ಒಂದು ದಿಕ್ಸೂಚಿಯಾಗಿದೆ. ಸ್ವಂತಃ ಹಲವು ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದರು, ಹಾಗೆ ಭಾಷೆಯ ಮೂಲ ಸೂತ್ರಗಳನ್ನು ತಿಳಿಯುವ ಸಾಮರ್ಥ್ಯ ಹೊಂದಿದ್ದರು. ಶ್ರೀಮಾತಾರವಿಂದರ ಸೇವೆಗಾಗಿಯೇ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಹಲಸಂಗಿಯಲ್ಲಿ ಅರವಿಂದ ಮಂಡಳಿ, ಅರವಿಂದ ಗ್ರಂಥಮಾಲೆ ಸ್ಥಾಪಿಸಿದರು. ವಿಶೇಷವಾಗಿ ಅರವಿಂದ ಗ್ರಂಥಮಾಲೆ ಜವಾಬ್ದಾರಿ ವಹಿಸಿಕೊಂಡ ಸಿಂಪಿ ಲಿಂಗಣ್ಣನವರ ಸೇವೆ ಇಲ್ಲಿ ಅನನ್ಯವಾದದ್ದು. ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಪುಸ್ತಕ ತಲುಪಿಸುವ ಕಷ್ಟದ ಕೆಲಸವನ್ನು ಶ್ರಮವಹಿಸಿ ಮಾಡಿದರು. ಈ ಮೂಲಕ ಜನರಲ್ಲಿ ಓದುವ ಅಭಿರುಚಿಯನ್ನು ಉಂಟುಮಾಡಲು, ಲೇಖಕರಾಗಿ, ಪ್ರಕಾಶಕರಾಗಿ, ಮಾರಾಟಗಾರರಾಗಿ ಮಾಡಿದ ಕಾರ್ಯ ನಿಜಕ್ಕೂ ಶ್ಲಾಘನೀಯ. ಪುಸ್ತಕಗಳನ್ನು ಗಂಟು ಮೂಟೆ ಕಟ್ಟಿಕೊಂಡು ಹಳ್ಳಿಗಳ ಮನೆಮನೆ ಬಾಗಿಲಿಗೆ ಹೋಗಿ ತಲುಪಿಸಿರುವ ಅಂದಿನ ಕಾರ್ಯ ಶರಣರ ಕಾಯಕಕ್ಕೆ ಸಮನಾದದ್ದು ಎಂದರೂ ತಪ್ಪಾಗಲಾರದು. ಇದನ್ನು ಯಾವ ಲಾಭದಾಸೆಯಿಂದ ಮಾಡದೇ, ಜನತೆಯಲ್ಲಿ ಓದುವ ಹವ್ಯಾಸ ಮೂಡಿಸುವ ಶಿಕ್ಷಣದ ಮೂಲಕ ನಾಡು ನುಡಿ ಸಂಸ್ಕೃತಿ ಉಳಿಯಬೇಕೆಂಬ ಮತ್ತು ಕನ್ನಡಿಗರನ್ನು ಎಚ್ಚರಿಸುವ, ನಮ್ಮ ಉಜ್ವಲವಾದ ಸಂಸ್ಕೃತಿಯ ಪರಂಪರೆಯನ್ನು ಪುನರುಜ್ಜೀವನಗೊಳಿಸುವ, ರಾಷ್ಟ್ರದ ಹೋರಾಟದಲ್ಲಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ಶ್ರಮವಹಿಸಿದರು. ಆ ದಿನಮಾನಗಳಲ್ಲೆ ಕರ್ನಾಟಕ ಗಡಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರದಿಂದ ಬರುವ ಲೋಕಮಾನ್ಯ



ಬಾಲಗಂಗಾಧರ ತಿಲಕರ ಮರಾಠಿ ಪತ್ರಿಕೆ 'ಕೇಸರಿ' ಓದುವವರಿದ್ದರು ಹಲಸಂಗಿಯಲ್ಲಿ ಎಂದರೆ ನೀವೇ ಊಹಿಸಿಕೊಳ್ಳಿ. ರಾಷ್ಟ್ರೀಯ ಹೋರಾಟದ ಚಟುವಟಿಕೆಗಳ ಕುರಿತು ಆಸಕ್ತಿ, ತಿಳಿದುಕೊಳ್ಳುವ ಹಂಬಲ. ಹಲಸಂಗಿ ಗೆಳೆಯರ ಬಳಗದಲ್ಲಿ ಪ್ರಮುಖವಾಗಿ ಮಧುರಚೆನ್ನ, ಸಿಂಪಿ ಲಿಂಗಣ್ಣ, ಪಿ. ಧೂಲಾ, ಕಾಪಸೆ ರೇವಪ್ಪ ಹಾಗೂ ಈ ನಾಲ್ವರ ಜೊತೆಗೆ ಓಲೇಕಾರ ಮಾದಣ್ಣನವರು ಒಬ್ಬರು. ಸ್ಥಳೀಯರಾದ ಚೆನ್ನಪ್ಪ ಸರಸಂಬಿ, ಆದಮ ಮಸಳಿ, ಶಿವಲಿಂಗಪ್ಪ ಸರಸಂಬಿ, ಗುರುಬಸಪ್ಪ ಗಲಗಲಿ ಮೊದಲಾದವರೂ ಗೆಳೆಯರ ಬಳಗದಲ್ಲಿದ್ದರು. ಮಧುರಚೆನ್ನರ ಅಚ್ಚುಮೆಚ್ಚಿನ ಗೆಳೆಯರಲ್ಲೊಬ್ಬರು ರಾಘಣ್ಣ ಸುರುಪುರ (ಹಲಸಂಗಿ ಗಾಂಧಿ).ಸಭೆ ಸಮಾರಂಭಗಳು, ರಾಷ್ಟ್ರೀಯ ಉತ್ಸವಗಳಲ್ಲಿ ಹೀಗೆ ಎಲ್ಲಾ ಕಡೆಯೂ ಹಲಸಂಗಿ ಗೆಳೆಯರ ಬಳಗ ವಿದ್ಯುದೂರ್ಮಿಗಳಂತೆ ವಾಯುಮಂಡಲನ್ನೆಲ್ಲ ವ್ಯಾಪಿಸಿ, ಅದರ ಆವರಣ ಪ್ರಭಾವಕ್ಕೆ ಒಳಗಾದವರನ್ನೆಲ್ಲ ಸಚೇತನರನ್ನಾಗಿ ಮಾಡುತ್ತಿದ್ದವು ಎಂದು ಸಿದ್ದಯ್ಯ ಪುರಾಣಿಕ ಅವರು ದಾಖಲಿಸುತ್ತಾರೆ.

ಇಡೀ ಹಲಸಂಗಿ ಗೆಳೆಯರ ಬಳಗದ ಸಾಹಸಗಾಥೆ ಕನ್ನಡನಾಡಿನ ಒಂದು ಸಾಂಸ್ಕೃತಿಕ, ಸಾಹಿತ್ಯಕ, ಸಾಮಾಜಿಕ ಕೇಂದ್ರವಾಗಿತ್ತು ಎಂದರೆ ತಪ್ಪಾಗಲಾರದು. ಹರಿದು ಹಂಚಿಹೋಗಿದ್ದ ಕನ್ನಡ ನಾಡನ್ನು ಭದ್ರ ತಳಹದಿಯ ಮೇಲೆ ಕಟ್ಟಲು ಸದ್ದು ಗದ್ದಲವಿಲ್ಲದೆ ಸೇವೆ ಮಾಡಿದ್ದು ಸಾಹಿತಿಗಳು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಹಾಗೂ "ವಂದೇ ಮಾತರಂ" ಹೀಗೆ ಮೊದಲಾದ ಗೀತೆಗಳನ್ನು ಕರ್ನಾಟಕ ಏಕೀಕರಣಕ್ಕೂ, ಸ್ವಾತಂತ್ರ್ಯ ಚಳುವಳಿಗೂ ಅಂತಸ್ಫೂರ್ತಿಯನ್ನು, ಪ್ರೇರಣೆಯನ್ನು ನೀಡಿತು. ನವೋದಯ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡುವುದರ ಜೊತೆಗೆ ರಾಷ್ಟ್ರಪ್ರೇಮದ ಕುರಿತು ಹಾಗೂ ಹಲಸಂಗಿ ಭೂಮಿ ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ, ಭಾಷೆ ಹೀಗೆ ವಿಶೇಷ ರೀತಿಯಲ್ಲಿ ಸಕ್ರಿಯವಾಗಿತ್ತು. ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿನ ಸೇವೆ, ಕನ್ನಡಿಗರಲ್ಲಿ ಜಾಗೃತಿ ಮೂಡಿಸುವುದು. ಸ್ವಾತಂತ್ರ್ಯ ಹೋರಾಟ, ಹಿಂದೂ ಸೇವಾದಳ, ಸ್ವದೇಶಿ ಚಳುವಳಿ, ಖಾದಿ ಪ್ರಚಾರ ಹಾಗೂ ಕರ್ನಾಟಕ ಏಕೀಕರಣ

ಚಳುವಳಿಯಲ್ಲಿ ಪರೋಕ್ಷವಾಗಿ, ಅಪರೋಕ್ಷವಾಗಿ ಕಾರಣವಾಯಿತು. ಕರ್ನಾಟಕ ಏಕೀಕರಣದ ಅಗತ್ಯವನ್ನು, ಭಾರತ ಸ್ವಾತಂತ್ರ್ಯದ ಅನಿವಾರ್ಯತೆಯನ್ನು ಅರಿತವರಾಗಿದ್ದರು. ಗ್ರಾಮೀಣ ಪರಿಸರದಲ್ಲಿ ಅಶಿಕ್ಷಿತ ಜನಸಮುದಾಯದ ಮಧ್ಯದಲ್ಲಿ, ಅನೇಕ ಅಭಾವಗಳಲ್ಲೂ ಹಲಸಂಗಿ ಗೆಳೆಯರ ಬಳಗ ತಮ್ಮ ತಮ್ಮ ರೀತಿಯಲ್ಲಿ ನಾಡಿನ, ರಾಷ್ಟ್ರದ ಸೇವೆಯಲ್ಲಿ, ಸ್ವಾತಂತ್ರ್ಯ ಜಾಗೃತಿ ಚಳುವಳಿಯಲ್ಲಿ ಪಾಲ್ಗೊಂಡಿದ್ದು ಈಗ ಇತಿಹಾಸ ಪುಟಗಳಲ್ಲಿ ಅಜರಾಮರವಾಗಿದೆ. ಹಂಪಿಯಲ್ಲಿ ಜರುಗಿದ ವಿಜಯನಗರ ಷಟ್ ಸಾಂವತ್ಸರಿಕ ಉತ್ಸವದಲ್ಲಿ ಪಾಲ್ಗೊಂಡಿದ್ದು, ಅಸಹಕಾರ ಆಂದೋಲನದಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಹಲಸಂಗಿ ಗೆಳೆಯರಲ್ಲೊಬ್ಬರಾದ ಕಾಪಸೆ ರೇವಪ್ಪನವರು ಅನುಭವಿಸಿದ್ದು ಮತ್ತು ದೇಶಭಕ್ತಿ ಕತೆಗಳ ಪುಸ್ತಕಗಳನ್ನು ಪ್ರಕಟಿಸಿದ್ದನ್ನು ನೆನೆಯಬಹುದಾಗಿದೆ. ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಕೆಲಸದಲ್ಲಿ ಸಕ್ರಿಯವಾಗಿ ಹಲಸಂಗಿ ಗೆಳೆಯರು ಭಾಗವಹಿಸಿದ್ದರು.

❑

# ೨. ಸರ್ವ ಜನಾಂಗದ ಶಾಂತಿಯ ತೋಟ; ಹಲಸಂಗಿ ಎಂಬ ಕನ್ನಡ ದೇಶದೊಳ್

ಬಹಳ ಹಿಂದೆ... ನನಗೀಗ ಸರಿಯಾಗಿ ನೆನಪಾಗುತ್ತಿದೆ, ಇನ್ನೂ ನೆನಪಿನ ತೋಟದಲ್ಲಿ ಹಸಿರಾಗಿವೆ ಆ ದಿನಗಳು. ಗಗನಮಲ್ಲಿಗೆ ಮರದ ಕೆಳಗೆ ಕುಳಿತು ಆಟವಾಡಿದ್ದು, ಓಡಾಡಿದ್ದು. ಹಲಸಂಗಿ ಎಂಬ ಕನ್ನಡ ದೇಶದ ಕೋಟೆಬಾಗಿಲು(ಅಗಸಿ) ಪ್ರವೇಶಿಸಿದಂತೆ ಎಡಬಲದ ಭಾಗದಲ್ಲಿ ಗಗನ ಚುಂಬಿಸುವಂತಹ ಎತ್ತರದ ಜೋಡಿ ಗಗನಮಲ್ಲಿಗೆ ಗಿಡಗಳಿದ್ದವು. ಒಂದರ ಹೆಸರು 'ಅಂಬಿಕಾತನಯ ದತ್ತ'. ಇದನ್ನು ನೆಟ್ಟವರು ದ. ರಾ. ಬೇಂದ್ರೆ. ಇನ್ನೊಂದರ ಹೆಸರು 'ಕಾರಂತ'. ಇದನ್ನು ನೆಟ್ಟವರು ಶಿವರಾಮ ಕಾರಂತರು. ಭಾರತದಲ್ಲಿ ವನಮಹೋತ್ಸವ ಆರಂಭಿಸುವ ಮೊದಲೇ ಹಲಸಂಗಿಯಲ್ಲಿ ವನಮಹೋತ್ಸವದ ಆಚರಣೆಯಾಗಿತ್ತು ಎಂದೇ ಹೇಳಬಹುದು. ನನ್ನಂತ ಅನೇಕರಿಗೆ ಆ ಗಿಡಗಳು ರೂಪಕ, ಪ್ರತಿಮೆಯಂತೆ ಕಾಡಿವೆ. ಸುಗಂಧದ ಪರಿಮಳ ಬೀರುತ್ತಲೇ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ಆ ಗಿಡಗಳು ಊರು ಪ್ರವೇಶಿಸಿದಂತೆ ಇನ್ನಿಲ್ಲದಂತೆ ಮೋಹಿಸಿಬಿಡುವ ಗುಣ ಹೊಂದಿದ್ದವು ಮತ್ತು ಅನೇಕ ಆಂದೋಲನ, ಸತ್ಯಾಗ್ರಹ, ಚಳುವಳಿಗಳಿಗೆ, ಚಟುವಟಿಕೆಗಳಿಗೆ ಸಾಕ್ಷಿಯಾಗಿದ್ದವು. ದೀಪಾವಳಿ ಹಬ್ಬ ಬಂತೆಂದರೆ ವಾಹನಗಳಿಗೆ, ಅಂಗಡಿಗಳ ಬಾಗಿಲುಗಳಿಗೆ ಶೃಂಗಾರವಾಗುತ್ತಿದ್ದ, ನಾಡಹಬ್ಬದ ಸಮಯದಲ್ಲಿ ಅನುದಿನವೂ ಗಗನಮಲ್ಲಿಗೆ ಹೂವಿನಿಂದ ಪೋಣಿಸಿದ ಹಾರ ನಾಡದೇವಿ ಕೊರಳಲ್ಲಿ ಕುಸುಮಿಸುತ್ತಿತ್ತು. ಗಾಳಿಗೆ ಉದುರಿದ ಹೂವುಗಳನ್ನೆಲ್ಲ ಅರ್ಧದಷ್ಟು ಕತ್ತರಿಸಿ ಪೀಪಿ ಮಾಡಿಕೊಂಡು ಊದುತ್ತಿದ್ದೆವು. ಇಂದು ಆ ಗಿಡಗಳಿಲ್ಲ. ಆದರೆ ನೆನಪುಗಳು

ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಊರು ಬದಲಾಗಿದೆ; ಜನರು ಬದಲಾಗುತ್ತಿದ್ದಾರೆ. ಆಗಲಿ, ಬದಲಾವಣೆ ಜಗದ ನಿಯಮ. ಜೊಳ್ಳುಗಳು ತೂರಿಹೋಗಿ ಗಟ್ಟಿ ಕಾಳುಗಳು ಉಳಿದೇ ಉಳಿಯುತ್ತವೆ.

ಸರಿಯಾಗಿ ಊರ ಚಾವಡಿ ಮುಂದಿನ ಗಗನಮಲ್ಲಿಗೆ ಗಿಡದಲ್ಲಿ ರೇಡಿಯೋ ಒಂದನ್ನು ಕಟ್ಟುತ್ತಿದ್ದರು. ಅದು ದಣಿವರಿಯದೇ ಹಾಡುತ್ತಿತ್ತು. ಸಂಸ್ಕೃತ, ಹಿಂದಿ, ಕನ್ನಡದಲ್ಲಿ ಇನ್ನಿಲ್ಲದಂತೆ ದೇಶದ ಸುದ್ದಿ, ಚಳುವಳಿಗಳ ಸುದ್ದಿ, ಸ್ವಾತಂತ್ರ್ಯ ಹೋರಾಟದ ಸುದ್ದಿ ಹೀಗೆ ಹಲವು ಸುದ್ದಿಗಳನ್ನು ಸಾರುತ್ತಿತ್ತು. ಅನೇಕ ಜೀವಗಳಿಗೆ ಜೋಗುಳದಂತೆ ಸಂತೈಸಿದ್ದೇ ಗಗನಮಲ್ಲಿಗೆ ಗಿಡದ ಮೇಲಿನ ಆ ರೇಡಿಯೋ! ಈ ಚಾವಡಿ ಮುಂದಿನ ಗಗನಮಲ್ಲಿಗೆ ಗಿಡದ ಮುಂದೆ ಗಜಗಳನ್ನು ಕಟ್ಟುತ್ತಿದ್ದರು. ಇವುಗಳ ಪಾಲನೆ ಪೋಷಣೆಯನ್ನು, ಗ್ರಾಮ ಪಂಚಾಯತ್ ಕಟ್ಟಡ ಪಕ್ಕದ ಮನೆಯ 'ಜಟ್ಟಿಂಗರಾಯ ಥೊಂಡಿಬಾ ಗಜಾಕೋಶ' ನೋಡಿಕೊಳ್ಳುತ್ತಿದ್ದರು. ಇವತ್ತಿಗೂ ಅವರ ಮನೆಯ ಸದಸ್ಯರ ಜೊತೆ ನಾವು ಮಾತನಾಡಬಹುದು. ಅವರಿಗೆ 'ಗಜಾಕೋಶ' ಎಂಬ ಕುಟುಂಬದ ಹೆಸರು (Surname) ಮಾತ್ರ ಆ ನೆನಪಿಗಾಗಿ ಉಳಿದಿದೆ. ಸಾಕ್ಷಿಗೆ ಎಂಬಂತೆ ಗಜಗಳನ್ನು ಕಟ್ಟುವ ಕಲ್ಲುಗಳು ಮಾತ್ರ ಅನಾಥವಾಗಿ ಬಿದ್ದಿವೆ.

ಹೊರ ಸಂಚಾರದ ಸಮಯದಲ್ಲಿ ಅಕಸ್ಮಾತಾಗಿ ವಿಜಯಪುರದ ಆದಿಲ್ ಶಾಹಿ ಹಲಸಂಗಿಗೆ ಬಂದಿದ್ದು, ಊರಿನ ಸುಂದರವಾದ ಪರಿಸರ ಅವನನ್ನು ಇನ್ನಿಲ್ಲದಂತೆ ಸೆಳೆದ ಕಾರಣ ಸುಮಾರು ೧೬೨೭ ರಿಂದ ೧೬೭೨ರಲ್ಲಿ ಹಲಸಂಗಿ ಊರಿನ ಸುತ್ತಮುತ್ತ ಚೌಕಾಕಾರದ ಕೋಟೆ ಕಟ್ಟಿದ್ದ. ಜಕ್ಕಮ್ಮನ ಗುಡಿಯ ಮಹಿಮೆ ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಇನ್ನು ಜಾನಪದ, ಲಾವಣಿ ರತ್ನ ಖಾಜಾಭಾಯಿ ಪದ ಹಾಡುತ್ತಿದ್ದರೆ ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿ ರಿಂಗಣಿಸಿತ್ತು ಎಂದರೆ ಸುಮ್ಮನೆ ಮಾತಲ್ಲ ಮತ್ತು ಹೀಗೆ ಎಂದು ಹೇಳಲು ಸಾಧ್ಯವಿಲ್ಲ. ಏಳಗಿ, ಅಣಚಿ, ಹಿಂಗಣಿ, ನಂದ್ರಾಳ, ಭತಗುಣಕಿ, ಅಡವಿ ವಸ್ತಿಯ ಜನಗಳ ಎದೆ ತುಂಬಿದ ಲಾವಣಿ, ಜನಪದ ಗೀತೆಗಳು ದೇವಲೋಕದಿಂದ ಇಳಿದು ಬಂದ ಸಂಗೀತ ಎಂದೇ ಭಾವಿಸಲಾಗಿತ್ತು ಎಂದರೆ ತಪ್ಪಾಗಲಾರದು.



ಇಂದಿಗೂ ಹಾಡುವ ಮೋದಿನಸಾಹೇಬ ನದಾಫ್ ಒಬ್ಬ ಸೂಫಿ ಸಂತರಂತೆ ಕಾಣುತ್ತಾರೆ. ಖಾಜಾಭಾಯಿ ಅವರ ಜೊತೆಗೆ ಮೌಲಾ ರಾಮಚಂದ್ರಪ್ಪ ವಾಲೀಕಾರ ಅವರು ಸೂರು ಹಿಡಿದರೆ ದೇವರೇ ಮರುಳಾಗುವ ಚಿತ್ತ, ಧ್ಯಾನಸ್ಥ ಸ್ಥಿತಿ ನಿರ್ಮಿಸುತ್ತಿದ್ದರಂತೆ. 'ಸೂರುಗಾರ' ಅಂತ ದೊಡ್ಡ ಹೆಸರು ಮಾಡಿದ್ದರು. ಮೌಲಾ ರಾಮಚಂದ್ರ ಅಂತ ಖ್ಯಾತಿ ಹೊಂದಿದ್ದರು. ಇದು ಅಪ್ಪಟ ಎಲೆಮರೆ ಕಾಯಿಯಂತೆ ಹೊಳೆದ ಗ್ರಾಮೀಣ ಪ್ರತಿಭೆ. ರಾಮಚಂದ್ರಪ್ಪ ವಾಲೀಕಾರ ಅವರ ಹಾಡು ಆಲಿಸಿ ಮನಕರಗಿ ಹೋದ ಕಡಲ ತೀರದ ಭಾರ್ಗವ, ಜ್ಞಾನಪೀಠ ಪುರಸ್ಕೃತರಾದ ಶಿವರಾಮ ಕಾರಂತರು ಪುತ್ತೂರಿಗೆ ಕರೆದುಕೊಂಡು ಹೋಗಿ ಹಾಡಿಸಿದ್ದರು ಎಂದರೆ ಸುಮ್ಮನೇನಾ? ಚರ್ಮವನ್ನು ಹದ ಮಾಡಿ ಡಪ್ ಕಟ್ಟಿಕೊಡುವ, ಗಜಗಳನ್ನು ಪಾಲನೆ ಮಾಡಿ ಪೋಷಿಸಿದ ಜಟ್ಟಿಂಗರಾಯ ಥೊಂಡಿಬಾ ಗಜಾಕೋಶ ಮಾತ್ರ ಅವರ ಜೊತೆಗಿರುವ, ಮಾತು ಮರೆತ ಭಾವುಕ.

ಇದೇ ಚಾವಡಿ ಮುಂದೆ ಇಂದಿಗೂ ಕುಳಿತುಕೊಂಡಿರುವ ಒಂದು ಪುಟ್ಟ ಮೂಕ ಹಕ್ಕಿ ಕಲ್ಲಪ್ಪ ದೊಡ್ಡಪ್ಪ ವಾಲೀಕಾರ ಹಾಡುತ್ತಿದ್ದರು ಎಂದರೆ ಯಾರೂ ನಂಬಲು ಸಾಧ್ಯವಿಲ್ಲ. ಅನುಭಾವ ಸಂತಕವಿ ಮಧುರಚೆನ್ನರ ಆತ್ಮಿಕ ಮಾದಣ್ಣ ಓಲೇಕಾರ್, ಅದಮ್ಯ ಅಪ್ಪಟ ದೇಶಭಕ್ತ,ಲಾವಣಿ ಕರ್ಣ ಪಿ. ಧೂಲಾ ಸಾಹೇಬ, ಕಥೆಗಾರ, ಚಿತ್ರಕಲಾವಿದ, ಸ್ವಾತಂತ್ರ್ಯ ಹೋರಾಟಗಾರ ರೇವಪ್ಪ ಕಾಪಸೆ, ಖಾದಿಪ್ರಿಯ, ಮಹಾನ್ ಸಾಹಿತ್ಯ ಚೇತನ ಸಿಂಪಿ ಲಿಂಗಣ್ಣ ಇವರೆಲ್ಲಾ ಯಾವ ಫಲಾಪೇಕ್ಷೆಗಳು ಇಲ್ಲದ ಸಂತರ ಕುಲದ ಜೀವಗಳು. ಇಠೋಬರಾಯ ಗುಡಿ ಮುಂದಿನ ಹುಣಸಿಮರದ ಕೆಳಗೆ ಕುಳಿತುಕೊಂಡ ಹಿರಿಯ ಜೀವ ದಶರಥ ಕಲ್ಲಪ್ಪ ಹಂಜಗಿ ಅವರೊಂದಿಗೆ ಮಾತಾದರೆ ಇಂದಿಗೂ

**॥ ಮಂದಿರದೊಳಗಿನ ಚೆಂದುಳ್ಳ**
**ಪ್ರಿಯನ ನಾ ನೋಡಿದೆ;**
**ಅಂದಿಗೂ ಇಂದಿಗೂ**
**ಅಂತರಂಗದ ಪಾಂಡುರಂಗ ಜ್ಞಾನದಲಿ॥**

***

**॥ ಧರ್ಮವೂ ಬಿಡಬೇಡಿ**
**ಕರ್ಮವೂ ಹಿಡಿಬೇಡಿ**
**ಧರ್ಮವೂ ಕೇಳಲೂ**
**ಉಸ್ತಾದ್ ಬರತ್ತಾನ**
**ನೀವು ನಿರಾಳಾಗಿರಿ॥**

***

**॥ ತತ್ವಸೊಲ್ಲ ಗೊತ್ತು ಮಾಡು**
**ಹೊತ್ತಗಳಿಗೆ ಕಳೆಯುವುದು ವ್ಯರ್ಥ ಯಾಕೆ ಕತ್ತೆ ॥**
**॥ ಕತ್ತಿ ಹೊರುವಟ್ಟು ಪುಸ್ತಕ ನಿತ್ಯ ಓದಿದರು**
**ಹೊತ್ತು ಕಳೆಯುವುದು ನೋಡು ॥**

ಅವರ ಧ್ವನಿಯ ಪ್ರತಿಧ್ವನಿ ಕಾಣಬಹುದು.ಇಂದಿಗೂ ಮುಂದೆ ಕುಳಿತರೆ ಹಲಸಂಗಿ ಹಿರಿಯ ಜೀವಗಳು ಚಳುವಳಿಗಳ ಕುರಿತು ಮಾತನಾಡುತ್ತಾರೆ. ಇವರೆಲ್ಲರನ್ನೂ ಹೊತ್ತ ನೆಲ ಹಲಸಂಗಿ ಎಂಬ ಕನ್ನಡ ದೇಶದೊಳ್ ಮೆರೆದ ನಾಡು ಕನ್ನಡ ನಾಡಿನ ಒಂದು ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ ಕೇಂದ್ರವಾಗಿತ್ತು. ಹಲಸಂಗಿ ಭೂಮಿ ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ ಹೀಗೆ ವಿಶೇಷ ರೀತಿಯಲ್ಲಿ ಸಕ್ರಿಯವಾಗಿ ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿನ ಸೇವೆ, ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿತ್ತು.

❑

## ೩. ಊರು ಬಾ ಎಂದು ಕರೆಯುತ್ತಿದೆ

**॥ ಇಂದಿನೀ ಗೆಳತನವು ಹಿಂದಿನಿಂದಲೆ ಬಂತು**
**ಮುಂದೆ ಜನ್ಮಾಂತರದಿ ಸಾಗಿ ಸಾಗಿ**
**ಹೊಂದಿರುವ ಪಕಳೆಗಳ ಹಿಂದೆ ಕೇಸರದಿಂದ**
**ಅನೇಕ ಬೀಜದ ಏಕಫಲವು ಆಗಿ॥**

ಡಾ. ಶಿವರಾಮ ಕಾರಂತರು ಹಲಸಂಗಿಯನ್ನು ನವಿಲೂರು ಎಂದು ಕರೆದರೆ, ಹಲಸಂಗಿ ಗೆಳೆಯರ ಬಳಗ ಚಡಚಣ, ಲೋಣಿ, ಸಾಲೋಟಗಿ, ಸೋಲಾಪುರ, ಲಚ್ಯಾಣ ಮತ್ತು ಪಾಂಡಿಚೇರಿ, ಸಾಹಿತ್ಯ, ಜಾನಪದ, ಕರಿಕಲ್ಲಿನಕೋಟೆ, ಆಶ್ರಮ, ಮಾತಾರವಿಂದರ ಅವಗಾಹನೆಯಲ್ಲಿ ಮೌನ ಆವರಿಸಿಕೊಂಡುಬಿಟ್ಟಿದ್ದ ಹಸಿರ ಸಿರಿಯ ಚೆಲುವು, ಆಧ್ಯಾತ್ಮಿಕ, ಸಾಹಿತ್ಯಿಕ ಮತ್ತು ಜನಪದ ಸಾಧನೆ, ಏರಿದ ಎತ್ತರ ಊರಿನ ಮೋಹ ಮತ್ತಷ್ಟು ಇನ್ನಷ್ಟು ಸೆಳೆತವನ್ನುಂಟುಮಾಡುತ್ತದೆ. ಹೊಸ ಕನ್ನಡ ಸಾಹಿತ್ಯ ಇತಿಹಾಸವನ್ನು ಮೆಲುಕು ಹಾಕಿದವರು, ಹಾಕುವವರು ಹಲಸಂಗಿಯನ್ನು ಮರೆಯುವಂತಿಲ್ಲ. ಇನ್ನು ಕೋಟೆಯ ಐತಿಹ್ಯ ಅದ್ಭುತ. ಊರ ಹಿತಕ್ಕಾಗಿ ತನ್ನನ್ನು ತಾನು ಕೋಟೆಗೆ ಸಮರ್ಪಿಸಿಕೊಂಡ ಜಕ್ಕವ್ವಳ ಸಾಕ್ಷಿಗೆ ಜಕ್ಕವ್ವನ ಗುಡಿಯೇ ಒಂದು ನಿದರ್ಶನವಾಗಿದೆ. ಅವಳು 'ಜಕ್ಕವ್ವ ಜಾಣೆ' ಎಂಬ ಜಾನಪದ ಕೋಲುಪದದಲ್ಲಿ ಇನ್ನೂ ಜೀವಂತವಾಗಿದ್ದಾಳೆ.

**॥ ತಂದೇ ಕಣ್ಣು ತೆರೆ**
**ನಿನ್ನ ನೆಲೆ ಹತ್ತದೆ ಬದುಕಲಿಕ್ಕೆ ಸಾಧ್ಯವಿಲ್ಲ**

**ನಿನಗೆ ಹೃದಯದ ಕೂಗು ಸಾಕಾಗದೇನು?**
**ಮಗುವಾಗಿ ಕೂಗುವೆ ತಾಯಾಗಿ ಕಾಯ ಬಾ॥**

ನನ್ನೊಳಗೆ ಯಾವ ಮೋಹವು ಉಳಿದಿಲ್ಲ. ಆದರೆ ಊರು ಹೋಗು ಅಂತದೆ; ಕಾಡು ಬಾ... ಅಂತದೆ, ಅಂತಲ್ಲ. ಯಾಕೋ ಇತ್ತೀಚಿಗೆ ಊರು ತುಂಬಾ ಕಾಡುತ್ತದೆ. ಹೊತ್ತಲ್ಲದ ಹೊತ್ತಲ್ಲಿ ಧುತ್ತನೆ ಎದುರಾಗಿ, ಕಣ್ಣಲ್ಲಿನ ನೀರು ಕೆನ್ನೆಗೆ ಸರಬರಾಜಾಗಿ, ಊರಲ್ಲಿ ಇರಬೇಕು ಅಲ್ಲೇ ಇರಬೇಕು ಅಂತ ಯಾವುದೋ ಅಮೂರ್ತ ಭಾವವೊಂದರ ಒತ್ತಡ. ಅನೇಕ ಪ್ರಶ್ನೆಗಳನ್ನು ಕೇಳಲು, ಮಾತು ಮರೆತು ಮೌನಕ್ಕೆ ಜಾರಿಸುತ್ತದೆ.

ಊರು ಬದಲಾಗಿದೆಯಾ? ಇಲ್ಲ. ಜನರು ಬದಲಾಗಿರಬಹುದು.ಎಲ್ಲರೂ ಅರ್ಥದ ಬೆನ್ನು ಹತ್ತಿದ್ದಾರಾ? ಇಲ್ಲ. ಕೆಲಸದ ಒತ್ತಡದಲ್ಲಿರಬಹುದು.ಪೂರ್ವಿಕರು ಬಾಳಿ, ಬದುಕಿದ ಮನೆಗಳು, ಓದಿದ ಶಾಲೆಗಳು, ಸ್ಮೃತಿಗಳನ್ನು ಠೇವಣಿ ಇಟ್ಟುಕೊಂಡ ಜಾತ್ರೆ, ಮೊಹರಂ, ಕಾರ್ತಿಕ ಮಾಸ, ಹಲವು ಹಬ್ಬಗಳ ಆಚರಣೆ, ಆಶ್ರಮದ ಪ್ರಶಾಂತ ಪರಿಸರ, ಅರಳುವ ನಿತ್ಯಮಲ್ಲಿಗೆ ಹೂವುಗಳು, ಇನ್ನು ಪ್ರತಿ ಗುರುವಾರದ ಸಂತೆ ಹೀಗೆ ಈ ಹಾಳಾದ ಮನಸ್ಸು ಒಂದೇ ಸವನೆ ಊರಿನ ಕುರಿತಾದ ನೆನಪಿನ ಅಲೆಗಳ ಭೋರ್ಗರೆತಕ್ಕೆ ಸಿಲುಕಿಸುತ್ತದೆ.

ಸಾಲು ಸಾಲು ಜಂತಿಮಣ್ಣಿನ ಮನೆಗಳು. ಮೊದಮೊದಲು ಮನೆ ಮನೆಗಳ ತುಂಬಾ ಬಡತನ. ಖಾಲಿ ಹೊಟ್ಟೆಗಳ ಧರಣಿ. ಮಳೆ ಇಲ್ಲ, ಬೆಳೆ ಇಲ್ಲ. ಶೇಂಗಾ ತಿಂದು ಹೊಟ್ಟೆ ತುಂಬಿಸಿಕೊಳ್ಳುವ ಮಂದಿ. ಅಲ್ಲಲ್ಲಿ ನಿಂಬೆ, ಕಬ್ಬು ಬೆಳೆಯುವ ರೈತ. ಇಂದು ಭಾಗಶಃ ಬಾರಿ ಹಣ್ಣು, ದ್ರಾಕ್ಷಿ, ಅರಿಸಿನ, ರೇಷ್ಮೆ ಹೀಗೆ ಅನೇಕ ಬಗೆಯ ಹಣ್ಣು, ತರಕಾರಿ, ಹೂವು ಬೆಳೆಯುತ್ತಿದ್ದಾರೆ. ಕಾರುಣ್ಣಿಮೆ ದಿನ ಸಂಭ್ರಮವೇ ಸಂಭ್ರಮ. ಎತ್ತುಗಳ ಘಲ್ ಘಲ್ ಘಂಟೆ ಸದ್ದು. ಇಂದು ಟ್ರ್ಯಾಕ್ಟರ್‌ಗಳು ಬಂದಿವೆ. ಅದರಲ್ಲಿ ಅನುಕೂಲಕ್ಕೆ ಒದಗುವ ಚಿಕ್ಕ ಟ್ರ್ಯಾಕ್ಟರ್‌ಗಳು. ಕಾಂಕ್ರೀಟ್ ಬಿಲ್ಡಿಂಗ್‌ಗಳು.

ಊರಿನ ಹತ್ತಿರ ಬಂದ ಪೆಟ್ರೋಲ್ ಬಂಕ್‌ಗಳು, ದುರಸ್ತಿ ಆದ ರಸ್ತೆಗಳು. ದುರಂತವೆಂದರೆ ಅಪಘಾತದಲ್ಲಿ ಮೃತಪಟ್ಟ ಗೆಳೆಯರ ನತದೃಷ್ಟತನ ನಮ್ಮೊಳಗೆ



ಅಪಾರವಾಗಿ ವೇದನೆಗೆ ದೂಡುತ್ತದೆ. ಆಧುನಿಕ ಶೈಲಿಗೆ ಪ್ರಭಾವಿತರಾದ ಯುವಕರ ಕುರುಚಲು ಗಡ್ಡ, ತರಹೇವಾರಿ ಕಟಿಂಗ್, ಕಣ್ಣಿಗೆ ಚಸ್ಮಾ, ಅಂಟಿಸಿಕೊಳುವ ಸುಗಂಧದ್ರವ್ಯದ ಘಾಟು. ನಾಡಿನಾದ್ಯಂತ ಓದಲುಹೋದ ಯುವಕ, ಯುವತಿಯರ ಬೆನ್ನಿಗೆ ಅಂಟಿಕೊಂಡ ಲ್ಯಾಪ್ಟಾಪ್, ಕಾಲಿಗೆ ಬಂಡೆಯಂತ ಬೂಟುಗಳನ್ನು ಹಾಕಿಕೊಂಡು ಆಗಾಗ ಊರಿಗೆ ಬಂದು ಹೋಗುವವರ ಖಯಾಲಿ ಮಾತ್ರ ಸೆಳೆಯುವಂತದ್ದು. ಅಂಗೈಯಲ್ಲಿ ಸ್ಮಾರ್ಟ್ ಫೋನ್‌ಗಳ ಸಖ್ಯ. ಆಧುನಿಕ ಬಗೆಯ ವ್ಯಾಪಾರ, ವ್ಯವಹಾರಗಳು. ಬದಲಾದ ರಾಜಕೀಯ, ರಾಜಕೀಯ ರೀತಿ, ರಿವಾಜುಗಳು.

ಆಧ್ಯಾತ್ಮಿಕ ಬೆಳಕನ್ನು ಚೆಲ್ಲಿದ ಸಾಧಕರು. ಜನಪದ, ಲಾವಣಿ, ಹಂತೀ ಪದಗಳು, ಗಿಗೀ ಪದಗಳು, ಡೊಳ್ಳಿನ ಹಾಡುಗಳು, ಅಲಾಯಿ ಪದಗಳು, ರಿವಾಯಿತ್ ಪದಗಳು, ಭಜನೆ ಮಂಡಳಿ, ನಾಟಕ ಹೀಗೆ ಅನೇಕ ಮಹಾಕಾವ್ಯಗಳು ಕಟ್ಟಿ ಹಾಡಿದ ಸಾಮಾನ್ಯರು, ಅಸಾಮಾನ್ಯರು. ಊರ ಗೆಳೆಯರ ಬಳಗ, ಊರನ್ನು ಸುತ್ತುವರೆದ ಆದಿಲ್ ಶಾಹಿ ಕಟ್ಟಿಸಿದ ಐತಿಹಾಸಿಕ ಕಲ್ಲಿನಕೋಟೆ, ನಾಡತಾಯಿ ಹಬ್ಬದ ಆಚರಣೆ. ನವಿಲುಗಳ ಕೂಗು, ಶ್ರೀಗಂಧದ ಬೀಡು. ಊರಿಗೆ ಬರಲು ಕಾತುರದಿಂದ ಕಾಯುತ್ತಿದ್ದ, ಸಾಕಷ್ಟು ದಿನ ನೆಲೆಸಿದ ಪ್ರಖ್ಯಾತ ಸಾಹಿತಿಗಳು. ದ. ರಾ. ಬೇಂದ್ರೆ, ಶಿವರಾಮ ಕಾರಂತ, ಹಾ. ಮಾ. ನಾಯಕ್, ಸಿಂಪಿ ಲಿಂಗಣ್ಣ, ರಂ. ಶ್ರೀ ಮುಗಳಿ, ವಿ. ಕೃ. ಗೋಕಾಕ ಹೀಗೆ ಅನೇಕ ದಿಗ್ಗಜರನ್ನೆಲ್ಲ ಸೋಜಿಗದಂತೆ ಸೆಳೆದ ಊರು ಹಲಸಂಗಿ. ಅಲ್ಲದೆ ಎಂದೋ ಬಂದು ಹೋದ ಚಿತ್ರನಟ ಅನಂತನಾಗ್ ಅವರ ಬಗ್ಗೆ ನನ್ನ ಅಜ್ಜಿ ಕತಿ ಮಾಡಿ ಹೇಳುತ್ತಿದ್ದ ನೆನಪು ಇನ್ನೂ ಸ್ಮೃತಿಪಟಲದಲ್ಲಿ ನೆಲೆಯಾಗಿದೆ.

ಇಡೀ ನಾಡಿನ ಗಮನ ಸೆಳೆದ ಮಧುರಚೆನ್ನ, ಸಿಂಪಿ ಲಿಂಗಣ್ಣ, ಪಿ. ಧೂಲಾ, ಮಾದಣ್ಣ ಓಲೇಕಾರ, ಕಾಪಸೆ ರೇವಪ್ಪ, ಜೀವರಾಜ್ ಜೋಶಿ, ಗುರುಪಾದಪ್ಪ ಜೀರಂಕಲಗಿ, ಶಿವಲಿಂಗಪ್ಪ ಗುಣಕಿ, ಅಂಕಲಗಿ ದುಂಡಪ್ಪ, ಖಾಜಾಭಾಯಿ, ರಾಮಚಂದ್ರ ವಾಲಿಕಾರ್, ಸರಿಯಾಗಿ ನಮ್ಮ ಮನೆಯ ಮುಂದಿನ ಮನೆಯಲ್ಲಿದ್ದ ಹಲಸಂಗಿ ಗಾಂಧೀ ರಾಘಣ್ಣ ಸುರಪುರ, ಇತ್ತೀಚೆಗೆ ನಮ್ಮನ್ನು ಅಗಲಿದ ಪುರುಷೋತ್ತಮ ಗಲಗಲಿ, ಗೆಳೆಯರ ಬಳಗ, ಸಾಹಿತ್ಯ, ಜನಪದ

ಸಾಹಿತ್ಯ ಈಗಲೂ ತಮ್ಮ ತಾಜಾತನದಿಂದ ಗಮನ ಸೆಳೆಯುತ್ತವೆ. ೧೯೪೪ರಲ್ಲಿ ರಬಕವಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜನಪದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿ ಸಿಂಪಿ ಲಿಂಗಣ್ಣನವರು ಆಯ್ಕೆಯಾದದ್ದು ಮತ್ತು ೧೯೭೨ರಲ್ಲಿ ಕೊಪ್ಪಳದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮನ್ನಣೆ ಪಡೆದಿದ್ದು – ಹೀಗೆ ಒಟ್ಟು ಸಾಧನೆಗೆ ಹಲಸಂಗಿ ಊರಿನ ಗೌರವಕ್ಕೆ ದೊರೆತ ಮನ್ನಣೆಯಾಗಿದೆ.

ಇನ್ನು ದಶಕಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದ ವಡಗೇರಿ ಮಾಸ್ತರ (ನಬಿ ಪಟೇಲ್ ವಡಗೇರಿ). ಜಾತಿ, ಮತ, ಧರ್ಮಗಳ ಭೇದವಿಲ್ಲದ ಊರಿನಲ್ಲಿ ವಡಗೇರಿ ಮಾಸ್ತರರನ್ನು, ಮಲ್ಲಯ್ಯನ ಗುಡಿಯಲ್ಲಿ ತುಲಾಭಾರ ಮಾಡಿದ್ದು ಊರಿನ ಭಾವೈಕ್ಯತೆಗೆ ಸಾಕ್ಷಿಯಾಗಿದೆ ಮತ್ತು ವಿದ್ಯಾರ್ಥಿಗಳು ತಮ್ಮ ಗುರುವನ್ನು ತೂಗಿದ್ದು ಇತಿಹಾಸದಲ್ಲಿ ಇದೇ ಮೊದಲೇನೋ... (ಆ ಕಾಲದಲ್ಲಿ ಅಂದರೆ ೧೯೬೩ರಲ್ಲಿ ಇಂದಿರಾಗಾಂಧಿ ಮತ್ತು ಎಸ್. ನಿಜಲಿಂಗಪ್ಪನವರನ್ನು ಬಂಗಾರದಿಂದ ತೂಗಿದ್ದು ವಿಜಯಪುರ ಜನತೆ) ತುಲಾಭಾರ ಮಾಡಿ ಸಂಭ್ರಮ ಪಟ್ಟ ಊರಿನ ಜನಕ್ಕೆ ಆಶ್ಚರ್ಯ ಕಾದಿತ್ತು. ತುಲಾಭಾರದಲ್ಲಿನ ಹಣವನ್ನು ಮುಟ್ಟದೆ ಪ್ರತಿ ವರ್ಷ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ಕೊಡಿ ಎಂದು ಮರಳಿ ಮರಳಿಸಿ ಧನ್ಯರಾದರು. ಈ ಗುಣ ಕಲಿಸಿದ್ದು ಇದೆ ಊರು ಎಂದು ಗದ್ಗದಿತರಾದದ್ದು ಆದರ್ಶವಾಗಿದೆ. ಇದಕ್ಕೆ ಮೂಕವಿಸ್ಮಿತರಾದವರು ವಿಜಯಪುರದ ಸಿದ್ದೇಶ್ವರ ಸ್ವಾಮೀಜಿಗಳು, ಗುರುಲಿಂಗಪ್ಪ ಕಾಪಸೆ ಮತ್ತು ಊರ ಜನತೆ.ಅರವಿಂದರ ಆಶ್ರಮ, ಶ್ರೀ ಅರವಿಂದ ಕಾಲೇಜು, ಸಾಂಸ್ಕೃತಿಕ ಕಾರ್ಯಕ್ರಮಗಳು, ಒಂದೇ ಎರಡೇ. ಗುರುಗಳು, ಹಿರಿಯರು, ಸಾಧಕರು... ಏನು ಅಂತ ಹೇಳುವುದು, ಎಷ್ಟು ಅಂತ ಹೇಳುವುದು, ಎಲ್ಲವೂ ಅವ್ಯಕ್ತ! ಈ ಹಲಸಂಗಿ ಎಂಬ ಊರು ಇನ್ನಿಲ್ಲದಂತೆ ಕೈ ಬೀಸಿ ಕರೆಯುತ್ತದೆ. ಹುಚ್ಚತನವೋ? ಹಚ್ಚಿಕೊಂಡವನೋ? ತಿಳಿಯುತ್ತಿಲ್ಲ. " ಯಾರು ನಮ್ಮ ಜೊತೆ ಇರುತ್ತಾರೆ; ಅವರೇ ನಮ್ಮವರು. ಎಲ್ಲಿ ಇರುತ್ತೇವೆ; ಅದೇ ನಮ್ಮ ಊರು " ಅಂತ ಎಷ್ಟೇ ಸಮಾಧಾನ ಹೇಳಿದರು, ಕೇಳದ ಮನಸ್ಸಿಗೆ ಹೇಗೆ ಹೇಳುವುದು ನೀವೇ ಹೇಳಿ?



ಊರ ಹತ್ತಿರದ ಹಳ್ಳ ಬತ್ತಿದೆ, ಬಾವಿಗಳಿಗೆ ನೀರಿಲ್ಲ, ಮಳೆಯಿಲ್ಲ ಅಂದರೆ ಇಲ್ಲಿ ಎದೆಯಂಗಳ ಒಣಗಿದಂತೆ ಭಾಸವಾಗುತ್ತದೆ. ಎಲ್ಲರನ್ನೂ, ಎಲ್ಲವನ್ನೂ ಗೌರವಿಸುವಂತೆ ಕಲಿಸಿದ ಪುಣ್ಯಭೂಮಿ ಹಲಸಂಗಿ. ಆದರೆ ಎಲ್ಲೇ ಹೋದರೂ, ಏನೇ ಮಾಡಿದರೂ ಸಮಾಧಾನವಿಲ್ಲ ಎನ್ನುವ ಮಾತು ಮಾತ್ರ ಅಕ್ಷರಶಃ ಸತ್ಯವಾಗಿದೆ. ತುಂಬಾ ಬಾರಿ ಹುಟ್ಟಿದ, ಬಾಲ್ಯ ಕಳೆದ ಊರು ಬಿಟ್ಟು ಬದುಕುವುದು ಅರ್ಥವಿಲ್ಲ ಎನಿಸುತ್ತದೆ. ಅಂತರ್ಮುಖಿಯಾಗಿ ಹೀಗೆಲ್ಲ ಯೋಚಿಸಿದರೆ ಸರಿ ಆದರೆ ಪ್ರಜ್ಞಾವಂತ ಸ್ಥಿತಿಯಲ್ಲೇ ಭಾವುಕನನ್ನಾಗಿಸುವ ಊರಿನಲ್ಲಿ ಪೂರ್ವಿಕರ ಉಸಿರಿದೆ. ಮಾತಲ್ಲಿ ಹೇಳಲಾಗದಷ್ಟು ಪುರಾವೆಗಳು ಧ್ಯಾನಸ್ಥ ಮಟ್ಟಕ್ಕೆ ಉಸಿರು ತುಂಬುತ್ತವೆ. ಸುಮ್ಮನೆ ದಿಗಂತವನ್ನು ದಿಟ್ಟಿಸುತ್ತಾ ಕುಳಿತವನ ಕಣ್ಣಲ್ಲಿ ನೀರು ತುಂಬಿ ಹಜಾರವೆಲ್ಲ ಕಲಸಿದಂತೆ ಕಾಣುತ್ತದೆ.

❑

# ೪. ಹಲಸಂಗಿ ಗೆಳೆಯರು

## ನನ್ನ ನಲ್ಲ ಮಧುರಚೆನ್ನ (೧೯೦೩–೧೯೫೩)

ನವೋದಯ ಕಾಲಘಟ್ಟದ ಮಹತ್ವದ ಕವಿಗಳಲ್ಲೊಬ್ಬರಾದ ಹಲಸಂಗಿಯ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿ ಅವರು ಮುಲ್ಕೀವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದವರು. ದೇವರ ಚಿಂತನೆಯಲ್ಲಿ ತೊಡಗಿದ, ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಯೋಗಗಳನ್ನು ಸತತವಾಗಿ ನಡೆಸಿದ ಮಧುರಚೆನ್ನರು ಮುಖ್ಯವಾಗಿ ಅನುಭಾವ ಕವಿ. ಅತಿ ಚಿಕ್ಕಂದಿನಿಂದಲೇ ಕವನಗಳನ್ನು ಬರೆದ ಸ್ಪೆನ್ಸರ್, ರಸಲ್, ಟಾಲ್‌ಸ್ಟಾಯ್, ಪರಮಹಂಸ, ವಿವೇಕಾನಂದ, ಅರವಿಂದರ ಪ್ರಭಾವ ಇವರ ಮೇಲೆ ಗಾಢ ವಾಗಿತ್ತು. ವಚನಕಾರರಂತೆ, ಇವರ ಜೀವನಕ್ಕೂ ಇವರ ಬರಹಕ್ಕೂ ಗಾಢ ಸಂಬಂಧವಿರುವುದನ್ನು ಕಾಣಬಹುದು. ಮಧುರಚೆನ್ನ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿ ತಮ್ಮ ಬದುಕು ಮತ್ತು ಬರಹವನ್ನು ರೂಪಿಸಿಕೊಂಡವರು.

ಇವರ ನನ್ನ ನಲ್ಲ ಪ್ರಕಟವಾದದ್ದು ೧೯೩೩ರಲ್ಲಿ. ದೇವತಾ ಪೃಥಿವಿ, ಮಧುರ ಗೀತ, ನನ್ನನಲ್ಲ ಒಂದು ಅನುಭಾವ ಗೀತೆ. ಅಕ್ಕಮಹಾದೇವಿಯ ನೀವು ಕಾಣಿರೆ... ನೀವು ಕಾಣಿರೆ...ಎಂದು ಚೆನ್ನಮಲ್ಲಿಕಾರ್ಜುನನಿಗಾಗಿ ನಡೆಸುವಂಥ ಹುಡುಕಾಟ ಇಲ್ಲಿದೆ. ಇಲ್ಲಿಯ ಹುಡುಕಾಟ ಕಾವ್ಯಸೃಷ್ಟಿಯ ಹುಡುಕಾಟವೂ ಆಗಿ, ಅದರ ಗೂಢತೆಯ ಬಗೆಗೆ ಆಶ್ಚರ್ಯವಿದ್ದ ಹಾಗೆಯೇ, ಅರಿಯಬೇಕೆಂಬ ಛಲವಿದೆ ಎನ್ನುವುದು ಗಮನಿಸಬೇಕಾದ ಸಂಗತಿ. ನನ್ನ ನಲ್ಲವನ್ನು ದೈವ ಮತ್ತು ಕಾವ್ಯ ಎರಡಕ್ಕೂ ಅನ್ವಯಿಸಲಾಗಿದೆ. ಆತನನ್ನು ನಿಸ್ಸೀಮ, ನಿಶ್ಶಬ್ದ ಎನ್ನುವುದರಲ್ಲಿ ಇದು ಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ನನ್ನ ನಲ್ಲ ಕವಿತೆ ದೈವ ಮೀಮಾಂಸೆ ಮತ್ತು ಕಾವ್ಯ ಮೀಮಾಂಸೆ.ಮಧುರಗೀತ, ಗೆಳೆತನವನ್ನು ಕುರಿತ ನೀಳ್ಗವನ. ಪ್ರೇಮ,ಮೋಹ, ಸ್ವಾರ್ಥ ನಿಸ್ವಾರ್ಥ, ಬುದ್ಧಿಭಾವಗಳಿಗೆ ತಾತ್ವಿಕ ಅರ್ಥಗಳನ್ನು ಹುಡುಕುವುದು ಈ ಕವಿತೆ. ದೇವತಾಪೃಥಿವಿ ಎಂಬ ಕವಿತೆಯೂ ಇವರ ಕೃತಿಸತಿಯ ಶಿರೋರತ್ನವಾಗಿದೆ ಎಂದು ಬೇಂದ್ರೆಯವರು ಅಭಿಪ್ರಾಯ ಪಟ್ಟಿದ್ದಾರೆ. ಇದೊಂದು ಪ್ರಾರ್ಥನಾ ಗೀತೆ. ಇಲ್ಲಿ ಭೂಮಿಗೆ ದೈವತ್ವ ಮತ್ತು ತಾಯ್ತನಗಳನ್ನು ಆರೋಪಿಸಲಾಗಿದೆ. ಮಲಗಿರುವ ತಾಯಿಯನ್ನು ಎಬ್ಬಿಸುವ ಮಾತು ಉದ್ದಕ್ಕೂ ಇದ್ದು, ಆಕೆಯಿಂದ ಆಧ್ಯಾತ್ಮಿಕ ಬೆಳಕನ್ನು ಪಡೆಯುವ ಹಂಬಲವಿದೆ. ಇಲ್ಲಿರುವ ಹಸಿವು ಪ್ರೇಮದ ಹಸಿವು, ಜ್ಞಾನದ ಹಸಿವು. ಅನುಭವ ಅನುಭಾವದ ಪ್ರಾಣಶಕ್ತಿ, ಮಂತ್ರಶಕ್ತಿಯಿದೆ. ಪೂರ್ವರಂಗ(೧೯೩೨), ಕಾಳರಾತ್ರಿ(೧೯೩೩), ಬೆಳಗು(೧೯೩೮) ಈ ಗದ್ಯ ಕೃತಿಗಳು ಆಧ್ಯಾತ್ಮಿಕ ಆತ್ಮಕಥನಗಳು. ಅವರ ಮರಣದ ನಂತರ ಪ್ರಕಟವಾದ ಆತ್ಮಸಂಶೋಧನೆ (೧೯೫೪) ಇವರ ಆತ್ಮಚರಿತ್ರೆ. ಈಗ ಪರಿಷ್ಕೃತ ಆತ್ಮಶೋಧ ಮಧುರಚೆನ್ನರ ಅಧ್ಯಾತ್ಮಿಕ ಸಾಧನೆಯನ್ನೇ ಹೇಳುವ ಕೃತಿಯಾಗಿದೆ. ಅಧ್ಯಾತ್ಮದ ಬಗೆಗೆ ವಿವಿಧ ತಾತ್ವಿಕರಿಂದ ಗ್ರಹಿಸಿದ್ದನ್ನು ಮತ್ತು ತಾವು ಕಂಡುಕೊಂಡುದ್ದನ್ನು ಈ ಕೃತಿಯಲ್ಲಿ ಹೇಳುತ್ತಾರೆ.

**ಭಾವಬದ್ಧಿಗಳೆರಡೆ ತಿಳುವಳಿಕೆಗಾಧಾರ**
**ಭಾವಕ್ಕೆ ಬುದ್ಧಿಯೇ ಬಾಹ್ಯ ನೇತ್ರ!**
**ಭಾವಕೊಲಿಯದ ಬುದ್ಧಿ, ಬುದ್ಧಿಗೊಲಿಯದ ಭಾವ**
**ಇಲ್ಲಿ ಕಾಣಯ್ಯ ಸಂದೇಹ ಸೂತ್ರ!**

ನನ್ನ ನಲ್ಲ ಕವಿತೆಯ ಈ ಸಾಲುಗಳೇ ಮಧುರಚೆನ್ನರು ಮೂಲತಃ ಸಂಶೋಧಕರು ಎನ್ನುವುದನ್ನು ಸ್ಪಷ್ಟಪಡಿಸುತ್ತವೆ. ಶಾರದಾ ವಾಚನಾಲಯ(೧೯೨೨), ಹಲಸಂಗಿ ಗೆಳೆಯರ ಗುಂಪು, ಅರವಿಂದ ಮಂಡಲ ಕಟ್ಟಿ ತಮ್ಮ ಸಾಹಿತ್ಯದ ಸಾಂಸ್ಕೃತಿಕ ಚಟುವಟಿಕೆಗಳಿಂದ ಹಲಸಂಗಿಯನ್ನು ನವೋದಯ ಸಾಹಿತ್ಯದ ಒಂದು ಕೇಂದ್ರವನ್ನಾಗಿ ಮಾಡಿದರು.ಮಧುರಚೆನ್ನರು ತಮ್ಮನ್ನು ಅಧ್ಯಾತ್ಮ, ಸಾಹಿತ್ಯ, ಸಂಶೋಧನೆ, ಭಾಷಾಶಾಸ್ತ್ರ, ಜಾನಪದ, ಅನುವಾದ ಹೀಗೆ ಹಲವು ಕಾರ್ಯಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು. ದೇವಾಲಯಗಳು

ಶಾಸನಗಳ ಬಗ್ಗೆ, ಶಿವಶರಣರು ಮತ್ತು ಶರಣ ಸಾಹಿತ್ಯದ ಬಗ್ಗೆ ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ತಮ್ಮ ೨೧ನೇ ವಯಸ್ಸಿನಲ್ಲಿಯೇ ಇವರ ಕನ್ನಡ ಪ್ರಾಚೀನ ಲಿಪಿ ಬೋಧಿನಿ (೧೯೨೪) ಎಂಬ ಪುಟ್ಟ ಕೃತಿಯು ಕನ್ನಡ ಲಿಪಿಯ ಹುಟ್ಟು ಬೆಳವಣಿಗೆಯನ್ನು ಕುರಿತು ಹೇಳುತ್ತದೆ. ನಾಗಚಂದ್ರ ವಿಜಯಪುರ ದವನು ಎಂದು ಆರ್. ನರಸಿಂಹಾಚಾರ್ಯರಿಗೆ ಶಾಸನಾಧಾರದಿಂದಲೇ ತಿಳಿಸಿಕೊಟ್ಟವರು, ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದ ಅರ್ಜುನವಾಡದ ಶಾಸನವನ್ನು ಓದಿದವರು, ಕೇವಲ ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ೧೯೨೩ ರಲ್ಲಿ ವಿಜಾಪುರ ಸಾಹಿತ್ಯ ಸಮ್ಮೇಳನದಲ್ಲಿ ಇವರು ಹಳ್ಳಿಯ ಹಾಡುಗಳು ಎಂಬ ಪ್ರಬಂಧವನ್ನು ಮಂಡಿಸಿದ್ದರು. ಗರತಿಯಹಾಡು, ಮಲ್ಲಿಗೆದಂಡೆ, ಜೀವನ ಸಂಗೀತ ಜಾನಪದ ಕೃತಿಗಳು ಇವರು ಮತ್ತು ಇವರ ಗೆಳೆಯರ ಬಳಗದಿಂದ ಸಂಪಾದಿತವಾದವು. ಇವರು ರವೀಂದ್ರನಾಥ ಠಾಕೂರ್, ಅರವಿಂದ, ಟಾಲ್‌ಸ್ಟಾಯ್ ಕೃತಿಗಳನ್ನು ಅನುವಾಸಿದರೆ ಮಾಡಿ ತಮ್ಮ ಆಧ್ಯಾತ್ಮಿಕ ಸಾಧನೆಗೆ, ಅಧ್ಯಯನಕ್ಕೆ ಪೂರಕವಾಗಿ ಮಾಡಿಕೊಂಡಿದ್ದರು.

ಹಿಂದಿ, ಗುಜರಾತ್, ಇಂಗ್ಲಿಷ್, ಬಂಗಾಲಿ, ಸಂಸ್ಕೃತ ಮೊದಲಾದ ೨೨ ಭಾಷೆಗಳು ಮಧುರಚೆನ್ನರಿಗೆ ಬರುತ್ತಿದ್ದವು ಎಂಬುವುದನ್ನು ಮಾಳವಾಡರು ದಾಖಲಿಸುತ್ತಾರೆ. ಸಮಸ್ತ ಪ್ರಪಂಚದೊಡನೆ ಸಾಮರಸ್ಯದ ಸಾಂಸ್ಕೃತಿಕ ಸಂವರ್ಧನೆಯ ಶಕ್ತಿಯಾಗಿದ್ದರು. ೧೯೨೧ರಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದರೂ ತೃಪ್ತಿಯಾಗದ ಮಧುರಚೆನ್ನರು ಆಂಗ್ಲಭಾಷೆ ಅವಶ್ಯಕತೆ ಅರಿತು ವಿಜಯಪುರದ ಕೊಣ್ಣೂರ ಹನುಮಂತರಾಯರ ಹತ್ತಿರ ಸ್ವತಂತ್ರವಾಗಿ ಇಂಗ್ಲಿಷ್ ಅಭ್ಯಾಸ ಮಾಡಿದರು. ಆಗಲೇ ಹರ್ಡೇಕರ್ ಮಂಜಪ್ಪನವರು ಬರೆದ ರಾಮತೀರ್ಥ ಉಪನ್ಯಾಸಗಳು, ಭಾರತೀಯರ ದೇಶಭಕ್ತಿ, ಖಾದಿ, ಸತ್ಯಾಗ್ರಹ, ಬ್ರಹ್ಮಚರ್ಯ ಮೊದಲಾದ ಪುಸ್ತಕಗಳನ್ನು ಓದಲು ಸಾಧ್ಯವಾಯ್ತು. ಉತ್ತರ ಕರ್ನಾಟಕದಲ್ಲಿ ನವ ಮನ್ವಂತರದ ವಸಂತ ಪ್ರವೇಶಿಸುವ ಕಾಲ ಅದಾಗಿತ್ತು. ಹಲಸಂಗಿ ಗೆಳೆಯರ ಬಳಗ ಕನ್ನಡ ನಾಡು ನುಡಿಯ, ಸ್ವಾತಂತ್ರ್ಯ ಹೋರಾಟದ ಕುರಿತು ಸಕ್ರಿಯರಾಗಿದ್ದರು.

ಮಧುರಚೆನ್ನರೊಳಗೆ ಜೀವಿಸುವ, ಅರಳುವ ಹಾಗೂ ಉದಯಿಸುವ ಕಾರ್ಯ ಮುಖ್ಯ. ನನ್ನ ನಲ್ಲನು ಅಷ್ಟೇ, ಜಗದ ಎಲ್ಲಾ ಅರಿವಿನ ಸಂತರ ನಂತರ ರಾಷ್ಟ್ರೀಯತೆ, ಕರ್ನಾಟಕ ಏಕೀಕರಣದ ಕನಸು, ಜೀವನವೇ ಒಂದು ಯೋಗ ಎಂದು ಸಾರಿದ ರಾಷ್ಟ್ರೀಯವಾದಿ ಅರವಿಂದರಿಗೆ ಒಲಿದಿದ್ದು. ಅವರು ಕೇವಲ ಕವಿಯಾಗಿರಲಿಲ್ಲ ಜೊತೆಗೆ ಆತ್ಮಶೋಧಕರು, ಇತಿಹಾಸ ಸಂಶೋಧಕರು, ಅನುವಾದಕರು, ರಾಮಕೃಷ್ಣ ಪರಮಹಂಸರ ತತ್ವ ಪ್ರತಿಪಾದಕರು, ಶರಣ ತತ್ವದ ಪ್ರತಿಪಾದಕರು, ಅರವಿಂದ ತತ್ವದ ಪ್ರತಿಪಾದಕರು, ಸಮನ್ವಯ ಪ್ರಬಂಧ, ಲಲಿತ ಪ್ರಬಂಧ, ಹರಟೆ, ಜಾನಪದ, ನಾಟಕ, ಅಭಿನಯ, ಲಿಪಿ ಸಂಶೋಧನೆ, ಶಾಸನ ಸಂಶೋಧನೆ, ಹೀಗೆಯೇ ಇನ್ನೊಂದು ಅಚ್ಚರಿ ಸಂಗತಿ ಎಂದರೆ ಜೋತಿಷ್ಯಶಾಸ್ತ್ರ, ಜನ್ಮಕುಂಡಲಿ ಕುರಿತು ತಿಳುವಳಿಕೆಯನ್ನು ಹೊಂದಿದ ಅದ್ಭುತ ಪ್ರತಿಭೆಯ ಗಣಿಯಾಗಿದ್ದವರು ಮಧುರಚೆನ್ನರು. ಇಂಥ ಅನುಭಾವಿ, ಕವಿ, ಸಂಘಟಕ, ಸಂಶೋಧಕ, ಅನುವಾದಕಾರ ೧೫ ಅಗಸ್ಟ್ ೧೯೫೩ ರಲ್ಲಿ ಇಹಲೋಕ ತ್ಯಜಿಸಿದರು. ಇಂಥ ಅಜರಾಮರ ನಕ್ಷತ್ರವನ್ನು ಕುರಿತು ಬೇಂದ್ರೆಯವರು ಹೀಗೆ ಹಾಡಿದ್ದಾರೆ;

**॥ ಮಧುರಗೀತವ ಹಾಡಿ ನನ್ನ ನಲ್ಲನ ಒಲಿಸಿ**
**ಹಲಸಂಗಿ ನಾಡಿನಲಿ ನೆಲೆಸಿ ನಿಂತ**
**ನನ್ನ ಚೆನ್ನನಿಗೆಣೆಯ ಗೆಣೆಯರಾರಿಹರು**
**ಅವನೆ ಅವನಿಗೂ ಹೆಚ್ಚು ಅವನಿಗಿಂತ ॥**

ಬೇಂದ್ರೆಯವರನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಮಧುರಚೆನ್ನರು ಅವರನ್ನು ಅಣ್ಣಾ ಎಂದೇ ಸಂಬೋಧಿಸುತ್ತಿದ್ದರು. ಬೇಂದ್ರೆ ಮಧುರಚೆನ್ನರ ಪ್ರೀತಿಯಾದರೂ ಎಂತಹದ್ದು? ಅದು ಮಧುರಚನ್ನರು ಹಾಡಿದ...

**॥ ದೇವಲೀಲೆಯೊ ಕಾಣೆ ಕರ್ಮಜಾಲವೊ ಕಾಣೆ**
**ಅದು ನಮ್ಮ ಬುದ್ಧಿಯಾಚೆಗಿನ ಮಾತು**
**ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು**
**ಭವದಲ್ಲಿ ಕಾಣೆ ಮನಗಂಡ ಮಾತು ॥**

ಎಂಬ ಈ ಮೇಲಿನ ಕವಿತೆಯಲ್ಲೇ ವ್ಯಕ್ತವಾಗಿದೆ. ಬೇಂದ್ರೆಯವರ ಜೀವಿತದ ಸುಖದ ದಿನಗಳೆಂದರೆ, ಅವರು ಮಹಾರಾಷ್ಟ್ರದ ಸೊಲ್ಲಾಪುರ ಕಾಲೇಜಿನಲ್ಲಿ

ಕನ್ನಡ ಅಧ್ಯಾಪಕರಾಗಿದ್ದ ಹನ್ನೆರಡು ವರ್ಷಗಳು. ಆ ದಿನಗಳಲ್ಲಿ ಬೇಂದ್ರೆ ಮತ್ತು ಹಲಸಂಗಿ ಗೆಳೆಯರು ಪದೇಪದೇ ಭೇಟಿಯಾಗುತ್ತಿದ್ದರು. ಹಲಸಂಗಿಯಿಂದ ಗಡಿಯಾಚೆ ೧೩ ಕಿ.ಮೀ. ದೂರದ ಸೊಲ್ಲಾಪುರಕ್ಕೆ ಗೆಳೆಯರು ಹೋಗುವುದು ಅಥವಾ ಹಲಸಂಗಿಗೆ ಬೇಂದ್ರೆಯವರೇ ಬರುವುದು ವಾಡಿಕೆಯಾಗಿತ್ತು. ಈ ಭೇಟಿಯ ಸಂದರ್ಭದಲ್ಲೆಲ್ಲಾ ಸಾಹಿತ್ಯ ಕುರಿತೇ ಚರ್ಚೆ ನಡೆಯುತ್ತಿತ್ತು. ಈ ಗೆಳೆಯರ ನಡುವೆ ಸರಪಳಿ ಕೊಂಡಿಯಾಗಿ ಕೆಲಸಮಾಡಿದ್ದು ಕೂಡ ಕನ್ನಡ ಸಾಹಿತ್ಯವೇ.

ಇನ್ನು ಮಧುರಚೆನ್ನರ ಸಾವಿನ ಕುರಿತು ಬೇಂದ್ರೆಯವರ ಪ್ರತಿಕ್ರಿಯೆ ಹೇಳತೀರದು. ಮಧುರಚೆನ್ನರು ೧೯೫೩ರಲ್ಲಿ ತಮ್ಮ ಐವತ್ತನೇ ವಯಸ್ಸಿನಲ್ಲಿಯೇ ತೀರಿಹೋದದ್ದು ಕನ್ನಡ ಸಾಹಿತ್ಯದ ದುರಂತವೇ ಸರಿ. ಈ ವೇಳೆಗೆ ಬೇಂದ್ರೆಯವರು ತಮ್ಮ ಅಧ್ಯಾಪಕ ವೃತ್ತಿಯಲ್ಲಿದ್ದುಕೊಂಡು ಸೊಲ್ಲಾಪುರದಲ್ಲಿ ವಾಸವಾಗಿದ್ದರು. ಜೀವದ ಗೆಳೆಯನನ್ನು ಕಳೆದುಕೊಂಡ ಬೇಂದ್ರೆಯವರು ಕೂಡಲೆ ಹಲಸಂಗಿಗೆ ಧಾವಿಸಿ ಬಂದರು.ಮಧುರಚೆನ್ನರ ಅಂತ್ಯಕ್ರಿಯೆ ನಡೆಯುವ ತನಕ ಅಲ್ಲಿಯೇ ಉಳಿದರು. ಮಧುರಚೆನ್ನರ ಅಂತ್ಯಕ್ರಿಯೆಗೆ ಬಂದಿದ್ದ ನೂರಾರು ಅಭಿಮಾನಿಗಳು, ಗೆಳೆಯರು ಬೇಂದ್ರೆಯವರ ನೇತೃತ್ವದಲ್ಲಿ ಶ್ರದ್ಧಾಂಜಲಿ ಸಭೆಯೊಂದನ್ನು ನಡೆಸಿದರು. ಅತ್ಯಂತ ಭಾವುಕರಾದ ಬೇಂದ್ರೆಯವರು ಅಗಲಿದ ಗೆಳೆಯನ ಬಗ್ಗೆ ಏನು ಮಾತನಾಡಬಹುದು ಎಂಬ ಕುತೂಹಲ ಎಲ್ಲರಲ್ಲೂ ಇತ್ತು. ಬೇಂದ್ರೆ ಮಧುರಚೆನ್ನರ ಬಗ್ಗೆ ಆಡಿದ ನಾಲ್ಕೇನಾಲ್ಕು ಮಾತುಗಳು ಎಲ್ಲರಲ್ಲೂ ರೋಮಾಂಚನ ಮೂಡಿಸಿದವು. ಬೇಂದ್ರೆಯವರ ಮಾತು ಹೀಗಿತ್ತು,

**ಯಾಕ ಯಾಕಾಂತ ಎಲ್ಲರೂ ಮೋರೆ ಸಪ್ಪಗ ಮಾಡ್ಕಂಡ್ ಕುಂತಿರಿ?**
**ನಾವು ಇವತ್ತು ಚೆನ್ನಪ್ಪನ್ನ ಹೂತಿಲ್ಲ ಬಿತ್ತೀವಿ,**
**ಭೂಮ್ಯಾಗಿರೊ ಚೆನ್ನಪ್ಪ ಬೆಳಿ ಆಗ್ತಾನ**
**ಬೆಳಿಯೊಳಗಿನ ಕಾಳು ಒಂದು ಎರಡಾಗಿ**
**ಎರಡು ನಾಕಾಗಿ ನಾಡೆಲ್ಲ ತುಂಬ್ತದ**
**ನಾ ಹಂಗ ಭಾವಿಸ್ಕಂಡಿದೀನಿ**
**ನೀವು ಹಂಗನ ತಿಳ್ಕೊಳ್ರಿ, ಮನಸು ಹಗರಾಗ್ತದ.**



ಬೇಂದ್ರೆಯವರು ಅಂದು ಆಡಿದ ಮಾತು ಇವತ್ತಿಗೂ ನಿಜವಾಗಿದೆ.

ಭಾರತದ ಸ್ವಾತಂತ್ರ್ಯದ ದಿನ ಅರವಿಂದರ ಜನ್ಮದಿನ, ರಾಮಕೃಷ್ಣರ ನಿರ್ಮಾಣ ದಿನ, ಅದೇ ಆಗಸ್ಟ್ ೧೫ ಮಧುರಚೆನ್ನರ ಪುಣ್ಯತಿಥಿಯೂ ಆಯಿತು. ಗೆಳೆಯರ ಗುಂಪಿನ ಚಟುವಟಿಕೆಗಳು ಆಂದೋಲನದಂತೆ ನಾಡಿನಾದ್ಯಂತ ಒಂದು ಹೊಸ ಶಕ್ತಿಯುತವಾದ ಸಂಚಲನ ಉಂಟುಮಾಡಿರುವುದು ಈ ಮೂಲಕ ಗೊತ್ತಾಗುತ್ತದೆ. ಕರ್ನಾಟಕದ ಬಂಡಾಯ ಸಾಹಿತ್ಯದಲ್ಲಿ ವೈದಿಕ, ಆಧ್ಯಾತ್ಮಿಕತೆ, ಸಂಸ್ಕೃತ ಭಾಷೆಗಳ ಬಗೆಗೆ ಪ್ರತಿಭಟನೆ ಇದ್ದರೂ ಹಲಸಂಗಿ ಗೆಳೆಯರ ಬಳಗವು ದೀನ ದಲಿತರ ಉದ್ಧಾರ ಹಾಗೂ ಅವರ ಪ್ರತಿಭಟನೆಯ ಕುರಿತು ಕಾಳಜಿ, ಕಳಕಳಿ ಹೊಂದಿದ್ದರು. ೧೯೪೩–೪೪ರಲ್ಲಿ ಮಧುರಚೆನ್ನರು ಹಾಗೂ ಗೆಳೆಯರು ಚಡಚಣ, ಹಲಸಂಗಿ, ಅಥರ್ಗಾ, ಸಾಲೋಟಗಿ ಮುಂತಾದ ಗ್ರಾಮಗಳಲ್ಲಿ ಸ್ಥಾಪಿಸಿದ ಅರವಿಂದ ಭಜನಾ ಮಂಡಳಿಗಳು ಇಂದೂ ಕೂಡ ಕಾರ್ಯ ನಿರ್ವಹಿಸುತ್ತಾ, ಜೊತೆಗೆ ಅನೇಕ ಯುವಬರಹಗಾರರು. ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವುದು ಹಲಸಂಗಿ ಗೆಳೆಯರ ನೆನಪನ್ನು ಜೀವಂತವಾಗಿರಿಸಿವೆ. ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ, ಭಾಷೆ ಹೀಗೆ ವಿಶೇಷವಾಗಿ, ಸಕ್ರಿಯವಾಗಿ ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿನ ಸೇವೆ ಸಲ್ಲಿಸಿದರು.

❑

## ಖಾದಿ ಪ್ರಿಯ ಸಿಂಪಿ ಲಿಂಗಣ್ಣ(೧೯೦೫-೧೯೯೩)

ನವೋದಯ ಸಾಹಿತ್ಯದ ಒಲವು ನಿಲುವುಗಳನ್ನೂ, ಸಾಧನೆ ಸಿದ್ಧಿಗಳನ್ನೂ ಮೈಗೂಡಿಸಿಕೊಂಡು ಕಾರ್ಯತತ್ಪರರಾದ ಸಿಂಪಿ ಲಿಂಗಣ್ಣನವರು ನವೋದಯ ಸಾಹಿತ್ಯದಲ್ಲಿ ಬೆರಗುಗೊಳಿಸುವಂತಹ ಸಾಹಿತ್ಯ ಕೃಷಿ ಮಾಡಿದ್ದವರು. ನೂರಕ್ಕೂ ಹೆಚ್ಚು ಕೃತಿಗಳನ್ನು ನೀಡಿದವರು. ಕಾವ್ಯ, ನಾಟಕ, ಪ್ರಬಂಧ, ಕಾದಂಬರಿ, ಹರಟೆ, ಅನುವಾದ, ಚರಿತ್ರೆ, ಮಕ್ಕಳ ಸಾಹಿತ್ಯ, ವಿಡಂಬನೆ, ಜನಪದ ಸಾಹಿತ್ಯ ಸಂಗ್ರಹ, ವಿಮರ್ಶೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಲೇಖಕ, ಪ್ರಕಾಶಕ, ಶಿಕ್ಷಕ, ಭಾಷಣಕಾರರಾಗಿ ಪ್ರಸಿದ್ಧರಾದವರು.ಹಳ್ಳಿಯಲ್ಲಿಯೇ ಜನಿಸಿ, ಹಳ್ಳಿಗಳಲ್ಲಿಯೇ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಹಳ್ಳಿಯಲ್ಲಿಯೇ ನೆಲೆಸಿ, ಸಾಹಿತ್ಯ ಕೃಷಿಯನ್ನು ಜೀವನದ ಕೊನೆಯುಸಿರಿರುವವರೆಗೂ ಮಾಡಿದವರು. ಮಧುರಚೆನ್ನರು ಹಾಗೂ ಸಿಂಪಿ ಲಿಂಗಣ್ಣನವರು ಕೃಷ್ಣ ಅರ್ಜುನರಂತೆ ಬದುಕಿನುದ್ದಕ್ಕೂ ಜೊತೆಯಾದವರು.

೧೯೨೫ರಲ್ಲಿ ಕಮತಿಗ ಎಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿ, ವಾಗ್ವಿಲಾಸ ವಾಚನಾಲಯ ತೆರೆದರು. ಗಣೇಶೋತ್ಸವ ಆಚರಣೆ, ನಾಟಕ ಕಲೆಗೆ ಪ್ರೋತ್ಸಾಹ ನೀಡಿದರು. ಹೀಗೆ ಎಲ್ಲಾ ಕಾರ್ಯಗಳಿಂದ ಅವರು ಸ್ವಾತಂತ್ರ್ಯ ಹೋರಾಟಕ್ಕೆ ಪರೋಕ್ಷವಾಗಿ ನೆರವಾದುದೂ ಗಮನಾರ್ಹ ಸಂಗತಿ. ೧೯೩೬ರಲ್ಲಿ ಹಲಸಂಗಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮಶತಮಾನೋತ್ಸವವನ್ನು ಎಲ್ಲರೂ ಮೆಚ್ಚುವಂತೆ ಆಚರಿಸಿದರು ಹಾಗೂ ನಾಡಹಬ್ಬ ಉತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿದರು, ಅದು ಇಂದಿಗೂ ಉಳಿದುಕೊಂಡು ಬಂದಿದೆ. ಅಲ್ಲದೆ ಅನೇಕ ಶಿಕ್ಷಣ ಸಮ್ಮೇಳನಗಳನ್ನು ಸಂಘಟಿಸಿ ಯಶಸ್ವಿಗೊಳಿಸಿದರು. ಆ



ಕಾಲಕ್ಕೆ ಯಾವ ಸೌಲಭ್ಯವೂ ಕಾಣದ ಹಲಸಂಗಿ ಎಂಬ ಸಣ್ಣ ಹಳ್ಳಿಯಲ್ಲಿ ಶಾಲಾ ಮಕ್ಕಳಿಗೆ, ಯುವಕರಿಗೆ ಹೊಸ ಚೈತನ್ಯವನ್ನು ತುಂಬಿದರು. ಇದರಿಂದಾಗಿ ನಾಡಿನ ಇತಿಹಾಸ, ಸಂಸ್ಕೃತಿ, ಹಿರಿಮೆ ಗರಿಮೆ ತಿಳಿಸುವ ಹಾಗೂ ಇನ್ನಷ್ಟು ಮತ್ತಷ್ಟು ಆ ನಿಟ್ಟಿನಲ್ಲಿ ಸಾಗುವ ಕಾರ್ಯಗಳಿಗೆ ಸಾಕ್ಷಿಯಾದ ಭೂಮಿ ಹಲಸಂಗಿ.

ಇಂಗ್ಲೆಂಡ್, ಐರ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಅಮೆರಿಕ, ಜಪಾನ್, ಚೀನಾ ಮೊದಲಾದ ದೇಶಗಳ ಕ್ರಾಂತಿಯ ಇತಿಹಾಸವನ್ನು, ನಾಯಕರ ಚರಿತ್ರೆಗಳನ್ನು ಓದಿಕೊಂಡಿದ್ದರು. ಅದರ ಫಲವಾಗಿ ದೇಶಭಕ್ತಿ ಕಥೆಗಳು ಎಂಬ ಪುಸ್ತಕ ಬರೆದರು. ಭಾರತ ಸಂಸ್ಕೃತಿಯ ಸಂಘಟನೆ (೧೯೬೮) ಲೇಖನಗಳ ಸಂಕಲನ, ಆರ್ಯದೇಶಭಕ್ತಿ ಪುಟ್ಟ ಪುಸ್ತಕ. ಭಾರತಕ್ಕೆ ಸ್ವರಾಜ್ಯ ದೊರೆತುದೇಕೆ? (೧೯೫೦) ನಮ್ಮ ನೇತಾರರು ಕಷ್ಟಪಟ್ಟು ಪಡೆದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಕುರಿತು ಈ ಪುಸ್ತಕದಲ್ಲಿ ಕಾಣಬಹುದಾಗಿದೆ. ಜಗದೀಶ್‌ಚಂದ್ರ ಬೋಸ್ ಕುರಿತ ವೈಜ್ಞಾನಿಕ ಪುಸ್ತಕ. ೧೯೩೬ರಲ್ಲಿ ಟಾಲ್‌ಸ್ಟಾಯರ A Confession ಕೃತಿಯನ್ನು ಬಾಳಿನಲ್ಲಿ ಬೆಳಕು, ಶ್ರೀ ಅರವಿಂದರ ಭಾರತೀಯ ನವಜನ್ಮ, ಶ್ರೀ ಅರವಿಂದರು ಮೊದಲಾದ ಒಟ್ಟು ೧೩ ಉಜ್ವಲ ಗ್ರಂಥಗಳು ಪ್ರಕಟವಾದವು. ಸಿಂಪಿ ಲಿಂಗಣ್ಣ ಭಾರತದ ಭವ್ಯ ಸಿದ್ಧತೆ (೧೯೫೧) ಬರೆದಿದ್ದರು.ಅಸಹಕಾರ ಆಂದೋಲನಕ್ಕೆ ಬೆಂಬಲ ನೀಡುವುದರ ಜೊತೆಗೆ ೧೯೩೦ ರಲ್ಲಿ ರೈತ ಸಂಘ, ಖಾದಿ ಕೇಂದ್ರಗಳನ್ನು ಸ್ಥಾಪಿಸಿದ್ದರು. ಹಲಸಂಗಿ ಗೆಳೆಯರ ಬಳಗ ಸರ್ವಜನಾಂಗದ ಶಾಂತಿಯ ತೋಟವಾಗಿತ್ತು. ಕನ್ನಡ ನಾಡಿನ ಚಳುವಳಿ, ಹೋರಾಟಗಳಿಗೆ ಸರ್ವ ರೀತಿಯಲ್ಲೂ ಪರೋಕ್ಷವಾಗಿ, ಅಪರೋಕ್ಷವಾಗಿ ನೆರವಾಗಿದ್ದರು ಎಂದೇ ಹೇಳಬಹುದಾಗಿದೆ. ಚರಕದ ಮೂಲಕ ಖಾದಿ ಬಟ್ಟೆ ನೂಲುವ ಮತ್ತು ಬಳಸುವ, ಸ್ವದೇಶಿ ಪ್ರಚಾರ, ಸ್ವಾತಂತ್ರ್ಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಾಟಕಗಳನ್ನು ಆಡಿಸಿದರು.

೧೯೪೯ರಲ್ಲಿ ಲಚ್ಯಾಣದಲ್ಲಿ ಬಂಥನಾಳ ಶಿವಯೋಗಿಗಳು ಅತ್ಯಂತ ಮಹಾತ್ವಾಕಾಂಕ್ಷಿಯಾದ ಸರ್ವಧರ್ಮ ಸಮ್ಮೇಳನದ ಏರ್ಪಾಡು ಮಾಡಿದರು. ಆ ಸರ್ವಧರ್ಮ ಸಮ್ಮೇಳನಕ್ಕೆ ಮಧುರಚೆನ್ನರು ಸ್ವಾಗತಾಧ್ಯಕ್ಷರಾಗಿದ್ದರು.

ಡಾ. ಗುರುಲಿಂಗ ಕಾಪಸೆ ಅವರ ಜೊತೆ ಏಸುಕ್ರಿಸ್ತ, ಮಹಮ್ಮದ ಪೈಗಂಬರ, ಗುರುನಾನಕ, ಶಂಕರಾಚಾರ್ಯ, ಬಸವಣ್ಣ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ, ರಮಣ ಮಹರ್ಷಿ ಹೀಗೆ ಇವರೆಲ್ಲ ತಾತ್ತ್ವಿಕ ಚಿಂತನೆಗಳಲ್ಲಿ ಧರ್ಮ ಸಮನ್ವಯವಿರುವುದನ್ನು ಹೇಳುತ್ತಿದ್ದರು. ಇನ್ನು ಹಲಸಂಗಿ ಗೆಳೆಯರ ಬಳಗ ಆಡಿದ ನಾಟಕಗಳ ಕುರಿತು ಹೇಳುವುದಾದರೆ ಒಂದು ದೊಡ್ಡ ಗ್ರಂಥವೇ ಬರೆಯಬಹುದಾಗಿದೆ. ಕರ್ನಾಟಕ ಏಕೀಕರಣ ಪ್ರಿಯರಾದ ಕನ್ನಡಿಗ ನಾಯಕ ಕಲೆಕ್ಟರರು ಇಂಡಿಗೆ ಕರೆಸಿ ಕರ್ನಾಟಕ ಏಕೀಕರಣಕ್ಕೆ ಪೋಷಕವಾಗುವ ಸಾಹಿತ್ಯವನ್ನು, ನಕಾಶೆಗಳನ್ನು ತೋರಿಸಿ, ಆ ನಿಟ್ಟಿನಲ್ಲಿ ಕಾರ್ಯ ಮಾಡಲು ತಿಳಿಸುತ್ತಿದ್ದರು ಎಂದರೆ ನೀವೇ ಊಹಿಸಿ.

ಇಂತಹ ಅನೇಕ ಚಟುವಟಿಕೆಗಳ ಪರಿಣಾಮವಾಗಿ ಸುತ್ತಮುತ್ತಲಿನ ಅನೇಕ ಊರುಗಳಲ್ಲಿ ಇಂತಹ ಚಟುವಟಿಕೆಗಳು ಪಸರಿಸಿದವು.

**ರಾಟಿಯ ತಿರುಗಿಸಿ/ಬಡತನ ಕಾಟವ ನೀಗಿಸಿರಿ**
**ಚರಕ ಚಲಾ ಚಲಾಕೇ/ಲೇಂಗೇ ಸ್ವರಾಜ್ಯ ಲೇಂಗೇ**
**ಏಳಿರಿ ಏಳಿರಿ ಬಲುಬೇಗ/ಬೆಳಗಾಗಿದೆ ಏಳಿರಿ ಬಲುಬೇಗ**
**ನಹಿ ರಖನಾ ನಹಿ ರಖನಾ/ಚಾಂಡಾಲ ಸರ್ಕಾರಕೋ ನಹಿ ರಖನಾ**

ಇಂತಹ ಗೀತೆಗಳನ್ನು ರಚಿಸಿದ್ದರು. ಗೆಳೆಯರ ಬಳಗದಲ್ಲಿ ಸಿಂಪಿ ಲಿಂಗಣ್ಣನವರು ಶ್ರೇಷ್ಠ ಭಾಷಣಕಾರರು ಆಗಿದ್ದರು. ಹೊರ ರಾಜ್ಯ ಮಹಾರಾಷ್ಟ್ರದ ಸೋಲಾಪುರ, ಧಾರವಾಡದ ಟೌನ್ ಹಾಲ್‌ನಲ್ಲಿ, ಅನೇಕ ಸಮ್ಮೇಳನಗಳ ಗೋಷ್ಠಿಗಳಲ್ಲಿ, ಸಾಹಿತ್ಯೋತ್ಸವಗಳಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದ ಕೀರ್ತಿ ಇವರದು. ಅವರು ಮಾಡಿದ ಭಾಷಣಗಳ ದಾಖಲೆಗಳನ್ನು ಇಂದಿಗೂ ಕಾಣಬಹುದಾಗಿದೆ. ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ, ಭಾಷೆ ಹೀಗೆ ವಿಶೇಷವಾಗಿ ಸಕ್ರಿಯವಾಗಿ ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿನ ಸೇವೆ ಸಲ್ಲಿಸಿದರು.

❑

# ಸ್ವಾತಂತ್ರ್ಯ ಹೋರಾಟಗಾರ ಕಾಪಸೆ ರೇವಪ್ಪ (೧೯೦೭–೧೯೪೩)

ಸ್ವಾತಂತ್ರ್ಯ ಹೋರಾಟ ಎಂದ ತಕ್ಷಣ ನೆನಪಾಗುವ ಹಲಸಂಗಿ ಗೆಳೆಯರ ಬಳಗದಲ್ಲಿನ ಮೊದಲ ಹೆಸರು ಕಾಪಸೆ ರೇವಪ್ಪನವರದು. ಸೆರೆಮನೆ ವಾಸವನ್ನು ಕೂಡ ಅನುಭವಿಸಿದವರು.ಪ್ರಸಿದ್ಧ ಚಿತ್ರಕಲಾವಿದರಾಗಿ, ಕಾದಂಬರಿಕಾರರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಕತೆಗಾರರಾಗಿದ್ದವರು. ಹಲಸಂಗಿ ಗೆಳೆಯರ ಬಳಗದ ಏಕಮೇವ ಕಥೆಗಾರ. ಹಲಸಂಗಿ ಗೆಳೆಯರ ಪ್ರತಿಷ್ಠಾನದಿಂದ ನಂದನವನ (ರೂಪಕ ಚಿತ್ರಕ ಕಥೆಗಳು) ಸಣ್ಣಕಥೆಗಳ ಸಂಕಲನ ಕೃತಿ ಪ್ರಕಟವಾಗಿದೆ. ಇವರನ್ನೊಳಗೊಂಡಂತೆ ಕಳೆದ ಶತಮಾನದ ಆರಂಭದಲ್ಲಿ ಹಲಸಂಗಿ ಗೆಳೆಯರು ಕೈಗೊಂಡ ನಾಡುನುಡಿ ಸೇವೆ ಗಮನಾರ್ಹವಾಗಿದೆ. ಕಾಪಸೆ ರೇವಪ್ಪನವರು ಓದಿದ್ದು ಏಳನೆಯ ತರಗತಿ ಆದರೂ ಆಗಲೇ ಕವಿತೆ ಬರೆದು ಬಾಲಕವಿ ಎಂದು ಕರೆಸಿಕೊಂಡವರು. ನವೋದಯ ಸಾಹಿತ್ಯದ ಪ್ರಾರಂಭದ ಘಟ್ಟದಲ್ಲಿ ಹಲಸಂಗಿ ಗೆಳೆಯರು ಹಳ್ಳಿಯ ಪರಿಸರದಲ್ಲಿದ್ದುಕೊಂಡು ಸೃಜನಶೀಲ ಸಾಹಿತ್ಯದ ಜೊತೆ ಜೊತೆಗೆ ಜನಪದ ಸಾಹಿತ್ಯ, ವೇದ ಉಪನಿಷತ್ತು, ಭಾರತೀಯ ಪಾಶ್ಚಾತ್ಯ ತತ್ವಜ್ಞಾನ, ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀ ಮಾತಾರವಿಂದರ ವಿಚಾರಧಾರೆ, ಕಲೆ ಸಾಹಿತ್ಯ ಚಟುವಟಿಕೆಗಳೊಂದಿಗೆ ಸಮಕಾಲೀನ ಸಾಹಿತಿಗಳಾದ ದ. ರಾ. ಬೇಂದ್ರೆ, ಶಿವರಾಮ ಕಾರಂತ, ವಿ. ಕೃ. ಗೋಕಾಕ, ರಂ. ಶ್ರೀ ಮುಗಳಿ, ಸ. ಸ. ಮಾಳವಾಡ ಹೀಗೆ ಅನೇಕರನ್ನು ಗಾಢವಾಗಿ ಪ್ರಭಾವಿಸಿದರು.

ಕಲಾ ಕುಟೀರದಲ್ಲಿ ಚಿತ್ರಕಲೆ ಕೆಲಸವನ್ನು ನಿರ್ವಹಿಸುತ್ತಿದ್ದ ಕಾಪಸೆ ರೇವಪ್ಪನವರು ಅರವಿಂದರ ಜಯಂತಿ ಆಚರಣೆಗೆ ಅರವಿಂದರ ಭಾವಚಿತ್ರವನ್ನು

ಬರೆದಿದ್ದರು. ಜಯಂತಿ ಸಲುವಾಗಿ ರೇವಪ್ಪರಲ್ಲದೆ ಅನೇಕರು ಶಾಲೆ ತಪ್ಪಿಸಿದ್ದರು. ಮರುದಿನ ಶಾಲೆಗೆ ಹೋದಾಗ ತಲೆ ಮೇಲಿನ ಮಾಸ ಆರಿಲ್ಲ ಇನ್ನೂ, ಮಕ್ಕಳು ಚಳುವಳಿ ಮಾಡುತ್ತಾರೆ, ಇಂಥವರನ್ನು ಶಾಲೆಯಲ್ಲಿ ಇರಿಸಿಕೊಳ್ಳುವುದಿಲ್ಲ. ಎಂಬ ಗದರಿಕೆಯ ಮಾತುಗಳನ್ನು ಕೇಳಬೇಕಿತ್ತು. ಹೀಗೆ ರೇವಪ್ಪನವರು ರವೀಂದ್ರನಾಥ ಟ್ಯಾಗೋರ್, ವಿವೇಕಾನಂದರ ಚಿತ್ರಗಳನ್ನು ಬರೆದರು. ಹೋರಾಟದ ಸಂದರ್ಭದಲ್ಲಿ ರೇವಪ್ಪನವರು ಹರ್ಡೇಕರ್ ಮಂಜಪ್ಪನವರ ಹರಿಹರದ ಸತ್ಯಾಗ್ರಹ ಆಶ್ರಮದಲ್ಲಿ ನೆಲೆ ನಿಂತಿದ್ದರು. ಬೆಳಗಾವಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಿದ್ದರು. ಆ ಸಂದರ್ಭದಲ್ಲಿ ನಾಡಿನಾದ್ಯಂತ ಬೀಸುವ ಆಂದೋಲನದ ಬಿರುಗಾಳಿಗೆ ಸಿಲುಕಿ ಎತ್ತೆತ್ತಲೋ ಚದುರಿದ ಹಲಸಂಗಿ ಗೆಳೆಯರನ್ನು ನೆನೆಯಬಹುದಾಗಿದೆ.

ಗಂಟು ಬೇನೆಯ ಕಾಯಿಲೆ ಹಲಸಂಗಿ ಊರೆಲ್ಲ ಆವರಿಸಿ, ಮೊದಲಿನ ಸ್ಥಿತಿಗೆ ಬರುವ ಸಂದರ್ಭದಲ್ಲಿಯೇ ಕಾಪಸೆ ರೇವಪ್ಪನವರಿಗೆ ಸೆರೆಮನೆಯಿಂದ ಬಿಡುಗಡೆಯಾಗಿ ಮೂರು ವರ್ಷಗಳ ನಂತರ ಹಲಸಂಗಿಗೆ ಬಂದಾಗ ಒಂದು ಘಟನೆ ನಡೆಯಿತು... ಆ ಘಟನೆಯನ್ನು ಅವರದೇ ಮಾತುಗಳಲ್ಲಿ ದಾಖಲೆ ಮಾಡಿರುವ ಸಿಂಪಿ ಲಿಂಗಣ್ಣನವರ 'ಶ್ರೀ ಮಧುರಚೆನ್ನರ ಸ್ಮೃತಿಗಳು' ಕೃತಿಯಲ್ಲಿ ಹೀಗೆ ಕಾಣಬಹುದು.

"ನಾನು ಮೋಟಾರು ಇಳಿದು, ಒಂದು ಮೈಲು ನಡೆದುಕೊಂಡು ಹಲಸಂಗಿ ಊರಿನ ಅಗಸಿ ಬಾಗಿಲಿಗೆ ಬಂದೆ. ಚಾವಡಿಯಲ್ಲಿ ಕುಳಿತ ಊರ ಗೌಡರು ಎದ್ದು ಬಂದು ಕೈ ಮುಗಿದು ನಗೆಮುಖದಿಂದ "ಇದೇ ಬರೋಣವೇ?" ಎಂದು ಸ್ವಾಗತಿಸಿದರು. ಬಳಿಕ ಯಾವ ಮನೆ ಬಿಟ್ಟು ಓಡಿಹೋಗಿದ್ದೆನೋ, ಯಾವ ತಂದೆ ತಾಯಿಯ ಮಾತು ಕೇಳದೆ ಹೊರಬಿದ್ದಿದ್ದೆನೋ, ಆ ಮನೆಯ ತಲೆಬಾಗಿಲಿಗೆ, ತಂದೆ ತಾಯಿ ಮನೆ ಬಾಗಿಲಿಗೆ ಬರುತ್ತಲೇ, ಮುಪ್ಪಿನ ಅವಸ್ಥೆಯಿಂದ ಮೂರು ಕಡೆ ಮಣಿದು ಬಡಿಗೆಯೂರಿ ಅಂಗಳದಲ್ಲಿ ನಿಂತ ತಂದೆ, ನನ್ನನ್ನು ಕೆಲವೊಂದಿಷ್ಟು ಹೊತ್ತು ಗುರುತಿಸದೆ ಹುಳುಹುಳು ನೋಡಿದ ಮೇಲೆ, ಫಕ್ಕನೆ ಗುರುತಿಸಿ – "ಬರ್ರೀ..." ಎಂದು ದೊಡ್ಡ ಮನುಷ್ಯರನ್ನು ಬರಮಾಡಿಕೊಳ್ಳುವಂತೆ



ಬಾಯಿ ತುಂಬ ಕರೆದು, ಜೋಲಿ ಹೊಡೆಯುತ್ತಲೇ ಪಡಸಾಲೆಯನ್ನೇರಿ ಕಂಬಳಿ ಒಗೆದು, ಕೈಹಿಡಿದು ಅದರ ಮೇಲೆ ಕೂಡಿಸಿದರು. ಆ ಗಲವಿಲಿ ಕೇಳಿ ಒಳಗಿಂದ ಅವ್ವ ಬಂದಳು, ಅತ್ತಿಗೆ ಬಂದಳು, ಅಣ್ಣನ ಮಕ್ಕಳು ಬಂದರು, ಕಣ್ಣು ತುಂಬಿಕೊಂಡು ನೋಡಿದರು. ಮಾತು ಮೌನವಾಗಿತ್ತು; ಕಂಠ ಬಿಗಿದಿತ್ತು".

ಕಾಪಸೆ ರೇವಪ್ಪನವರು ನಾಲ್ಕಾರು ವರ್ಷಗಳ ಕಾಲ ಹರಿಹರ ಸತ್ಯಾಗ್ರಹ ಆಶ್ರಮದ ಸಾಧಕರಾಗಿ, ರಾಷ್ಟ್ರಸಭೆಯ ಸ್ವಯಂಸೇವಕರಾಗಿ, ಕಾಯಿದೆ ಭಂಗದ ಸರ್ವಾಧಿಕಾರಿಯಾಗಿ, ಸರ್ಕಾರಕ್ಕೆ ಸೆರೆಮನೆಯ ಅತಿಥಿಯಾಗಿ ಮರಳಿ ಹಲಸಂಗಿಗೆ ಬಂದಾಗ 'ನಾವು ಕಾಪಸೆ ರೇವಪ್ಪನವರು' ಎಂದು ಹೀಗೆ ತಮ್ಮ ಪರಿಚಯವನ್ನು ತಾವೇ ಮಾಡಿಕೊಂಡ ಘಟನೆಯನ್ನು ಸ್ಮರಿಸಬಹುದು.

ಕಾಪಸೆ ರೇವಪ್ಪನವರು ಭಾರತೀಯ ಆದರ್ಶಕ್ಕೆ ಮಾರುಹೋಗಿದ್ದರು. ಗಣೇಶ ಚತುರ್ಥಿಯಲ್ಲಿ ಶಾಲಾ ಮಕ್ಕಳಿಗೆ ಕೋಲಾಟ, ಯುವಕರಿಗೆ ನಾಟಕಗಳನ್ನು ಕಲಿಸುತ್ತಿದ್ದರು. ಊರಿನಲ್ಲಿ ಇಂದಿಗೂ "ಜಯ ನಮಃ ಪಾರ್ವತೀ ಪತೇ ಶಿವ ಹರಹರ ಮಹಾದೇವ" ಎಂಬ ಮಾರ್ದನಿ ಕೇಳಬಹುದಾಗಿದೆ. ನಾಲ್ಕಾರು ಮೇಳದವರು ಬಯಲಾಟ ಕಲಿತು, ಹಲಸಂಗಿಯ ಸುತ್ತಮುತ್ತಲಿನ ಹಳ್ಳಿಗಳಲ್ಲೂ ಉತ್ಸಾಹ ಜಾಗ್ರತವಾಗಿ ಇಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಕಾರಣವಾಗಿತ್ತು. ರಾಷ್ಟ್ರೀಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ೧೯೩೬ರಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಶತಮಾನೋತ್ಸವ ಭಾರತದಲ್ಲಿ ಕೊಲ್ಕತ್ತಾ ಬಿಟ್ಟರೆ ಇನ್ನೆಲ್ಲೂ ನಡೆದಿರಲಿಲ್ಲ. ಹಲಸಂಗಿಯಲ್ಲಿ ಊರಿನ ಗೌಡರು, ಕರಣಿಕರು ಆಗಿದ್ದ 'ದತ್ತಾ ಕಾಕಾ' ಎಲ್ಲರೂ ಜೊತೆಗೂಡಿ ನಾಡಿನ ಗಣ್ಯರಾದ ಬೇಂದ್ರೆ, ಮುಗಳಿ ಮೊದಲಾದ ವಿದ್ವಾಂಸರ ಭಾಷಣಗಳು, ಕಾಪಸೆ ರೇವಪ್ಪನವರ 'ನಂದನವನ' ಕಥಾ ಸಂಕಲನ ಬಿಡುಗಡೆ, ಹತ್ತಾರು ಭಜನೆ ಮೇಳದವರು, ರಾತ್ರಿ ನಾಟಕ – ಇಂತಹ ಅನೇಕ ಚಟುವಟಿಕೆಗಳು ನಡೆದವು. ಇಂತಹ ಉತ್ಸವಗಳು ಊರ ಜನರನ್ನಲ್ಲದೇ ಇಡೀ ನಾಡಿನ ಗಮನ ಸೆಳೆದಿತ್ತು. ಕಾಪಸೆ ರೇವಪ್ಪನವರೇ ಬರೆದ ಭುವನೇಶ್ವರಿ ದೇವಿಯ ಭಾವಚಿತ್ರವನ್ನು ನಾಡಹಬ್ಬ ಉತ್ಸವದಲ್ಲಿ ಮೆರೆಸಲಾಯಿತು. ಕನ್ನಡ ನಾಡು ನುಡಿ ಮಹಿಮೆ, ಕನ್ನಡ ಮಹಾಮಹಿಮರ ದಿವ್ಯಕಾರ್ಯ, ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಕಾರ್ಯ,

ರಾಷ್ಟ್ರೀಯ ಭಾವನೋದ್ದೀಪಕವೂ ಆದ ನಾಡಗೀತೆಯನ್ನು ಹಾಡುತ್ತಿದ್ದರು. ರಾಷ್ಟ್ರೀಯ ಸಾಹಿತ್ಯ, ಕರ್ನಾಟಕ ಇತಿಹಾಸ, ಸಂಸ್ಕೃತಿ, ಹಿರಿಮೆ ತಿಳಿಯುವುದೇ ಇದರ ಉದ್ದೇಶ ಆಗಿತ್ತು.

ಕಾಪಸೆ ರೇವಪ್ಪನವರು ತೈಲವರ್ಣ ಚಿತ್ರಕಲೆ ಮಾದರಿಗಳಲ್ಲೂ ಪ್ರವೀಣರು. 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಗುವುದರ ಜೊತೆಗೆ ಪ್ರಸಿದ್ಧಿ, ಪ್ರಚಾರ, ಜನರ ಮೆಚ್ಚುಗೆ ಪಡೆದಿದ್ದವು. "ಇವರ ಕಾವ್ಯದಲ್ಲಿ ಚಿತ್ರವಿದೆ; ಗದ್ಯದಲ್ಲಿಯೇ ಆಗಲಿ, ಪದ್ಯದಲ್ಲಿಯೇ ಆಗಲಿ ಇವರು ಬರೆದುದ್ದೆಲ್ಲ ಚಿತ್ರಕಾವ್ಯ" ಆಗಿದೆ. ನಂದನವನ ಸಂಕಲನ ಒಟ್ಟು ಏಳು ಕಥೆಗಳನ್ನೊಳಗೊಂಡಿದೆ. ಕಥೆಗಳಲ್ಲಿನ ದ್ರವ್ಯದ ಮೇಲೆ ರೂಪಕದ ಸ್ವಚ್ಛಂದ ಶೈಲಿಯ ನಿರೂಪಣೆಯೊಂದಿಗೆ ಓದುಗರನ್ನು ಜಗ್ಗಿ ತಡೆದು ನಿಲ್ಲಿಸುತ್ತದೆ. ಕಳೆದ ಮುತ್ತು ಕಥೆ ಒಂದು Morality Play ದಂತೆ ಧ್ವನಿಸುತ್ತದೆ. ಇವರ ಕತೆಗಾರಿಕೆ ಹಾದಿಯಲ್ಲಿ ಹವಣಿಕೆಗೆ ಹವಣಿಕೆಯೊಂದಿಗೆ Manipulation ಪೂರ್ಣತೆ ಸಾಧಿಸಿದೆ ಎಂಬ ಮಾತನ್ನು ಈ ಕಥಾ ಸಂಕಲನಕ್ಕೆ ಮುನ್ನುಡಿ ಬರೆದ ವಿ. ಕೃ. ಗೋಕಾಕ ಹೇಳುತ್ತಾರೆ. ಜೊತೆಗೆ ಸಂನ್ಯಾಸಿ ಎಂಬ ಕಾದಂಬರಿ ಬರೆದಿದ್ದರು. ಹೀಗೆ ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ, ಭಾಷೆ ಕುರಿತು ವಿಶೇಷವಾಗಿ ಸಕ್ರಿಯವಾಗಿ ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿನ ಸೇವೆ ಸಲ್ಲಿಸಿದರು. ಕರ್ನಾಟಕದ ಗಾಂಧಿ ಎನಿಸಿದ ಹರ್ಡೇಕರ ಮಂಜಪ್ಪನವರ ಸಂಪರ್ಕ ಪಡೆದು ರಾಷ್ಟ್ರೀಯ ಆಂದೋಲನದಲ್ಲಿಯೂ ಭಾಗವಹಿಸಿದವರು, ಚಲೇಜಾವ್ ಚಳುವಳಿಯಲ್ಲಿ ಭಾಗವಸಿದರು ಮತ್ತು ಕಾಯ್ದೆ ಭಂಗ ಚಳುವಳಿಯಲ್ಲಿ ಪಾಲ್ಗೊಂಡು ಸೆರೆಮನೆ ವಾಸ ಅನುಭವಿಸಿದ್ದರು. ಆದರೆ ದುರಂತ ಎಂದರೆ ಪಿ. ಧೂಲಾ ಸಾಹೇಬರಂತೆ ಸಣ್ಣ ವಯಸ್ಸಿನಲ್ಲಿಯೇ ಕ್ಷಯರೋಗಕ್ಕೆ ತುತ್ತಾಗಿ ಸ್ವಾತಂತ್ರ್ಯ ಸಿಗುವ ಮೊದಲೇ ಇಹಲೋಕವನ್ನು ತ್ಯಜಿಸಿದರು.

❑

# ಅಪ್ಪಟ ದೇಶಭಕ್ತ ಪಿ. ಧೂಲಾ(೧೯೦೧–೧೯೪೦)

ಪಿ. ಧೂಲಾ ಸಾಹೇಬರು ಗೆಳೆಯರ ಬಳಗದ ಕವಿಕರ್ಣ. ಹಲಸಂಗಿ ಗೆಳೆಯರ ಬಳಗದಲ್ಲಿ ಕೇಳಿಬರುವ ಇನ್ನೊಂದು ಪ್ರಮುಖವಾದ ಹೆಸರು. ರಾಷ್ಟ್ರಪ್ರೇಮಿ, ಕನ್ನಡ ಪ್ರೇಮಿ, ಆದರ್ಶವಾದಿಯೂ ಆಗಿದ್ದರು. ಧೂಲಾ ಸಾಹೇಬರು ಶಿವರಾಮ ಕಾರಂತರ ಆತ್ಮೀಯ ಗೆಳೆಯರಾಗಿ, ಮಧುರಚೆನ್ನರ ಗಾಢ ಪ್ರಭಾವದಿಂದ ಕವಿತೆ ಬರೆಯಲು ತೊಡಗಿದ್ದವರು. ವೀರಪಥಿಕ ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದರು. ಮಧುರಚೆನ್ನರು ತಾವು ಬರೆಯಲು ತೊಡಗಿರುವುದಲ್ಲದೆ ತಮ್ಮ ಗೆಳೆಯರಾದ ಸಿಂಪಿ ಲಿಂಗಣ್ಣ, ಪಿ.ಧೂಲಾ, ಕಾಪಸೆ ರೇವಪ್ಪ ಹೀಗೆ ಮೊದಲಾದವರಿಗೆ ಬರೆಯಲು ಪ್ರೇರಣೆ ನೀಡಿದ್ದರು. ಹಲಸಂಗಿ ಗೆಳೆಯರಲ್ಲಿ ಕಿರಿಯರಾದ ಕಾಪಸೆ ರೇವಪ್ಪನವರೂ ಕೂಡ ಬಾಲಕವಿಯಾಗಿ ಮಧುರಚೆನ್ನರನ್ನು ಅನುಸರಿಸಿದವರು.

**ಒಂದು ಘಟನೆ ನಿಮ್ಮ ಮುಂದೆ ಹಂಚಿಕೊಳ್ಳಲೇಬೇಕು...**

ಪಿ. ಧೂಲಾ ಅವರು ಮಧುರಚೆನ್ನರಿಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯರಾಗಿದ್ದರು. ಮೂರನೇ ತರಗತಿಯವರೆಗೆ ಮಾತ್ರ ಶಾಲೆ ಓದಿ ಬಿಟ್ಟಿದ್ದರು. ಪಿ. ಧೂಲಾ ಸಾಹೇಬರ ಮೂಲ ಹೆಸರು ಕಾಶೀಮಸಾಹೇಬ. ಇವರ ತಮ್ಮ ಜಲಾಲಖಾನರ ಜೇಳಜಿ (ವರಾಂಡ/ಮೊಗಸಾಲೆ) ಕಟ್ಟೆಯಲ್ಲಿಯೇ ಮಧುರಚೆನ್ನರ ಸಹಿತವಾಗಿ ಎಲ್ಲಾ ಹಲಸಂಗಿ ಗೆಳೆಯರ ಬಳಗದ ಓದು ನಡೆಯುತ್ತಿತ್ತು. ಆಗ ನಾಲ್ಕೈದು ನೂರು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತರೆ ನೂರಾ ಐವತ್ತು ವಿದ್ಯಾರ್ಥಿಗಳು ಪಾಸಾಗುವುದು ದುಸ್ತರವಾಗಿತ್ತು. ಅಂತಹ ಕಾಲಘಟ್ಟದಲ್ಲಿ ಮಧುರಚೆನ್ನರು ನಾಲ್ಕು ಜಿಲ್ಲೆಗಳಿಗೆ ಮೊದಲ ಸ್ಥಾನ ಗಳಿಸಿ

೧೯೨೧ರಲ್ಲಿ ತೇರ್ಗಡೆಯಾಗಿದ್ದು ದಾಖಲೆಯಾಯಿತು. ಆದರೆ ಇನ್ನೂ ತುಂಬಾ ವಿಶೇಷ ಸಂಗತಿ ಎಂದರೆ ಮೂರನೇ ತರಗತಿಗೆ ಶಾಲೆ ಬಿಟ್ಟ ಪಿ. ಧೂಲಾ ಸಾಹೇಬರು ಓದದೆ, ಬರೆಯದೆ ಮಧುರಚೆನ್ನರು ಓದುವುದನ್ನು ಕಿವಿಗೊಟ್ಟು ಕೇಳುತ್ತಾ ಅದರ ಆಧಾರದ ಮೇಲೆ ಪರೀಕ್ಷೆಗೆ ಕುಳಿತು ಮೊದಲನೇ ಬಾರಿಗೆ ಮುಲ್ಕೀ ಪರೀಕ್ಷೆ ಪಾಸು ಮಾಡಿದ್ದು ಎಲ್ಲರಿಗೂ ಬೆರಗು ಮತ್ತು ಸಂತೋಷ ತಂದಿತ್ತು. ಇವರಿಬ್ಬರ ಯಶಸ್ಸು, ಕೀರ್ತಿ ಸುತ್ತಲಿನ ಹತ್ತಿಪ್ಪತ್ತು ಹಳ್ಳಿಗಳಲ್ಲಿ ಪಸರಿಸಿರಲು ಕಲಾವಿದರು, ಊರಿನ ಜನರೆಲ್ಲ ಗೆಳೆಯರಿಬ್ಬರ ಸಂತೋಷವನ್ನು ಹೇಗೆ ಹಂಚಿಕೊಂಡಿದ್ದರು ಎಂದರೆ ಹತ್ತಿರದಲ್ಲೇ ಬಂದ ಮೊಹರಂ ಹಬ್ಬದ ದಿನ ಅಲಾಯಿ ಕುಣಿಯುವಾಗ...

**ಧೂಲಾ... ಧೂಲಾ... ಚೆನ್ನಮಲ್ಲ**
**ಧೂಲಾ... ಧೂಲಾ... ಚೆನ್ನಮಲ್ಲ...**

ಎಂದು ಮುಗಿಲು ಮುಟ್ಟುವ ಹಾಗೆ ಭಾವೋದ್ರೇಕದಲ್ಲಿ ಆವೇಶದಿಂದ ಜಯಘೋಷ ಹಾಕಿ ಹರ್ಷ ವ್ಯಕ್ತಪಡಿಸಿದರು. ಇದೇ ಅಲ್ವಾ ಗೆಳೆತನ, ಭಾವೈಕ್ಯತೆ, ಸಾಮರಸ್ಯ ಅಂದರೆ?ಅಂದೇ ಬಹುತ್ವ ಭಾರತದ ನೆಲೆಯ ಸೆಲೆಗೆ ಹಲಸಂಗಿ ಸಾಕ್ಷಿಯಾಗಿತ್ತು.

ಹಲಸಂಗಿ ಗೆಳೆಯರು ಬರೆಯುತ್ತಿದ್ದ ಕಾಲಕ್ಕೆ ರಾಷ್ಟ್ರೀಯ ಆಂದೋಲನ ಅವರನ್ನು ತೀವ್ರವಾಗಿ ತಟ್ಟಿತು. ಪಿ. ಧೂಲಾ ಸಾಹೇಬ ದೇಶಕ್ಕೆ ಸ್ವಾತಂತ್ರ್ಯ ದೊರಕುವವರೆಗೂ "ತಲೆಗೂದಲು ಕತ್ತರಿಸುವುದಿಲ್ಲ ಮತ್ತು ಮದುವೆಯಾಗುವುದಿಲ್ಲ" ಎಂದು ಸಂಕಲ್ಪ ಮಾಡಿದ್ದರು. ಆದರೆ ಅವರು ಸ್ವಾತಂತ್ರ್ಯ ಸಿಗುವ ಮೊದಲೇ ತಮ್ಮ ೩೯ನೇ ವಯಸ್ಸಿನಲ್ಲಿ ಪ್ಲೇಗ್ ಕಾಯಿಲೆಗೆ ತುತ್ತಾಗಿ ಇಹಲೋಕವನ್ನು ತ್ಯಜಿಸಿದರು. ಧೂಲಾ ಸಾಹೇಬರು ರಾಷ್ಟ್ರೀಯ ಸೇವಾದಳದಲ್ಲಿ ಕಾರ್ಯ ನಿರ್ವಹಿಸಿದವರು. ಆಯುರ್ವೇದದ ಉಪಚಾರದ ಬಗ್ಗೆಯೂ ಅಧ್ಯಯನ ಮಾಡಿ ಜನಹಿತಕ್ಕೆ ದುಡಿದವರು. ಅಧ್ಯಾತ್ಮದಲ್ಲಿ ಅದಮ್ಯ ಆಸಕ್ತಿಯಿಂದ ಮೂಡಿದ ದೈವಭಕ್ತಿ, ನವೋದಯ ಕಾಲದ ಹಿರಿಯ ಸಾಹಿತಿಗಳ ಪ್ರಭಾವದಿಂದ ನಾಡು ನುಡಿಯ ಪ್ರೇಮ, ಹಳ್ಳಿಯ ಜನಜೀವನದ ಗಾಢ ಸಂಪರ್ಕದಿಂದ ಜಾನಪದ ಮತ್ತು ಮಾನವ ಪ್ರೇಮ ಈ ಎಲ್ಲದರ ಜೊತೆಗೆ



ಅವರಲ್ಲಿನ ಜನ್ಮಜಾತ ಪ್ರತಿಭಾ ಶಕ್ತಿ ಈ ಗೆಳೆಯರನ್ನು ಒಂದುಮಾಡಿತು ಎಂದು ಹಲಸಂಗಿ ಪರಿಸರದ ವಿದ್ವಾಂಸರಾದ ಎನ್ಜಿ ಕರೂರ ಹಲಸಂಗಿ ಗೆಳೆಯರ ಜೀವನ ಸಾಧನೆ ಲೇಖನದಲ್ಲಿ ಉಲ್ಲೇಖಿಸುತ್ತಾರೆ. ಹಿಂದುಸ್ತಾನಿ ಸೇವಾದಳದೊಡನೆ ವಿಶೇಷ ಸಂಬಂಧವನ್ನು ಹೊಂದಿದ್ದ ಪಿ. ಧೂಲಾ ಸಾಹೇಬರು. ಶಿವರಾಮ ಕಾರಂತರೊಡನೆ ಸ್ನೇಹ ಸಂಬಂಧವನ್ನು ಬೆಳೆಸಿ, ನಾಟಕ ಸಂಘ ಕಟ್ಟಿದರು. ಚರವಿದ್ಯಾಲಯದಂತೆ ನಾಡು ನುಡಿ ಸೇವೆ ಮಾಡಬೇಕೆನ್ನುವ ಕಾರಂತರ ವಿಚಾರಗಳಿಂದ ಪ್ರಭಾವಿತರಾಗಿ ಹಲಸಂಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅಡ್ಡಾಡಿ ಬಂದಿದ್ದರು. ಧೂಲಾ ಸಾಹೇಬರು ಬಾಗಲಕೋಟೆಯ ಹಿಂದುಸ್ತಾನಿ ಸೇವಾದಳ ಸಂಸ್ಥೆಯ ಸ್ಥಳೀಯರಲ್ಲಿ ಒಬ್ಬರಾಗಿ ಕಾರ್ಯ ನಿರ್ವಹಿಸಿದ್ದರು. ಪಿ. ಧೂಲಾ ಬಾಗಲಕೋಟೆಯ ಸೇವಾದಳದಲ್ಲಿ ಇರುವಾಗಲೇ ಅದರ ಕಟ್ಟಡ ಪ್ರವೇಶ ಕಾರ್ಯಕ್ರಮಕ್ಕೆ ಹಲಸಂಗಿಯಿಂದ ಮಾದಣ್ಣ ಓಲೇಕಾರ, ಸಿಂಪಿ ಲಿಂಗಣ್ಣ ಹೋಗಿ ಬಂದಿದ್ದರು ಎಂದರೆ ಅವರು ಎಷ್ಟು ಸಕ್ರಿಯರಾಗಿದ್ದರು ಎಂದು ತಿಳಿಯುತ್ತದೆ.

೧೯೨೨ರಲ್ಲಿ ಶಾರದಾ ವಾಚನಾಲಯ ಸ್ಥಾಪಿಸಿ ಹಲಸಂಗಿಯ ಸಾಂಸ್ಕೃತಿಕ ಹಬ್ಬಕ್ಕೆ ಕನ್ನಡ ನುಡಿದೇವಿಯ ತೇರು ಸಜ್ಜು ಮಾಡಿದರು. ಆ ಹೊತ್ತಿಗೆ ೧೭೦೦ರಷ್ಟು ಜನಸಂಖ್ಯೆಯಿದ್ದ ಹಲಸಂಗಿಯ ಶಾರದಾ ವಾಚನಾಲಯದಲ್ಲಿ ೫೯೧ರಷ್ಟು ಪುಸ್ತಕ ಸಂಗ್ರಹಿಸಿ, ಒಂದು ವರ್ಷದಲ್ಲಿ ೧೭೫೯ ಸಲ ಓದಲಿಕ್ಕೆ ಜನರು ಪುಸ್ತಕಗಳನ್ನು ತಗೆದುಕೊಂಡಿದ್ದರು ಎಂಬುವುದು ಒಂದು ದಾಖಲೆಯೇ ಸರಿ. ಜನಪದ ಹಾಡುಗಳ ಸಂಗ್ರಹ, ಸಂಪಾದನೆ, ಪ್ರಕಟಣೆ ಹಾಗೂ ಉಪನ್ಯಾಸ, ನಾಡಹಬ್ಬ ಆಚರಣೆ, ಗಣೇಶೋತ್ಸವ, ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ಶತಮಾನೋತ್ಸವ, ವಿಜಯನಗರ ಸ್ಮಾರಕೋತ್ಸವ, ಶ್ರೀ ಅರವಿಂದ ಮಂಡಳ ಸ್ಥಾಪನೆ ಮುಂತಾದ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮತ್ತು ಈ ಕಾರ್ಯಕ್ರಮಗಳಿಗೆ ಬೇಂದ್ರೆ, ಕಾರಂತ, ಮಾಳವಾಡ ಮೊದಲಾದವರನ್ನು ಬರಮಾಡಿಕೊಳ್ಳುವ ಮೂಲಕ ಉತ್ತರ ಕರ್ನಾಟಕದ ಬಿರುಬಿಸಿಲಿನ ಒಂದು ಸಣ್ಣ ಹಳ್ಳಿಯಾಗಿದ್ದ ಹಲಸಂಗಿಯನ್ನು ಕರ್ನಾಟಕದಲ್ಲಿ ಗುರುತಿಸುವಂತೆ ಮಾಡಿದ್ದು ಸಣ್ಣ ಸಾಧನೆಯೇನಲ್ಲ.

ಬಾಗಲಕೋಟೆಯಲ್ಲಿ ಮಂಗಳವೇಡೆ ಶ್ರೀನಿವಾಸರಾಯರು ಕನ್ನಡಿಗ ಪತ್ರಿಕೆಯನ್ನು ಆರಂಭಿಸಿದ್ದರು. ಪತ್ರಿಕೆ ಬಾಗಲಕೋಟೆ ಅಷ್ಟೇ ಅಲ್ಲದೆ ಇಡೀ ಕನ್ನಡನಾಡನ್ನು ಬಡಿದೆಬ್ಬಿಸಿತ್ತು ಹಾಗೂ ಆ ಸಾಹಸವು ಕನ್ನಡ ವೃತ್ತಪತ್ರಿಕೆಗಳಲ್ಲಿ ಕ್ರಾಂತಿಯನ್ನು ತಂದಿತ್ತು. ಆ ಪತ್ರಿಕೆಗೆ ಹಲಸಂಗಿ ಗೆಳೆಯರು ಸುದ್ದಿಗಾರರು, ಬರಹಗಾರರು ಆಗಿದ್ದರು. ವಿಶೇಷವಾಗಿ ಸೇವೆ ಸಲ್ಲಿಸಿದವರು ಪಿ. ಧೂಲಾ ಸಾಹೇಬರು. ಆ ಸಂದರ್ಭದಲ್ಲೇ ಏಕೀಕರಣ ಪರಿಷತ್ತು, ವೃತ್ತಪತ್ರಿಕೆ ಪರಿಷತ್ತು, ರೈತ ಪರಿಷತ್ತು ಯಶಸ್ವಿಯಾಗಿ ಬಾಗಲಕೋಟೆಯಲ್ಲಿ ಜರುಗಿದವು. ಕನ್ನಡಿಗ ಪತ್ರಿಕೆ ಅನೇಕ ಘಟನೆಗಳಿಗೆ ಜೊತೆಯಾಗಿತ್ತು, ಹಲಸಂಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಖಾದಿ ಪ್ರಚಾರ, ಸತ್ಯಾಗ್ರಹದ ಸೈನಿಕರಾದದ್ದು, ಹೀಗೆ ಇಡೀ ಚಳುವಳಿಯ ಕೇಂದ್ರವಾಗಿ ಗಮನ ಸೆಳೆಯಿತು ಎಂದು ಹೇಳಬಹುದು. ರೇವಪ್ಪನವರು ೧೯೩೦ರ ಕಾಯ್ದೆಭಂಗ ಚಳುವಳಿಯಲ್ಲಿ ಡಿಕ್ಟೇಟರನಾಗಿ ಸೆರೆಮನೆ ಸೇರಿದರು. ಆ ಸಂದರ್ಭದಲ್ಲಿ ಕಾಪಸೆ ರೇವಪ್ಪ, ಜೀರಂಕಲಗಿ ಗುರುಪಾದಪ್ಪ, ಮದಭಾವಿ ರೇವಣಸಿದ್ದಪ್ಪ ಮೊದಲಾದವರಲ್ಲದೆ, ಹಲಸಂಗಿಯ ಸುತ್ತಮುತ್ತಲಿನ ಹಳ್ಳಿಯ ಎಂಟತ್ತು ಜನ ಸತ್ಯಾಗ್ರಹಿಗಳು ವಿಜಾಪುರ ತುರಂಗದಲ್ಲಿ ಒತ್ತಟ್ಟಿಗೆ ಇದ್ದರು ಹಾಗೂ ಒಂದು ಪ್ರತ್ಯೇಕ ಅಸ್ತಿತ್ವವಾಗಿ ಹಲಸಂಗಿ ಗೆಳೆಯರ ಗುಂಪು ಗುರುತಿಸಿಕೊಂಡಿತ್ತು.

**ಬಿತ್ತಿದರೆ ಬಿತ್ತುವುದು ಮುಕ್ಕುಚಿಕ್ಕೆಯ ಕಾಳು**
**ಮುತ್ತು ರತುನವ ಬಿತ್ತಿ ಮಾಡದಿರು ಹೊಲಹಾಳು**
**ಜೀವವನು ಚಾಚಿ ಮುಗಿಲಂಗಳಕೆ ಹಚ್ಚಿ**
**ದೇವನೊಡ ನುಡಿವಂತೆ ಮಾಡು ಮೆಚ್ಚಿ**
**ಏಳು ಮಲಗಿದೆಯೇಕೆ ಶರಣ ನಾಡೇ**

ಎಂದು ಸನಾತನ ಕಾವ್ಯದೇವಿಗೆ ಜಾನಪದದ ಪಟ್ಟಗಟ್ಟಿ ನಾಡ ತುಂಬಾ ನಾದವಾಗಿ ಹಾಡಿನ ಮಳೆಗರೆದರು.

**ಅದಯರಿದ್ದವರೆಲ್ಲ ಸದಯರಾಗುವಂತೆ**
**ವ್ಯೋಮ ಮಂಡಲ ಸುಖಧಾಮವಾಗುವಂತೆ**



**ಶರಣದ ದಾಸರ ಕರುಣೆ ಕಿರಣಿಸುವಂತೆ**
**ತನ್ನತನವನ್ನರಿತು ಬಿನ್ನಭಾವವ ಮರೆತು**
**ಕನ್ನಡ ನಾಡ ಚೆನ್ನರೇಳುವಂತೆ**

ಹಾಡಿನಲ್ಲಿ, ನಡೆಯಲ್ಲಿ, ನುಡಿಯಲ್ಲಿ ತಮ್ಮೊಬ್ಬರ ಮಟ್ಟಿಗಲ್ಲದೆ ಗುಂಪು ಕಟ್ಟಿಕೊಂಡು ತಮ್ಮ ವಾಣಿಯನ್ನು ಗದ್ಯದಲ್ಲಿ, ಪದ್ಯದಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಪಡಿಮೂಡಿಸುತ್ತ ಬಂದರು. ಒಟ್ಟಾರೆ ಕನ್ನಡ ಸಾಹಿತ್ಯ ಲೋಕಕ್ಕೆ ಅನುಭಾವ ಮತ್ತು ಜಾನಪದದ ಬಹುದೊಡ್ಡ ಕೊಡುಗೆ ಕೊಟ್ಟ ಹಲಸಂಗಿ ಭೂಮಿ ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ ಹೀಗೆ ವಿಶೇಷ ರೀತಿಯಲ್ಲಿ ಸಕ್ರಿಯವಾಗಿ ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿನ ಸೇವೆ ಸಲ್ಲಿಸಿದರು.

❑

## ೫. ಲಾವಣಿ ರತ್ನ ಖಾಜಾಭಾಯಿ

ಒಂದಿಲ್ಲೊಂದು ರೀತಿಯಲ್ಲಿ ಪ್ರತಿಭಾವಂತರನ್ನು ತನ್ನ ಒಡಲಲ್ಲಿಟ್ಟುಕೊಂಡು ಬೆಳೆಸಿದ ಊರು ಹಲಸಂಗಿ. ಯಾವ ಕಾಲಘಟ್ಟದಲ್ಲಾದರೂ ನೋಡಬಹುದಾದದ್ದು ಒಂದು ವಿಸ್ಮಯವೇ. ಅಂತಹ ಇನ್ನೊಂದು ಜೀವ ಹಲಸಂಗಿಯ ಲಾವಣಿ ರತ್ನ ಖಾಜಾಭಾಯಿ. ರಸಮುಖದ, ಸುರಳಿ ಗಡ್ಡದ, ನಿರಂತರ ನಗೆಮೊಗದ ಖಾಜಾಭಾಯಿಯವರು ಥೇಟ್ ಕಬೀರರನ್ನು ಹೋಲುತ್ತಿದ್ದರು. ಗೊತ್ತಿಲ್ಲದಂತೆ ಜನಪದ ಹಾಡಿನ ಸಂಸ್ಕೃತಿಯ ಪರಂಪರೆಯನ್ನು ಕಟ್ಟುವ ಕೆಲಸ ಮಾಡುತ್ತಿದ್ದರು. ಯಾವುದೇ ಹಬ್ಬ ಹರಿದಿನ ಬರಲಿ, ಹುಟ್ಟು, ಸಾವು, ನೋವು, ನಲಿವು, ಸಂಭ್ರಮ ಇರಲಿ ಅಲ್ಲಿ ಹಾಡುಕಟ್ಟಿ ಹಾಡುತ್ತಿದ್ದ, ಅಕ್ಷರ ಬಾರದಾದರೂ ಅಪಾರ ತಿಳುವಳಿಕೆಯುಳ್ಳ ನಮ್ಮ ಜನಪದ ಕವಿಗಳು ರಚಿಸಿ ಹಾಡಿದ ಈ ಮೌಖಿಕ ಪರಂಪರೆಯ ಅಮೂಲ್ಯ ಸಾರಸ್ವತಕ್ಕೆ ಅಂತ್ಯವೆಂಬುದೇ ಇಲ್ಲ. ನಿಲುಗಡೆ ಇದ್ದರೂ ಅದು ಮತ್ತೊಂದು ಕಡೆ ಆರಂಭವಾಗಿ ನಿರಂತರತೆಯನ್ನು ಕಾಯ್ದುಕೊಳ್ಳುವ ಏಕಾಣುಜೀವಿ ಅಮೀಬಾದಂತೆ. ನಮ್ಮ ಜನಪದ ಗೀತೆಗಳು ಪ್ರಯೋಗಶೀಲತೆಯ ಕಾಣ್ಕೆಗಳು. ಅವು ಬದಲಾಗುತ್ತಿರುವ ಗುಣವನ್ನು ಪಡೆದಿವೆ. ಆದರೆ ಅವು ಸ್ಥಿರವಾಗಿ ನಿಲ್ಲುವ ಪ್ರದರ್ಶನಶೀಲತೆ ಮೈಗೂಡಿಸಿಕೊಂಡಿಲ್ಲ. ಅಲ್ಲಿ ಬೀಜವೂ ಇದೆ, ಫಲವೂ ಇದೆ. ಹೀಗಾಗಿ ನಮ್ಮ ಜನಪದರು ನಡೆಸಿದ ಕ್ರಾಂತಿ ವಿಕಸನ ರೂಪ ಪಡದುಕೊಳ್ಳುತ್ತದೆಯೇ ಹೊರತು ಇದ್ದಕ್ಕಿದ್ದ ಹಾಗೆ ಸ್ಫೋಟಗೊಳ್ಳುವ ಆಂದೋಲನವಾಗುವುದಿಲ್ಲ. ಈ ಬದಲಾಗುವ, ವಿಕಸನಗೊಳ್ಳುವ ಹಾಗೂ ಬೀಜ ಫಲವಾಗುವ, ಫಲ ಬೀಜವಾಗುವ ಈ ಚಕ್ರೀಯ ಚಲನಶೀಲತೆಯಲ್ಲಿ ಕನ್ನಡ ನವೋದಯ ಕಾವ್ಯ ಹಲಸಂಗಿ ಪರಿಸರದಿಂದ ಪ್ರವೇಶ ಪಡೆಯಿತು.



ಕೃಷಿಕರ ನೆಲೆಬೀಡಾದ ಹಲಸಂಗಿಯ ಅಶಿಕ್ಷಿತ ಜನಸಮುದಾಯದಿಂದ ಕೂಡಿದ್ದರೂ ಲಾವಣಿಕಾರ ಖಾಜಾಭಾಯಿಯರ ಹಾಡುಗಳಿಂದ ದುಮಿದುಮಿಸುತ್ತಿತ್ತು. ಅಲ್ಲಿಯ ತರುಣ ಮನಸ್ಸುಗಳಷ್ಟೇ ಅಲ್ಲ, ಆ ಊರಿನ ನವಿಲುಗಳೂ ಖಾಜಾಭಾಯಿಯವರ ಲಾವಣಿಗಳನ್ನು ಕೇಳಿ ಗರಿಗೆದರಿ ಕುಣಿಯುತ್ತಿದ್ದವು. ಮಧುರಚೆನ್ನರೂ ಅವರ ಗೆಳೆಯರೂ ಆಗ ಹದಿಹರೆಯದ ತರುಣರೇ. ಹುಟ್ಟು ಪ್ರತಿಭಾವಂತರಾದ ಮಧುರಚೆನ್ನರು ತಮ್ಮ ಬಾಲ್ಯದಲ್ಲಿ ಖಾಜಾಭಾಯಿಯನ್ನು ಪ್ರತ್ಯಕ್ಷವಾಗಿ ಕಂಡಿದ್ದರು. ಅವರ ಲಾವಣಿಗಳಿಗೆ ಮಾರುಹೋಗಿದ್ದರು. ಖಾಜಾಭಾಯಿಯವರ ಲಾವಣಿಗಳ ಕೆಲವು ಸಾಲುಗಳನ್ನು ಮಧುರಚೆನ್ನರು ಹೀಗೆ ಉಲ್ಲೇಖಿಸುತ್ತಾರೆ.

**ನಾಗಿಣೀ ನೋಡ ತಿರುಗಿ ॥**
**ಮರಿಗುದರಿ ಕುಣಿಸಿದಂಗ ನಾಜೂಕ ನಿನ ನಡಿಗಿ ।**
**ಹೊಳಿ ನೀರ ಥೆರಿಯ ಹೊಡದಂಗ ಒದುತೆ ನಿಲಗಿ ॥**

**ಗರಾ ಗರಾ ತಿರವತೇಕಣ್ಣ**
**ಕೆಂಪು ಮೈ ಬಣ್ಣ**
**ಬೇತಲ ಸಣ್ಣ । ಕತ್ತಿಧಾರಿ ॥**

**ನಿನ ಶಬ್ದ ಕೇಳಿ ಆಯ್ತು ಲುಬ್ದ ॥**
**ಕೋಗಿಲ ನಾಚಿ ಕದ್ದ ।**
**ವನಾ ಬಿಟ್ಟು ಎದ್ದ । ಹೋಯ್ತು ಹಾರಿ ॥**

ಖಾಜಾಭಾಯಿಯವರ ಈ ಲಾವಣಿಗಳನ್ನು ಹಿಡಿದಿಡುವ ಮೂಲಕ ಮಧುರಚೆನ್ನರು ಅವರೊಬ್ಬ ನಿಜವಾದ ವರಕವಿ ಎಂದು ಸಾರುತ್ತಾರೆ. ಕನ್ನಡ ನವೋದಯಕ್ಕೆ ಇಂಥ ರಚನೆಗಳನ್ನು ಮೊದಲ ಬಾರಿಗೆ ಕೊಡುವ ಮೂಲಕ ನವೋದಯದ ಬಾಗಿಲುಗಳು ಜನಪದರ ಮೂಲಕ ತೆರೆದುಕೊಳ್ಳುತ್ತವೆ.

ಖಾಜಾಭಾಯಿಯವರ ಲಾವಣಿಗಳಲ್ಲದೆ ಹಲಸಂಗಿ ನಾಡಿನ ಹತ್ತಿರದ ಹದರಿಯ ಬಡೇಶಾ, ಜಾಣ ಕೊಟಗಿ ನಬೀಶಾ, ಕ್ವಾರಳ್ಳಿಯ ರಾಮಚಂದ್ರ,

ಸಂಗಣ್ಣ, ಶಿವಲಿಂಗ ಮೊದಲಾದವರ ಲಾವಣಿಗಳನ್ನು ಮಧುರಚೆನ್ನರು ಕೇಳಿದ್ದರು. ಈ ಜನಪದ ಸಾಹಿತ್ಯದ ಸವಿ ಅವರನ್ನು ಆಕರ್ಷಿಸಿತ್ತು. ಆಗ ಮರಾಠಿಯಲ್ಲಿ, ಬಂಗಾಲಿಯಲ್ಲಿ ಜನಪದ ಸಾಹಿತ್ಯದ ಕೆಲಸ ನಡೆದುದನ್ನು ತಿಳಿದುಕೊಂಡರು. ಹಲಸಂಗಿಯಲ್ಲಿಯೇ ಲಾವಣಿ, ಗರತಿಯ ಹಾಡು ಇತ್ಯಾದಿ ಗೀತೆಗಳು ಹೇರಳವಾಗಿ ಅವರ ಕಿವಿಗೆ ಬೀಳುತ್ತಿರುವ ಸಂದರ್ಭದಲ್ಲಿ ಅವನ್ನೆಲ್ಲ ಕಲೆಹಾಕಬಾರದೇಕೆ ಎಂದು ಯೋಚಿಸತೊಡಗಿದರು. ಅವರೂ ಅವರ ಗೆಳೆಯರಾದ ಪಿ. ಧೂಲಾ ಸಾಹೇಬರು ಈ ನಿಟ್ಟಿನಲ್ಲಿ ಚಿಂತನೆ ನಡೆಸಿದರು. ಇವರಿಬ್ಬರೂ ಅದೇ ತಾನೇ ಕವಿಗಳಾಗಿ ಬೆಳೆಯಲು ಪ್ರಾರಂಭಿಸಿದ್ದರಿಂದ ಜನಪದ ಹಾಡುಗಳ ಸ್ವಾರಸ್ಯಕ್ಕೆ ತಲೆದೂಗತೊಡಗಿದರು. ಈ ಚಿಂತನೆ ಇಡೀ ಕನ್ನಡ ಕಾವ್ಯದ ಮುಂಬೆಳಕಿನ ತಿರುವು ಜಾನಪದದ ಹಿನ್ನೆಲೆಯಲ್ಲಿ ಹೊರಳುತ್ತಿರುವ ಹೊಳವು ನೀಡಿತು.

ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಹಾಡಿಕೊಂಡು ಬರಲಾಗುತ್ತಿರುವ ಮೌಖಿಕ ಕಾವ್ಯ ಪರಂಪರೆಯ ಹೃದಯಂಗಮ ಪಳೆಯುಳಿಕೆಗಳಾಗಿರುವ ವೈವಿಧ್ಯಪೂರ್ಣ ಜನಪದ ಹಾಡುಗಳಿಗೆ ವ್ಯಾಪಕತೆಯನ್ನು ತರುವ ಕೆಲಸಕ್ಕೆ ಈ ಮಹನೀಯರು ಶ್ರೀಕಾರ ಹಾಕಿದರು. ಆ ಕಾಲಕ್ಕೆ ವಿಜಯಪುರದಲ್ಲಿ ೧೯೨೩ರಲ್ಲಿ ೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರುಗುವ ಸುಸಮಯ. ಇದೇ ಹೊತ್ತಿಗೆ ಹಳ್ಳಿಗರ ಸಾಹಿತ್ಯವನ್ನು ವ್ಯಾಪಕಗೊಳಿಸುವ ಹಂಬಲ ಹಲಸಂಗಿ ಗೆಳೆಯರಿಗೆ. ಈ ಕಾರಣವಾಗಿ ವಿಜಯಪುರ ಸಾಹಿತ್ಯ ಸಮ್ಮೇಳನದಲ್ಲಿ ಜನಪದ ಸಾಹಿತ್ಯ ಕುರಿತು ಪ್ರಬಂಧ ಮಂಡಿಸಲು ಸಿದ್ಧತೆ ಮಾಡಿಕೊಂಡರು. ಮಧುರಚೆನ್ನರು 'ಹಳ್ಳಿಯ ಹಾಡುಗಳು' ಎಂಬ ಪ್ರಬಂಧವನ್ನು, ಪಿ.ಧೂಲಾಸಾಹೇಬರು ಲಾವಣಿಯ ಲಾವಣ್ಯ ಎಂಬ ಪ್ರಬಂಧವನ್ನು ಆ ಸಾಹಿತ್ಯ ಸಮ್ಮೇಳನದಲ್ಲಿ ಓದಿದರು. ಕನ್ನಡ ಸಾಹಿತಿಗಳ, ವಿದ್ವಾಂಸರ, ಜನಸಾಮಾನ್ಯರ ಲಕ್ಷ್ಯವನ್ನು ಮೊದಲ ಬಾರಿಗೆ ಜನಪದ ಸಾಹಿತ್ಯದತ್ತ ಸೆಳೆದರು. ಆದರೆ ವಿಜಾಪುರದ ಒಂಬತ್ತನೆಯ ಸಾಹಿತ್ಯ ಸಮ್ಮೇಳನದ (೧೯೨೩) ಸಂದರ್ಭದಲ್ಲಿ ಹಳ್ಳಿಯ ಹಾಡುಗಳು ಎಂಬ ಬಗ್ಗೆ ಮಧುರಚೆನ್ನರು ಮಂಡಿಸಿದ ಬರಹ ೧೯೨೪ರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದರಿಂದಾಗಿ ಜಾನಪದದ ಬಗ್ಗೆ ವಿಚಾರ ಮಾಡಿದ



ಮೊದಲಿಗರು ಮಧುರಚೆನ್ನರೇ ಅನ್ನುವುದು ಸ್ಪಷ್ಟವಾಗಿದೆ. ೧೯೩೧ರ ಜೂನ್ ತಿಂಗಳಿನಲ್ಲಿ ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ ಇವರು ಕೂಡಿ ಪ್ರಕಟಿಸಿದ ಗರತಿಯ ಹಾಡು ಕನ್ನಡದ ಮೊಟ್ಟ ಮೊದಲ ಜನಪದ ಹಾಡುಗಳ ಸಂಗ್ರಹ. ಇದೊಂದು ಕನ್ನಡ ಭಾಷೆಯ ಬಹುತ್ವವನ್ನು ಸಾರುವ ಸಂಗ್ರಹವಾಗಿದೆ. ನಾಡಿನ ಏಕೀಕರಣದ ಧ್ವನಿ ತಾರಕಸ್ವರದಲ್ಲಿ ಮೊಳಗುತ್ತಿದ್ದ ಹಿನ್ನೆಲೆಯಲ್ಲಿ, ಕರ್ನಾಟಕದ ಮನಸ್ಸುಗಳನ್ನು ಸಮಗ್ರವಾಗಿ ಬೆಸೆಯುವಲ್ಲಿ ಈ ಸಂಗ್ರಹದ ಪಾತ್ರವನ್ನು ತಳ್ಳಿಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಏಕೀಕರಣದ ಉತ್ಕೃಷ್ಟ ಪ್ರಜ್ಞೆಯನ್ನು ಹೊತ್ತ ಸಂಗ್ರಹ ಗರತಿಯ ಹಾಡು. "ಈ ಕೃತಿಯ ಸಂಗ್ರಹಕಾರರಾಗಿದ್ದವರಿಗೆ ಆಶಯಗಳಿಗೂ ಬದ್ಧವಾಗಿದ್ದ ಕನಸೂ ಬಹು ದೊಡ್ಡದು. ಹೊಸದಾಗಿ ನಾಡು ಕಟ್ಟುವುದೆಂದರೆ, ಹಾಳು ಬೀಳುಗಳಿಗೆ ಕೆಸರು ಮೆತ್ತುವುದಲ್ಲ; ಗಟ್ಟಿಯಾದ ನೆಲೆಗಟ್ಟಿನಿಂದ ಕಟ್ಟಡವು ಏರುತ್ತ ಹೋಗಿ ತಲೆಯೆತ್ತಿ, ಹೆಡೆಯೆತ್ತಿ ನಿಲ್ಲಬೇಕಾಗಿದೆ. ಗರತಿಯ ಹಾಡು ನಮ್ಮ ನಾಡ ಕಟ್ಟಡಕ್ಕೆ ನೆಲೆಗಟ್ಟಾಗಬೇಕಾಗಿದೆ" ಎಂದು ಸಿಂಪಿ ಲಿಂಗಣ್ಣನವರು ದಾಖಲಿಸುತ್ತಾರೆ.

ಈ ಜಾನಪದ ಸಂಗ್ರಹಕಾರ್ಯ ಬೇಂದ್ರೆಯವರ ಕಾವ್ಯದ ದೃಷ್ಟಿಯಿಂದಲೂ ಮಹತ್ವದ್ದಾಗಿತ್ತು ಎನ್ನುತ್ತಾರೆ ಡಾ. ಗುರುಲಿಂಗ ಕಾಪಸೆಯವರು. ಮಧುರಚೆನ್ನರು ಮತ್ತು ಅವರ ಗೆಳೆಯರು ಪ್ರಾರಂಭಿಸಿದ ಜಾನಪದ ಸಂಗ್ರಹ ಹಾಗೂ ಅಧ್ಯಯನ ಕಾರ್ಯ ಮುಂದೆ ಕರ್ನಾಟಕದಾದ್ಯಂತ ಉತ್ಸಾಹದಿಂದ ನಡೆದು ಈ ಬಗೆಯ ಕೆಲಸಗಳಿಗೆ ಪ್ರೇರಣೆಯಾದದ್ದಲ್ಲದೆ, ಜಾನಪದ ಅಧ್ಯಯನವು ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಸೇರ್ಪಡೆಯಾಗುವುದಕ್ಕೂ ಹಿನ್ನೆಲೆಯಾಗಿದ್ದು, ಈಗ ಜಾನಪದ ಅಧ್ಯಯನ ಬಹುಮುಖವಾಗಿ ಬೆಳೆದಿದೆ.ನವೋದಯ ಕಾವ್ಯ ಅದೇ ತಾನೇ ರೂಪುಗೊಳ್ಳುವ ಯತ್ನದಲ್ಲಿತ್ತು. ಇಂಥ ಸಂದರ್ಭದಲ್ಲಿ ಮಧುರಚೆನ್ನರು ಜನಪದ ಗೀತೆಗಳ ಶ್ರೇಷ್ಠತೆಯನ್ನು ಅಭಿವ್ಯಕ್ತಗೊಳಿಸಿ ಆ ಕಾಲದ ಕವಿಗಳ ಆಕರ್ಷಣೆಗೆ ರಾಜಮಾರ್ಗ ಹಾಕಿಕೊಟ್ಟರು. ಜನಪದ ಸಾಹಿತ್ಯದಲ್ಲಿ ಆದ್ಯರಾದ ಹಲಸಂಗಿ ಗೆಳೆಯರು ಸಾಂಘಿಕವಾಗಿಯೇ ಜನಪದ ಕಾವ್ಯ ಸಂಗ್ರಹವನ್ನು ಕೈಕೊಂಡರು. ಜನಪದ ತ್ರಿಪದಿಗಳ ಸಂಗ್ರಹ 'ಗರತಿಯ ಹಾಡು' ೧೯೩೧ರಲ್ಲಿ ಪ್ರಕಟವಾಯಿತು. ಲಾವಣಿಗಳ ಸಂಕಲನ 'ಜೀವನ ಸಂಗೀತ'

೧೯೩೩ರಲ್ಲಿ ಹಾಗೂ ಹೆಣ್ಣುಮಕ್ಕಳ ಜನಪದ ಗೀತೆಗಳ ಸಂಕಲನ ಮಲ್ಲಿಗೆ ದಂಡೆ ೧೯೩೫ರಲ್ಲಿ ಪ್ರಕಟವಾದವು. ಜೊತೆಗೆ ಅವರ ವೈಯಕ್ತಿಕ ಕವನ ಸಂಕಲನಗಳು ಪ್ರಕಟವಾದವು.ಮಧುರಚೆನ್ನರ 'ನನ್ನ ನಲ್ಲ', ಸಿಂಪಿ ಲಿಂಗಣ್ಣನವರ ಮಿಲನ(ಅನುವಾದ–೧೯೩೧), ಮುಗಿಲ ಜೇನು(೧೯೪೯), ಮಾತೃಭೂಮಿ(೧೯೫೧), ಶ್ರುತಾಶ್ರುತ (೧೯೬೮), ಸಾಯ್‌ಕೊಲ್(೧೯೭೯) ಕವನ ಸಂಕಲನಗಳು, ನವೋದಯ ಕಾಲದ ಪ್ರಥಮ ಮಹಮ್ಮದೀಯ ಕವಿ ಪಿ. ಧೂಲಾ ಸಾಹೇಬರ ವೀರ ಪಥಿಕ ಹೀಗೆ ಅನೇಕ ಕೃತಿಗಳು ಆ ಹೊತ್ತಿಗೆ ಬೆಳಕು ಕಂಡವು. ಒಟ್ಟಾರೆ ಕನ್ನಡ ಸಾಹಿತ್ಯ ಲೋಕಕ್ಕೆ ಅನುಭಾವ ಮತ್ತು ಜಾನಪದದ ಬಹುದೊಡ್ಡ ಕೊಡುಗೆ ಕೊಟ್ಟ ಹಲಸಂಗಿ ಭೂಮಿಯಲ್ಲಿ ಲಾವಣಿ ರತ್ನ ಖಾಜಾಭಾಯಿಯವರೂ ಒಬ್ಬರು ಎಂದೇ ಹೇಳಬಹುದು.

❑

## ೬. ಹಲಸಂಗಿ ಭವದೊಳವತರಿಸಿದ ಗಾಂಧಿ

ಹಲಸಂಗಿಯ ನಮ್ಮನೆ ಮುಂದಿನ, ಮಹಾದೇವ ಗುಡಿಯ ಹಿಂದಿನ ಬದಿಯ ಒಂದು ಪುಟ್ಟ ಖೋಲಿಯಲ್ಲಿ ಹಿರಿಯರೊಬ್ಬರು ವಾಸವಾಗಿದ್ದರು. ಅವರನ್ನು ಬಾಲ್ಯದಿಂದಲೂ ನಾನು ಗಮನಿಸಿದ್ದೇನೆ. ಅವರನ್ನು ಹಲಸಂಗಿಯ ಗಾಂಧಿ ಎಂದೇ ನಾವೆಲ್ಲರೂ ಭಾವಿಸಿದ್ದೆವು. ಹೈಸ್ಕೂಲು ಓದುವಾಗ ಗಾಂಧಿ ಮತ್ತು ವಿನೋಬಾ ಭಾವೆ ಅವರ ಬಗ್ಗೆ ಪುಸ್ತಕಗಳಲ್ಲಿ ಓದಿರುವ ನೆನಪು. ಆಗಿನ ಕಾಲದಲ್ಲಿ ಮನೆ ಮನೆ ಹೋದರೆ ತಿಂಡಿ ಕೊಡೋದು, ಚರಕ ಕೊಟ್ಟು ಪುಟ್ಟ ಪಾಠ ಮಾಡುತ್ತಿದ್ದರಂತೆ.ಆದರೆ ಯಾಕೆ ಇವರು ಹಲಸಂಗಿ ಗಾಂಧಿ ಎನ್ನಿಸಿದ್ದರು ಎಂದರೆ, ತಮ್ಮ ಇಳಿವಯಸ್ಸಿನಲ್ಲೂ ಉತ್ಸಾಹ ಕಡಿಮೆಯಾಗಿರದ ಜೀವ. ಬೀದಿ ಬಡ ಮಕ್ಕಳಿಗೆ ಚುರುಮುರಿ, ಖಾರಾ(ಮಿಸಳಾ), ಖರ್ಜೂರ, ಬಾರಿಹಣ್ಣು, ಬಾಳೆಹಣ್ಣು ಹಂಚುತ್ತಿದ್ದರು. ಸುತ್ತಮುತ್ತಲಿನ ಚರಂಡಿಯ ಕಾಲುವೆಗಳನ್ನು (ಬಚ್ಚಲು ನೀರು ಹರಿಯುವ ಮೋರಿ) ಸರಿ ಮಾಡೋದು, ಕಸ ಕಡ್ಡಿ ತೆಗೆಯೋದು ಮಾಡುತ್ತಿದ್ದರು. ಈ ಮುತ್ಯಾ ಹಿಂಗ್ಯಾಕ ಮಾಡುತ್ತಾರ ಅಂತ ಕಾಡಿದ್ದು ಸುಳ್ಳಲ್ಲ. ಆಗ ನಾನು ತುಂಬಾ ಚಿಕ್ಕ ಹುಡುಗ. ಕಣ್ಣು ಮುಂದಿನ ಬದುಕಿನ ಪಾಠ ಮಾತ್ರ ತುಂಬಾ ದೊಡ್ಡದಿತ್ತು. ಹುಡುಗರಿಗೆ ತಿಂಡಿ, ಹಣ್ಣು ಹಂಚಿದ ಮೇಲೆ ಬುದ್ಧಿ ಮಾತು ಹೇಳೋರು. ಮುಂದಿನ ಸಾರಿ ನಿಮ್ಮ ಅಪ್ಪ ಅವ್ವಗ ಕರಕೊಂಡು ಬರ್ರಿ ಜೊತೆಗೆ ಅಂತ ಹೇಳೋರು. ನಿಮ್ಮ ಮಕ್ಕಳಿಗೆ ಸರಿಯಾಗಿ ಸಾಲಿ ಕಲಸ್ರಿ ಅಂತ ಹೇಳೋರು. ಆಗ ಇದೆಲ್ಲ ನನಗೆ ತುಂಬಾ ವಿಚಿತ್ರ ಅನ್ನಿಸೋದು. ಈ ತಾತಾ ಯಾರು? ಗಾಂಧಿ ಮುತ್ಯಾ ಹೀಗೆ ಇರಬಹುದಾ ಅಂತ ಅನ್ನಿಸೋದು.

ಕುತೂಹಲಕಾರಿ ಸಂಗತಿ ಎಂದರೆ, ಇವರು ಯಾವುದೋ ಒಂದು

ಸರ್ಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ್ದರು ಅಂತೆ ಅನ್ನುವ ಮಸಕಾದ ನೆನಪು. ಆದರೆ ಅದ್ಭುತವಾದ ಇಂಗ್ಲಿಷ್ ಮಾತಾಡವರು. ಭಾಷಣ ಎಂದರೆ ಮುಗಿಯಿತು, ಅವರ ಮಾತು ಕೇಳಲು ಪುಣ್ಯ ಮಾಡಿರಬೇಕು ಮತ್ತು ಅಂತಹ ಧೈರ್ಯದ ಎದೆಗುಂಡಿಗೆ ಇರಬೇಕಿತ್ತು. ಹೇಳುವ ವಿಷಯವನ್ನು ತುಂಬಾ ಸ್ಪಷ್ಟವಾಗಿ, ನಿರ್ಭಿಡೆಯಿಂದ ಮಾತಾಡುವವರು. ಮಧ್ಯೆ ಮಧ್ಯೆ ಹಾಡು, ಅರವಿಂದರು, ರವೀಂದ್ರನಾಥ ಠಾಗೋರ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಆಂದೋಲನಗಳ, ಹೋರಾಟಗಳ, ಚಳುವಳಿಗಳ ಕುರಿತು ಮತ್ತು ಹೀಗೆ ಅನೇಕ ಪಾಶ್ಚಿಮಾತ್ಯ ರಾಷ್ಟ್ರದ ಪ್ರಮುಖರ ಹೆಸರು ಹೇಳಿ ಮಾತಾಡೋರು. ಅವರು ನಮ್ಮನೆ ಮುಂದೆ ಇದ್ದರು ಅನ್ನೋದು ಅಷ್ಟೇ ನನ್ನ ಪಾಲಿನ ಪುಣ್ಯವಾಗಿತ್ತು. ಸುಮ್ಮನೆ ಅವರನ್ನು ನೋಡುತ್ತಾ ಇರತಿದ್ದೆ.

ಅವರನ್ನು ಭೇಟಿಯಾಗಲು ಯಾರ್ಯಾರೋ ಬರೋರು, ತುಂಬಾ ಹೊತ್ತು ಮಾತಾಡೋರು. ಮನೆ ತುಂಬ ಪುಸ್ತಕಗಳು, ಯಾವಾಗಲೂ ಓದುತ್ತಾ ಇರೋರು. ಶುಭ್ರವಾದ ಬಿಳಿ ಪಂಚೆ, ನೆಹರು ಶರ್ಟ್, ತಲೆಗೆ ಗಾಂಧಿ ಟೋಪಿ ಹಾಕಿಕೊಂಡು, ಕೈಯಲ್ಲಿ ಒಂದು ಕೋಲು ಹಿಡಿದು ಹೊರಟರೆ, ಯಾವುದೋ ಲೋಕದ ಮಹಾತ್ಮನೊಬ್ಬ ಲೋಕ ಸಂಚಾರಕ್ಕೆ, ಲೋಕ ಕಲ್ಯಾಣಕ್ಕಾಗಿ ಬಂದವರು ಅಂತ ಅನ್ನಿಸೋದು. ಅವರ ಕೈಯಿಂದ ತಿಂದ ತಿಂಡಿಯ ಋಣ ಮಾತ್ರ ನನ್ನ ಮೇಲೆ ಇನ್ನೂ ಹಾಗೇ ಇದೆ. ಅದನ್ನು ಯಾವತ್ತೂ ಮರೆಯಲು ಸಾಧ್ಯವಿಲ್ಲ ಮತ್ತು ಆ ಋಣದ ಒಂದು ತೃಣದಷ್ಟಾದರೂ ಇಂದಲ್ಲಾ ನಾಳೆ ತೀರಿಸೇ ತೀರಿಸುವೆ ಎನ್ನುವ ಸಂಕಲ್ಪ ಮಾತ್ರ ಇನ್ನೂ ಹಾಗೇ ಇದೆ. ಅವರು ನಿಜವಾಗಿಯೂ ಹಲಸಂಗಿಯ ಮಹಾತ್ಮ. ಅವರೇ ನಮ್ಮ ಮಧುರಚೆನ್ನರ ಅಚ್ಚುಮೆಚ್ಚಿನ ಗೆಳೆಯರಾದ ರಾಘಣ್ಣ ಸುರುಪುರ. ಇವರು ಸಹ ಸಾಂಸ್ಕೃತಿಕವಾಗಿ ನಾಡು, ನುಡಿ, ನೆಲ, ಜಲ ಹೀಗೆ ಸಕ್ರಿಯವಾಗಿ ಅನೇಕ ಚಟುವಟಿಕೆಗಳ ಜೊತೆಗೆ ಸಾಹಿತ್ಯದ ಮೂಲಕ ನಾಡಿಗೆ ಸೇವೆ ಸಲ್ಲಿಸಿದರು.

❑

## ೭. ನಾಡಹಬ್ಬ ಉತ್ಸವ

ಅಖಂಡ ಕರ್ನಾಟಕದ ಅರಿವು ಮೂಡುತ್ತಿದ್ದ ಕಾಲಘಟ್ಟದಲ್ಲಿ. ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರನ್ನು ಒಂದು ಗೂಡಿಸುವ, ಹರಿದು ಹಂಚಿಹೋದ ಕನ್ನಡನಾಡನ್ನು ಪುನರ್ ನಿರ್ಮಿಸುವ ಕಾರ್ಯದಲ್ಲಿ ನಿರತವಾಗಿದ್ದ ಕಾಲದಲ್ಲಿ ಹಲಸಂಗಿಯಲ್ಲಿ ವಿಶಿಷ್ಟ ರೀತಿಯಲ್ಲಿ ನಾಡಹಬ್ಬದ ಆಚರಣೆ ಆರಂಭವಾಯಿತು. ಶ್ರೀ ಅರವಿಂದರ ದಿವ್ಯ ಅವಶೇಷಗಳನ್ನು, ಭಾರತ ದೇಶದ ಉಪರಾಷ್ಟ್ರಪತಿಗಳಾದ ಶ್ರೀ ಬಿ. ಡಿ. ಜತ್ತಿ ಅವರ ಸಮ್ಮುಖದಲ್ಲಿ, ಮಾತಾಜೀ ಅವರ ಅಮೃತ ಹಸ್ತದಿಂದ ತನ್ನೊಡಲಲ್ಲಿ ತುಂಬಿಕೊಂಡ ಕರ್ನಾಟಕದ ಪಾಂಡಿಚೇರಿ ಎಂದೇ ಖ್ಯಾತಿ ಗಳಿಸಿದ ಪುಣ್ಯಭೂಮಿ ಹಲಸಂಗಿ. ಅನುಭಾವ ಕವಿ ಶ್ರೀ ಮಧುರಚೆನ್ನರ, ಹಲಸಂಗಿ ಗೆಳೆಯರ ಬಳಗ, ಶ್ರೀ ಅರವಿಂದ ಆಶ್ರಮ, ಜಾನಪದ, ಕೋಟೆ ಚರಿತ್ರೆ ಹೀಗೆ ಅನೇಕ ವಿಸ್ಮಯವನ್ನು ತನ್ನ ಒಡಲೊಳಗೆ ತುಂಬಿಕೊಂಡ ಊರು. ಮೂರು ಜನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ದ. ರಾ. ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಹಲಸಂಗಿಗೆ ಬಂದು ಹೋಗುತ್ತಿದ್ದರು ಎನ್ನುವುದು ಹೆಮ್ಮೆಯ ಸಂಗತಿ. ನಾಡಿನ ಅನೇಕ ಖ್ಯಾತ ಸಾಹಿತಿಗಳನ್ನು ಸೆಳೆದ ಊರು. ಅನುಭಾವ ಕವಿ ಮಧುರಚೆನ್ನ, ಹಲಸಂಗಿ ಗೆಳೆಯರ ಬಳಗದ ಕರ್ಮಭೂಮಿ. ಹಲಸಂಗಿ ನಾಡಿನಲ್ಲಿ ನಾಡಹಬ್ಬ ಆಚರಣೆ ಶುರುವಾಗಿ ೮೪ ವರ್ಷಗಳೇ ಗತಿಸಿದವು. ೧೯೩೮ರಲ್ಲಿ ಮಧುರಚೆನ್ನರ ನೇತೃತ್ವದಲ್ಲಿ ಹಲಸಂಗಿ ಗೆಳೆಯರು ದಸರಾ ಉತ್ಸವದ ಸಮಯದಲ್ಲಿ ನಾಡಹಬ್ಬ ಆಚರಣೆಯನ್ನು ಆರಂಭಿಸಿದರು. ನಾಡಹಬ್ಬ ಉತ್ಸವ ನಾಡಿಗೇನೇ ಹೊಸ ಚಿಂತನೆಗಳನ್ನು. ಸಾಂಸ್ಕೃತಿಕ ಮಹತ್ವವನ್ನು ತಂದುಕೊಟ್ಟಿತ್ತು.

**ಏಳು ಶೂರರ ಖಣಿ।**
**ಏಳು ಧೀರರ ರಾಣಿ।**
**ಏಳು ತೀರದ ವೀರರಸದ ವಾಣಿ॥**

**ಸತ್ತಿರುವರೆದೆ ಸೇರು।**
**ಸುತ್ತಿರುವ ವಿಷ ಹೀರು।**
**ಬತ್ತಿರುವದಮೃತ ಝರಿ ಮತ್ತೆ ತೋರು॥**

ಎಂದು ಹಾಡುತ್ತ ನಸುಕಿನ ಜಾವ ನಾಲ್ಕು ಗಂಟೆಯಿಂದಲೇ ಪ್ರಭಾತ ಪೇರಿ ನಾಡಹಬ್ಬ ಉತ್ಸವ ಸಮಿತಿಯ ಕಟ್ಟಡದಿಂದ ಶುರುವಾಗುವ ಕನ್ನಡ ಭುವನೇಶ್ವರಿ ತಾಯಿಯ ಧ್ವಜದ ಮೆರವಣಿಗೆ ಹಲಸಂಗಿ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ, ದಾರಿಯ ಇಕ್ಕೆಲಗಳಲ್ಲಿ ಪ್ರತಿಯೊಂದು ಮನೆಯವರು ತಮ್ಮ ಮನೆಯ ಮುಂದೆ ರಂಗೋಲಿ ಹಾಕಿ ಕನ್ನಡ ತಾಯಿಯ ಧ್ವಜಕ್ಕೆ ಸ್ವಾಗತಿಸಿ, ಧ್ವಜದ ಪಾದದಡಿಗೆ ನೀರು ಹರಿಸಿ, ಆರತಿ ಎತ್ತುತ್ತಿದ್ದರು. ದಾರಿಯುದ್ದಕ್ಕೂ ಕನ್ನಡ ನಾಡಿನ ಗತವೈಭವವನ್ನು ಸಾರುವ ನಾಡಗೀತೆಯೊಂದಿಗೆ ಹಾಗೂ ವೀರ ಶೂರರನ್ನು ನೆನಪಿಸುವ ಕವಿತೆಗಳನ್ನು ಹಾಡುತ್ತಾ, ಈ ಮೆರವಣಿಗೆ ೯ ದಿನಗಳವರೆಗೂ ಯಥಾವತ್ತಾಗಿ ಸಾಗಿ ೧೦ನೇ ದಿನ ಉಳಿದ ಗೀತೆಗಳೊಂದಿಗೆ "ಹೋಗೋಣು ಬಾ ಇನ್ನು ಸೀಮೆಯನು ದಾಟಿ" ಎಂಬ ಗೀತೆಯೊಂದಿಗೆ ಕೊನೆಗೊಳ್ಳುತ್ತದೆ.

**ಭೋಲೋ... ಭಾರತ ಮಾತಾಕೀ ಜೈ**
**ಕನ್ನಡ ತಾಯಿಗೆ ಜಯವಾಗಲಿ**
**ಕನ್ನಡ ನುಡಿಗೆ ಜಯವಾಗಲಿ**
**ವಂದೇ ಮಾತರಂ**
**ಜೈ ಹಿಂದ್... ಜೈ ಹಿಂದ್... ಜೈ ಹಿಂದ್...**

ಇಂದಿಗೂ ಈ ಜಯಘೋಷವನ್ನು ನಾವು ಹಲಸಂಗಿಯಲ್ಲಿ ಕೇಳಬಹುದಾಗಿದೆ.



ಜೊತೆಗೆ ಮಹಾರಾಷ್ಟ್ರದಲ್ಲಿ ಲೋಕಮಾನ್ಯ ಗಂಗಾಧರ ತಿಲಕರು ಪ್ರಾರಂಭಿಸಿದ ಗಣೇಶೋತ್ಸವವನ್ನು ಹಲಸಂಗಿಯಲ್ಲಿ ಸಾಂಸ್ಕೃತಿಕವಾಗಿ ನೆರವೇರಿಸಲು ಆರಂಭಿಸಿದರು. ಗಣೇಶೋತ್ಸವದಲ್ಲಿ ಕುವೆಂಪು, ಬೇಂದ್ರೆ ಮುಂತಾದ ಲೇಖಕರ ನಾಟಕಗಳನ್ನು, ಪ್ರಹಸನಗಳನ್ನು ಆಡಿ ತೋರಿಸಿದ್ದರು. ನಾಡಹಬ್ಬವನ್ನು ಹಲಸಂಗಿಯಲ್ಲಿ ಹೆಚ್ಚು ಅರ್ಥಪೂರ್ಣವಾಗಿ ಆಚರಿಸುತ್ತಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಇಲ್ಲಿನ ಉತ್ಸವಗಳಿಗೆ ಶಿವರಾಮ ಕಾರಂತ, ದ. ರಾ. ಬೇಂದ್ರೆ, ರಂ. ಶ್ರೀ. ಮುಗಳಿ, ಸ. ಸ. ಮಾಳವಾಡ, ಸದಾನಂದ ನಾಯಕ" ಮೊದಲಾದ ಸಾಹಿತಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿ ಉಪನ್ಯಾಸ ನೀಡುತ್ತಿದ್ದರು. ರಾಜಕೀಯ, ಸಾಮಾಜಿಕ ಕುರಿತು ಮಾತಾಗುವುದರ ಜೊತೆಗೆ ವೈಚಾರಿಕ ಜಾಗೃತಿಯನ್ನು ಮೂಡಿಸುತ್ತಿದ್ದರು. ಹೀಗೆ ಹಲಸಂಗಿ ಸುತ್ತಮುತ್ತಲೂ ಒಂದು ರೀತಿಯಲ್ಲಿ ಹೊಸ ಚಿಂತನೆಗಳನ್ನು ತುಂಬುವುದರ ಜೊತೆಗೆ ಸಾಂಸ್ಕೃತಿಕ ಮಹತ್ವವನ್ನು ತಂದುಕೊಟ್ಟರು. ೧೯೨೨ರಲ್ಲಿಯೇ ಶಾರದಾ ವಾಚನಾಲಯ ಆರಂಭಿಸಿ ಹಳ್ಳಿಗರಲ್ಲಿ ಓದುವ ಅಭಿರುಚಿಯನ್ನು ಬೆಳೆಸಿದ್ದು ಇದೇ ಗೆಳೆಯರು.

ಇಂತಹ ಅನೇಕ ಹಲಸಂಗಿ ಗೆಳೆಯರ ಬಳಗದ ಚಟುವಟಿಕೆಗಳ ಜೊತೆಗೆ ಮಧುರಚೆನ್ನರ ವ್ಯಕ್ತಿತ್ವ ಮತ್ತು ಕಾವ್ಯದ ಪ್ರಭಾವ ಹೊಸ ಜನಾಂಗದ ಮೇಲೆ ಆಗಿದ್ದು ವಿಶೇಷ. ಅವರ ಅನೇಕ ಗೆಳೆಯರು ಅವರ ಸಾಮೀಪ್ಯದಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡಿರುವ ಕಥೆಗಳನ್ನು ಇಂದಿಗೂ ನಾವು ಕೇಳಬಹುದಾಗಿದೆ. ಹಲಸಂಗಿ ಗೆಳೆಯರು ವಿಜಯನಗರದ ಆರುನೂರನೆಯ ಉತ್ಸವದಲ್ಲಿ ಭಾಗವಹಿಸಿ ಕನ್ನಡಿಗರ ಕುಲಗುರು ಪುಸ್ತಕದ ಆರು ನೂರು ಪ್ರತಿಗಳನ್ನು ಪುಕ್ಕಟೆಯಾಗಿ ಹಂಚಿದ್ದರು. ಕರ್ನಾಟಕ ಏಕೀಕರಣದ ಅಗತ್ಯವನ್ನು, ಭಾರತ ಸ್ವಾತಂತ್ರ್ಯದ ಅನಿವಾರ್ಯತೆಯನ್ನು ಅರಿತವರಾಗಿದ್ದರು.

❑

## ೮. ಹಲಸಂಗಿ ಎಂಬ ಪುಟ್ಟ ಪ್ರಪಂಚ

ವಿಜಯಪುರ ಜಿಲ್ಲೆಯ ಹಲಸಂಗಿ ಎಂಬ ಪುಟ್ಟಹಳ್ಳಿ ಹಲಸಂಗಿ ಗೆಳೆಯರ ಬಳಗದ ಕಾರ್ಯ ಚಟುವಟಿಕೆಯಿಂದಾಗಿ ನಾಡಿನಾದ್ಯಂತ ಹೆಸರು ಮಾಡಿದ ಊರು. ಮಧುರಚೆನ್ನರು ಕನ್ನಡ, ಮರಾಠಿ ಅಲ್ಲದೆ ಬಂಗಾಲಿ, ಇಂಗ್ಲಿಷ್ ಮುಂತಾದ ೨೨ ಭಾಷೆಗಳನ್ನು ತಿಳಿದಿದ್ದರು. ಕಡು ಬಡತನ, ಹಳ್ಳಿಯ ಕಷ್ಟದ ಬಾಳು, ಜತೆಗೆ ಜನ್ಮಕ್ಕೆ ಅಂಟಿ ಬಂದ ಬೇನೆ. ಇದರ ನಡುವೆ ಅವರು ಮೊದಲು ಶ್ರೀರಾಮಕೃಷ್ಣ ಪರಮಹಂಸರು, ವಿವೇಕಾನಂದರ ವಿಚಾರಗಳಿಗೆ ಮಾರುಹೋಗಿದ್ದರು. ಮುಂದೆ ೧೯೩೮ರಲ್ಲಿ ಮಾತಾರವಿಂದರ ಸಂಪರ್ಕಕ್ಕೆ ಬಂದು ಹಲಸಂಗಿಯ ರಾಮಾಳದಲ್ಲಿ ಒಂದು ಪುಟ್ಟ ಗುಡಿಸಲನ್ನು ತಮ್ಮ ತಪೋಭೂಮಿಯನ್ನಾಗಿ ಮಾಡಿಕೊಂಡಿದ್ದರು. ಎಲ್ಲೆಲ್ಲಿಂದಲೋ ಅವರಿಗೆ ಅಂಚೆಯ ಮೂಲಕ ಉದ್ಗ್ರಂಥಗಳು ಬರುತ್ತಿದ್ದವು. ಇದರಿಂದಾಗಿ ಜನ ಅವರನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ತಮ್ಮ ಜೊತೆಗೆ ಗೆಳೆಯರನ್ನು ಇನ್ನಿಲ್ಲದಂತೆ ಹಚ್ಚಿಕೊಂಡು ಅವರ ಜೊತೆಜೊತೆಯಲ್ಲಿ ಬದುಕಿದವರು.

ಗೋವಿಂದ ಪೈ, ಪಂಜೆ ಮಂಗೇಶರಾಯರ ಮೂಲಕ ಮಂಗಳೂರು, ಬಿಎಂಶ್ರೀ ಮೂಲಕ ಮೈಸೂರು, ಬೆಂಗಳೂರು, ಬೇಂದ್ರೆಯವರ ಗೆಳೆಯರ ಗುಂಪಿನ ಮೂಲಕ ಧಾರವಾಡ ನವೋದಯದ ಮೂರು ಮುಖ್ಯ ಕೇಂದ್ರಗಳಾದಂತೆ. ಮಧುರಚೆನ್ನರು, ಸಿಂಪಿ ಲಿಂಗಣ್ಣ ಪಿ. ಧೂಲಾ, ಕಾಪಸೆ ರೇವಪ್ಪನವರ ಮೂಲಕ ವಿಜಯಪುರದ ಹಲಸಂಗಿ ಕನ್ನಡ ನವೋದಯದ ನಾಲ್ಕನೆಯ ಕೇಂದ್ರವಾಯಿತು ಎಂಬುದನ್ನು ಮರೆಯಬಾರದು. ಜನಪದ ಸಾಹಿತ್ಯದ



ಓದು, ಸಂಶೋಧನೆಗೆ ಬುನಾದಿ ಹಾಕಿಕೊಟ್ಟವರು ಹಲಸಂಗಿ ಗೆಳೆಯರು. ಮಧುರಚೆನ್ನರು ಮೂಲ ಬಂಗಾಳಿಯಿಂದ ರವೀಂದ್ರನಾಥ ಠಾಕೂರರ ವಿಸರ್ಜನ ನಾಟಕವನ್ನು ೧೯೨೯ರಲ್ಲಿ ಕನ್ನಡಕ್ಕೆ ಅನುವಾದಿಸಿದ್ದರು. ಆಗ ಅವರಿಗೆ ೨೬ ವರ್ಷ ಎಂದರೆ ನೀವು ನಂಬಲೇಬೇಕು. ಮಧುರಚೆನ್ನರ ಮತ್ತು ಸಿಂಪಿ ಲಿಂಗಣ್ಣರ ಜೊತೆ ಸೇರಿಕೊಂಡು ಟಾಲ್‌ಸ್ಟಾಯ್ ಅವರ ಆತ್ಮಕಥನವನ್ನು 'ಬಾಳಿನಲ್ಲಿ ಬೆಳಕು' ಹೆಸರಿನಲ್ಲಿ ಅನುವಾದಿಸಿ ಅರವಿಂದ ಗ್ರಂಥಮಾಲೆಯ ಮೂಲಕ ಪ್ರಕಟಿಸಿದರು.

ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯೊಡನೆ ಕರ್ನಾಟಕದ ಏಕೀಕರಣದ ಗಾಳಿಯೂ ಜೋರಾಗಿ ಬೀಸತೊಡಗಿದ್ದ ಆ ದಿನಗಳಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲು ಶಿಕ್ಷಕರು ಮುಂದೆ ಬಂದರು. ಹಲವು ಪ್ರತಿಭಾವಂತ ಶಿಕ್ಷಕರು ಮಕ್ಕಳ ಪಠ್ಯಪುಸ್ತಕ ರಚನೆಯೊಡನೆ ಮಕ್ಕಳ ಮನೋವಿಕಾಸಕ್ಕಾಗಿ ಕಥೆ, ಕವನ, ನಾಟಕ, ಜೀವನ ಚರಿತ್ರೆ, ನಿಘಂಟು, ಒಗಟು, ಒಡಪು, ಹಾಸ್ಯ, ಲಾಸ್ಯ, ಚುಟುಕು, ಚಮತ್ಕಾರ, ಸರಳ ಗಣಿತ ಮುಂತಾದವುಗಳನ್ನು ರಚಿಸುತ್ತ ಮಕ್ಕಳಿಗೆ ಅಕ್ಷರ ಜ್ಞಾನದ ಜೊತೆಗೆ ಐತಿಹಾಸಿಕ ಪ್ರಜ್ಞೆ ಮೂಡಿಸಿದರು. ಸಾಮಾಜಿಕ ಸೇವೆಯತ್ತ ಗಮನ ಸೆಳೆದರು. ಇದರಿಂದ ಶೈಕ್ಷಣಿಕ ಗಂಧ ತೀಡತೊಡಗಿತು. ಧಾರ್ಮಿಕ ನಿಜ ಆಚರಣೆಯೊಂದಿಗೆ ಸಾಂಸ್ಕೃತಿಕ ನೆಲೆಯಲ್ಲಿ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ದಾರಿ ಕಾಣತೊಡಗಿತು. ಕ್ರಮೇಣ ಮಕ್ಕಳಲ್ಲಿ ದೇಶಾಭಿಮಾನ, ಭಾಷಾಭಿಮಾನ, ಸ್ವಾಭಿಮಾನ ಮೂಡತೊಡಗಿತು. ಆಗ ನಾವು ಭಾರತೀಯರು, ನಾವು ಕನ್ನಡಿಗರು ಎಂಬ ತಿಳುವಳಿಕೆ ಬರತೊಡಗಿತು.

೧೯೩೬ರಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜನ್ಮಶತಮಾನೋತ್ಸವವನ್ನು ಮಧುರಚೆನ್ನರ ಮುಂದಾಳತ್ವದಲ್ಲಿ ಹಲಸಂಗಿ ಗೆಳೆಯರ ಗುಂಪು ಹಮ್ಮಿಕೊಂಡಿತ್ತು. ಇಡೀ ಹಲಸಂಗಿಯುಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಉತ್ಸವದ ನಿಮಿತ್ಯವಾಗಿ ಪರಮಹಂಸರ ಜೀವನ ಚರಿತ್ರೆ ಆಧರಿಸಿದ ನಾಟಕ ಆಡಿದರು. ಇದೇ ಸಮಯದಲ್ಲಿ ಭಗವದ್ಗೀತೆಯ ಪಾರಾಯಣ ನಡೆಸಿದರು. ಕರ್ಮಯೋಗದಲ್ಲಿ ಮಧುರಚೆನ್ನರು ಗಮನ ಕೇಂದ್ರೀಕರಿಸಿದ್ದರು.

ಆ ನಿಟ್ಟಿನಲ್ಲಿ ಅರವಿಂದ ಗ್ರಂಥಮಾಲೆಯನ್ನು ಆರಂಭಿಸಿದರು. ಸಿಂಪಿ ಲಿಂಗಣ್ಣನವರು ವಿವೇಕಾನಂದರ, ಪಾತ್ರವಹಿಸಿದರೆ, ಸ್ವತಃ ಮಧುರಚೆನ್ನರು ರಾಮಕೃಷ್ಣ ಪರಮಹಂಸರಾಗಿ ಪಾತ್ರ ಮಾಡಿದ್ದರು.

ಮನೆಯ ಪರಿಸ್ಥಿಯಿಂದ ಹೆಚ್ಚು ಓದಲಾಗದಿದ್ದರೂ ಆ ಕಾಲದ ಎಲ್ಲಾ ನವೋದಯದ ಸಾಹಿತಿಗಳಿಗಿಂತ ಅನುಭಾವದ ಅಧ್ಯಯನ ಮತ್ತು ಜೀವನದಲ್ಲಿ ಅದರ ಅನ್ವಯದಲ್ಲಿ ಮಧುರಚೆನ್ನರು ಅಗ್ರಗಣ್ಯರಾಗಿದ್ದರು. ಅರವಿಂದರು ಲೆಟರ್ಸ್ ಆನ್ ಯೋಗ ಪುಸ್ತಕದಲ್ಲಿ ವಿವರಿಸಿರುವ ಆಧ್ಯಾತ್ಮಿಕ ಅವಸ್ಥೆಗಳನ್ನು ಅರಿವಿಗೆ ತಂದುಕೊಳ್ಳುವುದು ಅವರ ನಿತ್ಯ ಕಾಯಕವೇ ಆಗಿತ್ತು. ಮಧುರಚೆನ್ನರ ಸಾಹಿತ್ಯವನ್ನು ಬಹಳ ಹತ್ತಿರದಿಂದ ಅಭ್ಯಾಸ ಮಾಡಿ ಪಿಎಚ್.ಡಿ. ಪದವಿ ಪಡೆದವರು ಡಾ. ಗುರುಲಿಂಗ ಕಾಪಸೆಯವರು. ಅವರ ಪ್ರೌಢ ಪ್ರಬಂಧ ಈ ನಿಟ್ಟಿನಲ್ಲಿ ಅನುಭಾವ ಸಾಹಿತ್ಯದ ಅಭ್ಯಾಸಿಗಳಿಗೆ ಮಹತ್ವದ ಕೃತಿಯಾಗಿದೆ. ಅವರೇ ಮಧುರಚೆನ್ನರ ಲೇಖನಗಳು(೧೯೯೩) ಆತ್ಮಶೋಧ(೧೯೯೮) ಸಂಪುಟಗಳನ್ನು ಮುನ್ನುಡಿ ಸಮೇತ ಸಂಪಾದಿಸಿ ಕನ್ನಡಿಗರಿಗೆ ಪರಿಚಯ ಮಾಡಿದ್ದಾರೆ.

ಹಲಸಂಗಿ ಗೆಳೆಯರ ಬಳಗ ಒಂದು ಸ್ವಾಭಾವಿಕ ಬೆಳೆವಣಿಗೆಯಲ್ಲಿತ್ತು. ಅದು ಹೊರಗಣ್ಣಿಗೆ ಬಳಗವಾಗಿಯೂ, ಒಳಗಣ್ಣಿಗೆ ಮೂರ್ತಿ ಶಿಲ್ಪಶಾಲೆಯಾಗಿಯೂ ರೂಪುಗೊಳ್ಳುತ್ತಿತ್ತು ಎಂದು ಸ್ವತಃ ಬೇಂದ್ರೆಯವರೇ ಗೆಳೆಯರ ಬಳಗದ ಕುರಿತು ಬರೆಯುತ್ತಾರೆ. ಆಲೂರು ವೆಂಕಟರಾಯರ ಸಂಪಾದಕತ್ವದ ಜಯಕರ್ನಾಟಕ ಪತ್ರಿಕೆಯಲ್ಲಿ ಗೆಳೆಯರ ಗುಂಪಿನವರ ಕವಿತೆ, ವಿಮರ್ಶೆಗಳನ್ನು ಪ್ರಕಟಿಸಿದರು. ಮುಂದೆ ಗೆಳೆಯರ ಗುಂಪಿನವರೇ ಮನೋಹರ ಗ್ರಂಥಮಾಲೆ, ಜಯಂತಿ ಪತ್ರಿಕೆ ಸ್ಥಾಪನೆಗೆ ಕಾರಣರಾಗಿದ್ದರು.

ಕರಾಳ ರಾತ್ರಿಗಳಲ್ಲಿ ಅವರ ತೊಳಲಾಟ ಬಾಲ್ಯದಿಂದಲೇ ಆರಂಭವಾಗಿತ್ತು. ಅವರ ಹದಿನೇಳನೇ ವಯಸ್ಸಿನಲ್ಲಿ ನಾಸ್ತಿಕತೆಯೂ ಅವರನ್ನು ಸುತ್ತಿಕೊಂಡಿತ್ತು, ಪ್ರಚಂಡ ನಾಸ್ತಿಕರಾಗಿದ್ದವರು ಮತ್ತೆ ಆಸ್ತಿಕತೆಯತ್ತ ಹೊರಳಿದ್ದರು. ಇದು ಅವರ ಹುಡುಕಾಟವನ್ನು ತೀವ್ರಗೊಳಿಸಿತು. ಅವರು ಹೆಚ್ಚೆಚ್ಚು ಅಸ್ವಸ್ಥರಾಗುತ್ತಾ, ವಿಜ್ಞಾನ, ತತ್ವಜ್ಞಾನ, ಟಾಲ್‌ಸ್ಟಾಯ್, ಅರವಿಂದರು, ಅಧ್ಯಾತ್ಮ, ಬದುಕಿನ ಘೋರ ಸ್ವರೂಪ, ಸಂಕಷ್ಟಗಳು, ಬಡತನ, ಅನಾರೋಗ್ಯ ಹೀಗೆ ಈ ಕರಾಳ ರಾತ್ರಿಯನ್ನು ದಾಟುವುದೇ ದುಸ್ತರವಾಗುತ್ತದೆ. ಈ ಹಂತದಲ್ಲಿ ಅವರು ರಚಿಸಿದ ಕೃತಿಗಳು ಅಧ್ಯಾತ್ಮಶೋಧ ಹಾಗೂ ಆತ್ಮಕಥನ ಕೃತಿಗಳು – ಪೂರ್ವರಂಗ, ಕಾಳರಾತ್ರಿ ಮತ್ತು ಕೊನೆಯಲ್ಲಿ ಬೆಳಗು. ಈ ಬೆಳಕಿನ ಭರವಸೆಯೇ ಕಾರಣವಾಗಿರಬೇಕು ಮತ್ತೆ ಅವರು ಕಾವ್ಯದತ್ತ ಹೊರಳಿದರು. ಟಾಲ್‌ಸ್ಟಾಯ್ ಅವರಂತೆ ಬದುಕಿನ ಮೂಲ ನೆಲೆಗಳನ್ನರಸಿ ಹೊರಟದ್ದು, ಸಾಮಾನ್ಯ ಜನರ ಒಡನಾಟ, ಹುಡುಕಾಟ ಎರಡಕ್ಕೂ ನೆಲೆ ಒದಗಿಸಿತು. ಫ್ಲೀಟ್ ಅವರ ನಂತರ ಕನ್ನಡದಲ್ಲಿ ಮೊದಲ ಬಾರಿಗೆ ಮಧುರಚೆನ್ನರು ತಮ್ಮ ಗೆಳೆಯರೊಂದಿಗೆ ಸೇರಿ ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಈ ಕಾರ್ಯ ಹಳ್ಳಿಗಾಡಿನ ಬದುಕಿನೊಂದಿಗೆ ಬೆಸೆದುಕೊಳ್ಳಲು ನೆರವಾಯಿತು. ಹಾಗೆಯೇ ಮಧುರಚೆನ್ನರಿಗೆ ಕನ್ನಡ ಭಾಷೆಯ ಸರಳತೆ, ಸೊಗಸು, ಸೊಬಗು, ಲಯ, ವಿನ್ಯಾಸಗಳನ್ನು ಅರಿಯಲು ದಾರಿಮಾಡಿಕೊಟ್ಟಿತು. ಕನ್ನಡದ ಕಂಪನ್ನು ಹೀರಿಕೊಂಡು ಮಧುರಚೆನ್ನರ ಕಾವ್ಯ ಅರಳಲು ಈ ಜನಪದ ಸಾಹಿತ್ಯ ನೆರವಾಯಿತು. ಕನ್ನಡದ ಬಹುಮುಖ್ಯ ಕೃತಿಯಾದ ಮಧುರಚೆನ್ನರ ನನ್ನ ನಲ್ಲ ಹೊರಹೊಮ್ಮಿದುದರ ಹಿನ್ನೆಲೆ ಇದಾಯಿತು. ಮಧುರಚೆನ್ನರ ಬೆನ್ನಿಗೆ ಇನ್ನೊಂದು ಪ್ರಭಾವವೂ ಇತ್ತು. ಅದು ಹನ್ನೆರಡನೇ ಶತಮಾನದ ಸುತ್ತಮುತ್ತ ನಡೆದ ವಚನ ಚಳವಳಿಯ ಪ್ರಭಾವ. ವಚನ ಚಳವಳಿಯ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹೋರಾಟದಂತೆಯೇ ಸಾಹಿತ್ಯದೊಳಗೆ ನಡೆಸಿದ ಬಂಡಾಯವೂ ಆಗಿತ್ತು. ಸ್ಥಾಪಿತ ಮೌಲ್ಯಗಳ ವಿರುದ್ಧ ಬಂಡೆದ್ದ ವಚನಕಾರರು ಜನತೆಯ ಭಾಷೆಯಲ್ಲಿ ಬರೆದರು. ಸಿದ್ಧ ಮಾದರಿಗಳನ್ನು ತಿರಸ್ಕರಿಸಿ ವಚನವೆಂಬ ಹೊಸ ಪ್ರಕಾರವನ್ನು ಸೃಷ್ಟಿಸಿಕೊಂಡರು. ಸ್ಥಾವರ ಜಂಗಮಗಳ ವ್ಯತ್ಯಾಸವನ್ನು ಜನರಿಗೆ ತಿಳಿಸಿದರು.

ಡಾ. ಗುರುಲಿಂಗ ಕಾಪಸೆಯವರು ಹಲಸಂಗಿ ಹಾಡು (೨೦೦೦) ಪ್ರಸ್ತಾವನೆಯಲ್ಲಿ ಹಲಸಂಗಿ ಭಾಗದ ಲಾವಣಿಕಾರರು ಕನ್ನಡ ಕವಿಗಳನ್ನು ಪ್ರಭಾವಿಸಿಕೊಂಡ ಬಗ್ಗೆ ಹೀಗೆ ಬರೆಯುತ್ತಾರೆ: "ಹಲಸಂಗಿಯ ಸುಪ್ರಸಿದ್ಧ ಲಾವಣಿಕಾರನಾಗಿದ್ದ ಖಾಜಾಭಾಯಿ ತೀರಿಕೊಂಡ ಮೇಲೆ, ಅವನ ಲಾವಣಿಗಳು

ಇನ್ನೂ ಸ್ವಾರಸ್ಯಕರವಾಗಿ ಹಾಡಲ್ಪಡುತ್ತಿದ್ದವು. ಖಾಜಾಭಾಯಿಯವರು ತೀರಿಕೊಂಡದ್ದು ೧೯೨೪ರಲ್ಲಿ. 'ಜೀವನ ಸಂಗೀತ' ದಲ್ಲಿ ಸಂಗ್ರಹಿತವಾದ ಲಾವಣಿಗಳು ಮೂಲ ಕವಿಗಳಿಂದಲೇ ಪಡೆದವುಗಳಲ್ಲ; ಆಗಿನ ಕಾಲದ ಬೇರೆ ಬೇರೆ ಹಾಡುಗಾರರಿಂದ ದೊರಕಿಸಿದಂತಹವು. ಸಂಗ್ರಹಕಾರರು ತಿಳಿಸಿರುವಂತೆ ಲಾವಣಿಕಾರ ಕುಬ್ಬಣ್ಣನವರ ಮಕ್ಕಳಾದ ವೀರಭದ್ರಪ್ಪನವರು, ವಿಶೇಷವಾಗಿ ಹಲಸಂಗಿಯವರೇ ಆದ ಓಲೇಕಾರ ರಾಮಚಂದ್ರಪ್ಪನವರು ಲಾವಣಿಗಳನ್ನು ಹೇಳಿಕೊಟ್ಟಿದ್ದರು. ಓಲೇಕಾರ ರಾಮಚಂದ್ರಪ್ಪನವರು ಆ ಕಾಲದ ಸುಪ್ರಸಿದ್ಧ ಹಾಡುಗಾರರು. ಅವರ ಕಂಚಿನ ಕಂಠ ಎಂಥವರನ್ನೂ ಆಕರ್ಷಿಸುತ್ತಿತ್ತು, ಬೆರಗುಗೊಳಿಸುತ್ತಲಿತ್ತು. ೧೯೩೬ರಲ್ಲಿ ರಾಮಕೃಷ್ಣ ಪರಮಹಂಸರ ಜನ್ಮ ಶತಮಾನೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಹಲಸಂಗಿಗೆ ಆಗಮಿಸಿದ್ದ ಶಿವರಾಮ ಕಾರಂತರು ಓಲೇಕಾರ ರಾಮಚಂದ್ರನಿಂದ ಲಾವಣಿಗಳನ್ನು ಕೇಳಿ ತಮ್ಮನ್ನು ತಾವೇ ಮರೆತರುಹೋಗಿದ್ದರು ಎಂದರೆ ನೀವೇ ಅರ್ಥಮಾಡಿಕೊಳ್ಳಿ. ಅಷ್ಟೇ ಅಲ್ಲ ಮಾದಣ್ಣನನ್ನು ತಮ್ಮ ಪುತ್ತೂರಿಗೂ ಕರೆಸಿ, ಹಾಡಿಸಿ, ಕೇಳಿ ಸಂತೋಷಪಟ್ಟಿದ್ದರು. ಈ ವಿಷಯವನ್ನು ಕಾರಂತರೇ ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ರಾಮಚಂದ್ರನ ಲಾವಣಿಗಳನ್ನು ಕೇಳಲು ಆ ದಿನ ಕಲೆತ ಹಿಂದೂ ಮುಸಲ್ಮಾನರ ಒಕ್ಕೂಟವು ನನ್ನ ಸ್ಮರಣೆಯಲ್ಲಿ ಬಹಳ ಕಾಲ ಇತ್ತು. ನಾನು ಮುಂದೊಮ್ಮೆ ಅವನನ್ನು ನಮ್ಮ ಊರಿಗೂ ಕರೆಯಿಸಿಕೊಂಡು ಹಾಡಿಸಿ ಕೇಳಿದ್ದೆ. ಒಮ್ಮೆ ಅವನಿಂದ ನಮ್ಮ ಶಾಲೆಯ ಹುಡುಗರಿಗೂ ಲಾವಣಿಗಳನ್ನು ಕಲಿಸುವ ಏರ್ಪಾಡು ಮಾಡಿದ್ದೆ. ಇದು ಅಂದಿನ ಹಲಸಂಗಿ ಲಾವಣಿ ಹಾಡುಗಾರನ ಅಗ್ಗಳಿಕೆಯನ್ನು ಸೂಚಿಸುತ್ತದೆ." ಓಲೇಕಾರ ರಾಮಚಂದ್ರನಂತೆ ಓಲೇಕಾರ ಮಾದಣ್ಣನೂ ಲಾವಣಿಗಳನ್ನು ಸೊಗಸಾಗಿ ಹಾಡುತ್ತಿದ್ದರು. ಮಧುರಚೆನ್ನರ ಆತ್ಮೀಯ ಗೆಳೆಯರಾದ ಇವರಿಂದ ಮುಂದಿನ ತಲೆಮಾರಿನವರು ಲಾವಣಿಗಳನ್ನು ಕೇಳಿ ಸಂತೋಷಪಟ್ಟಿದ್ದಾರೆ. ಹಲಸಂಗಿಯ ಗಾಢ ಸಂಬಂಧ ಹೊಂದಿದ್ದ ವರಕವಿ ದ.ರಾ.ಬೇಂದ್ರೆಯವರ ಸಚ್ಚಿದಾನಂದ ಕವಿತೆಗಳು ಲಾವಣಿಯ ಲಯವನ್ನು ಅಳವಡಿಸಿಕೊಂಡಿದ್ದನ್ನು ಗಮನಿಸಬಹುದು.



ಹಲಸಂಗಿ ಗೆಳೆಯರು ಕೈಗೊಂಡ ಆ ಸಂದರ್ಭದ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಚಾರ ಕಾರ್ಯ ಜನಮುಖಿ ಸಾಹಿತ್ಯಕ್ಕೆ ಒಂದು ಬಗೆಯಲ್ಲಿ ವ್ಯಾಪಕತೆ ತಂದಿತು. ಮೊದಲ ಬಾರಿಗೆ ಜಾನ್ ಫೆಯ್ತ್‌ಫುಲ್ ಫ್ಲೀಟ್ ಸಂಗ್ರಹಿಸಿದ್ದ ಆಯ್ದ ಲಾವಣಿಗಳು ಇಂಡಿಯನ್ ಎಂಟಿಕ್ವೆರಿ ೧೮೮೫ ರಿಂದ ೧೮೮೮ರಲ್ಲಿ ಪ್ರಕಟವಾಗಿದ್ದವು. ಆದರೆ ಇವುಗಳಿಗೆ ಕನ್ನಡದಲ್ಲಿ ವ್ಯಾಪಕತೆ ತಂದುಕೊಟ್ಟ ಸಾಧನೆ ಹಲಸಂಗಿ ಗೆಳೆಯರಿಗೆ ಸಲ್ಲುತ್ತದೆ. ಪಿ. ಧೂಲಾ ಸಾಹೇಬರು ಮತ್ತು ಸಿಂಪಿ ಲಿಂಗಣ್ಣನವರ 'ಜೀವನ ಸಂಗೀತ' ಲಾವಣಿಗಳ ಮೊದಲ ಸಂಗ್ರಹ. ೧೯೨೩ರಲ್ಲಿ ವಿಜಯಪುರದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಹಳ್ಳಿಯ ಹಾಡುಗಳು' ಎಂಬ ಲೇಖನವನ್ನೋದಿದ ಮಧುರಚೆನ್ನರು, ಆ ಲೇಖನದಲ್ಲಿ ಒಂದು ಲಾವಣಿಯನ್ನೇ ಉದಾಹರಿಸಿದ್ದಾರೆ. ಅದೇ ಸಮ್ಮೇಳನದಲ್ಲಿ ಪಿ. ಧೂಲಾ ಸಾಹೇಬರು 'ಲಾವಣಿಯ ಲಾವಣ್ಯ' ಎಂಬ ಲೇಖನವನ್ನೋದಿದ್ದು ಒಂದು ಉಲ್ಲೇಖನೀಯ ಅಂಶವಾಗಿದೆ. ೧೯೨೫ರಲ್ಲಿ ಮಾಸ್ತಿಯವರು 'ಕನ್ನಡ ಲಾವಣಿ ಸಾಹಿತ್ಯ' ಎಂಬ ಲೇಖನವನ್ನು ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಬರೆದರು. ಹೀಗೆ ಲಾವಣಿಗಳ ವಿಷಯಕ್ಕೆ ಆಸಕ್ತಿ ಹುಟ್ಟಿಸುವ ಕಾರ್ಯವೇನೋ ನಡೆಯಿತು. ಆದರೆ ಯಾರೂ ಒಂದು ಸಂಗ್ರಹವನ್ನು ಕೊಡುವ ಸಾಹಸ ಮಾತ್ರ ಮಾಡಲಿಲ್ಲ. ಅದನ್ನು ಮೊಟ್ಟಮೊದಲಿಗೆ ಮಾಡಿದವರೆಂದರೆ ಹಲಸಂಗಿ ಗೆಳೆಯರು. ಈ ಮೂಲಕ ಕನ್ನಡ ನವೋದಯ ಕಾವ್ಯದ ಆರಂಭಕ್ಕೆ ಹಲಸಂಗಿ ಕೇಂದ್ರದಿಂದ ನಡೆದ ಈ ಕೆಲಸ ಕನ್ನಡದ ಹೊಸಕಾವ್ಯವನ್ನು ರೂಪಿಸುವಲ್ಲಿ ಎಲ್ಲ ಬಗೆಯ ಅವಕಾಶಗಳನ್ನು ಸಜ್ಜು ಮಾಡಿಕೊಟ್ಟಿತು.

ಕನ್ನಡ ಜನಪದ ಗೀತ ಸಂಕಲನಗಳಲ್ಲಿ ಮೊಟ್ಟಮೊದಲ ಕೃತಿಯಾದ 'ಗರತಿಯ ಹಾಡು' ಇದರಂಥದು ಇನ್ನೊಂದಿಲ್ಲವೆನ್ನುವಷ್ಟು ಅದ್ವಿತೀಯವಾದುದು. ಇದು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಉಂಟುಮಾಡಿದ ತೀವ್ರತರವಾದ ಸೆಳೆತ ದಾಖಲಾರ್ಹವಾದುದು. ಹಲಸಂಗಿ, ಚಡಚಣ, ಸಾಲೋಟಗಿ, ಇಂಡಿ ಮೊದಲಾದ ಈ ಪರಿಸರದ ಹಳ್ಳಿಗಳಲ್ಲಿ ಜನಪದ ಹಾಡುಗಳನ್ನು ದಣಿವಿಲ್ಲದೆ

ಹಾಡುವ ಹೆಣ್ಣುಮಕ್ಕಳನ್ನು ಮುಂದೆ ಕೂಡಿಸಿಕೊಂಡು ಹಲಸಂಗಿ ಗೆಳೆಯರು ಹಾಡಿಸಿ ಬರೆದುಕೊಂಡರು. ಹಲಸಂಗಿಯ ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ ಮೊದಲಾದ ಗೆಳೆಯರಿಂದ ಹೀಗೆ ರೂಪಿತವಾದ 'ಗರತಿಯ ಹಾಡು' ಸಂಗ್ರಹದಲ್ಲಿರುವ ಸುಮಾರು ೮೦೦ ತ್ರಿಪದಿಗಳು ಜನಪದ ತಾಯಂದಿರ ಕಲ್ಪನಾ ಶಕ್ತಿಗೆ, ಅನುಭವಕ್ಕೆ, ಬದುಕಿನ ವಿವಿಧ ಬಗೆಯ ಸಂದರ್ಭಗಳಿಗೆ ಹಿಡಿದ ಕನ್ನಡಿಗಳಾಗಿವೆ. ವಿಜಯಪುರ ಜಿಲ್ಲೆಯ ಭಾಷಿಕ ಸೊಗಡು ಇಲ್ಲಿ ಹೆಪ್ಪುಗಟ್ಟಿದೆ. ಇಲ್ಲಿಯ ಹಾಡುಗಳನ್ನು ಅವುಗಳ ವಿಷಯ ವಸ್ತುಗಳ ಹಿನ್ನೆಲೆಯಲ್ಲಿ ವರ್ಗೀಕರಿಸಿಕೊಟ್ಟಿದ್ದಾರೆ. ಪರಂಪರೆ, ಸ್ತುತಿ, ತವರುಮನೆ, ತಾಯ್ತಂದೆ, ಅಣ್ಣತಮ್ಮರೂ ಅಕ್ಕತಂಗಿಯರೂ ಅತ್ತಿಗೆ ನಾದಿನಿಯರೂ, ಗೆಳತಿ, ಅತ್ತೆಯ ಮನೆಯ ಕಷ್ಟ, ಮನಸ್ತಾಪ, ಸತಿಪತಿ ಇತ್ಯಾದಿ ಶೀರ್ಷಿಕೆಗಳಲ್ಲಿ ಸರಿಜೋಡಿಸಿ ಇಂಥ ಸಂಗ್ರಹಗಳ ವಿಧಾನವನ್ನು ತಾವೇ ರೂಪಿಸಿ ಮುಂದಿನ ಸಂಗ್ರಹಕಾರರಿಗೆ ಮಾರ್ಗ ತೋರಿಸಿದ್ದಾರೆ. ಬಿಎಂಶ್ರೀ, ಬೇಂದ್ರೆ ಮತ್ತು ಮಾಸ್ತಿ ಅವರು ಈ ಪ್ರತಿಷ್ಠಿತ ಜನಪದ ಗೀತ ಸಂಕಲನಕ್ಕೆ ಮೌಲಿಕವಾದ ಪ್ರಸ್ತಾವನೆ, ಪರಿಚಯ, ಮುನ್ನುಡಿ ಬರೆದು ತೂಕ ಹೆಚ್ಚಿಸಿದ್ದಾರೆ. ಅದುವರೆಗಿನ ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯ ಕುರಿತು ವ್ಯಕ್ತವಾಗಿದ್ದ ಹೀಗಳಿಕೆಯ ಮಾತುಗಳನ್ನು ಮೊಟ್ಟ ಮೊದಲಬಾರಿಗೆ ಇಕ್ಕಿ ಮೆಟ್ಟಿದ ಬಿಎಂಶ್ರೀ ಅವರು "ಮೊದಲು ಹುಟ್ಟಿದ್ದು ಜನವಾಣಿ, ಅದು ಬೆಳೆದು ಪರಿಷ್ಕೃತವಾಗಿ ವೃದ್ಧಿಯಾದದ್ದು ಕವಿವಾಣಿ. "ಜನವಾಣಿ ಬೇರು: ಕವಿವಾಣಿ ಹೂವು" ಎಂದು ಸಾರಿದರು. ಹಾಡುತ್ತ, ಕಲಿಯುತ್ತ ಮುಂದಿನ ಪೀಳಿಗೆಗೆ ಬೆಳೆದು ಉಳಿದುಕೊಂಡು ಬಂದ ಈ ಪದಗಳು ಜನಸಾಮಾನ್ಯರ ನಾಲಗೆಯ ಮೇಲೆ ನಲಿದಾಡುವ ಭಾರತೀಯ ಸಂಸ್ಕೃತಿಯ ಪರಂಪರೆಯ ಕಿಡಿನುಡಿಗಳಾಗಿವೆ. ಜಯ ಕರ್ನಾಟಕ ಸಂಪುಟ–೧(೧೯೨೩), ಸಂಪುಟ–೨(೧೯೨೪) ತಿರುವಿ ನೋಡಿದರೆ ನಮಗೆ ಹಲಸಂಗಿ ಗೆಳೆಯರ ಅನೇಕ ಲೇಖನಗಳು ಒಂದಾದ ಮೇಲೊಂದರಂತೆ ಪ್ರಕಟವಾಗಿರುವುದನ್ನು ಕಾಣಬಹುದಾಗಿದೆ.

ಕನ್ನಡ ಕವಿಗಳನ್ನು ಪ್ರಭಾವಿಸಿಕೊಂಡು ಬಂದ 'ಗರತಿಯ ಹಾಡು' ಉದ್ದಕ್ಕೂ ತನ್ನ ಶ್ರೇಷ್ಠತೆಯನ್ನು ಕಾಯ್ದುಕೊಂಡು ಬಂದಿದೆ. ಈ ಗ್ರಂಥ ಕನ್ನಡದ



ಗರತಿಯರ ಬಾಳಿನ ಅಮೃತ ಬಿಂದುಗಳನ್ನೇ ಸಂಕಲನ ಮಾಡಿದಂತಿರುವ ರೀತಿಯಲ್ಲಿ ದಿವ್ಯ ಮಾಧುರ್ಯವನ್ನು ನೀಡುತ್ತದೆ ಎಂದು ಜಾನಪದ ವಿದ್ವಾಂಸ ಎಲ್. ಆರ್. ಹೆಗಡೆ ಅವರು ಗುರುತಿಸಿದರೆ, ಗರತಿಯ ಹಾಡು ಕನ್ನಡದ ಪ್ರಪ್ರಥಮ ಜನಪದ ಕಾವ್ಯ ಸಂಕಲನವಾಗಿದ್ದು ಗುಣದ ದೃಷ್ಟಿಯಿಂದ ಇಂದಿಗೂ ಅದ್ವಿತೀಯ ಕೃತಿಯಾಗಿ ನಿಂತಿದೆ ಎಂದಿದ್ದಾರೆ ಹಿರಿಯ ವಿದ್ವಾಂಸರಾದ ಸಿಪಿಕೆ.ಡಾ. ಗುರುಲಿಂಗ ಕಾಪಸೆ ಅವರು "ಕನ್ನಡ ಜನಪದ ಸಾಹಿತ್ಯದ ಆದ್ಯ ಸಂಗ್ರಹವಾದ ಇದು ಅದ್ವೀತಿಯವಾದ ಸಂಗ್ರಹವೂ ಅಹುದು" ಎಂದು ಅದರ ವಿಶೇಷತೆಯನ್ನು ಬಣ್ಣಿಸಿದ್ದಾರೆ. ಕೃತಿಗೆ ಆಶೀರ್ವಾದ ರೂಪದಲ್ಲಿ ಬರೆದ ಬರಹದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮಾತನ್ನೂ ಗಮನಿಸಬೇಕು.

❑

## ಅನುಬಂಧ–೧

## ನರಬಲಿ

### ೧

ಬಲಗಾಲಲಿ ಬಿಡುಗಡೆಯನು ಮೆಟ್ಟಿ–ನಿಂತಿಹೆ ಎಲೆ ಕಾಳಿ !
ನಿನ್ನೆಡಗಾಲನು ನೆಕ್ಕುತಲಿಹುದು–ಶ್ವಾನ ಸೂಕರಾಳಿ !
ಭಯದಾಯಕ ಬಲಗೈಯನು ಚಾಚಿಹೆ !
ಶಾಪವ ಕೊಡಲೆಡಗೈಯನು ಎತ್ತಿಹೆ ಎಲೆಲೆ ರುದ್ರಕಾಳಿ !
ಮುಂದೆ ಬೀಸಿ ದುಃಶಾಸನ ಪಾಶವ
ಹಿಂದಿರಿಸಿಹೆ ದುರ್ಯೋಧನಾಂಕುಶವ ಅಹಹ ಮಹಾಕಾಳಿ !
ಮುಸುಕಿತು ಮುಸುಕಿತು ಮುಸುಕಿತು ನೋಡೇ
ನಿನ್ನ ಹೊಟ್ಟೆಯುರಿಂದಲೆದ್ದ ಹೊಗೆಯಿಂದ ನಿನ್ನ ಮೈಯು !
ಎಸೆವುದು ಎಸೆವುದು ಎಸೆವುದು ನೋಡೇ
ದಿಗಿಲುಗೊಳಿಸಿ ಭುಗಿಲೆಂದು ಎದ್ದ ಮೊಗದಲ್ಲಿ ಬಿಸಿಲ ಬೇಗೆ !
ಎದ್ದೆ ಎದ್ದೆ ನೀನೆದ್ದೆ !
ಜೀವ ತಿನ್ನುವಾ ಹಸಿವೆ ಮತ್ತೆ ನೆತ್ತರ ನೀರಡಿಕೆ
ಮೈಯ ತಾಳಿ ನೆಲದೆದೆಯ ಸೀಳಿ
ಎದ್ದಂತೆ ಪ್ರಳಯಕಾಳಿ !
ನಾಳಿನ ಬಲಿಗಳ ಗೋಳನು ಊಹಿಸೆ
ನಿನ್ನ ನಿನ್ನ ಆ ಉದ್ದ ಕಿವಿಗಳೂ ತಾವೇ ಬತ್ತಿದವು !
ಮುಂದಿನ ಸಾವಿನ ಗೊಂದಲ ಕಲ್ಪಿಸಿ
ನಿನ್ನ ನಿನ್ನ ಆ ಬಿರಿಗಣ್ಣುಗಳನು ನೀನೆ ಕಿತ್ತುಕೊಂಡೆ !
ಆರುವೆ ಎಂದು ? ಎಂದು ಆರುವೆ ?
ನೆಲದಗಲಕೆ ಮುಗಿಲುದ್ದಕೆ ಹೊತ್ತಿಹ ಎಲೆಲೆ ಬಂಜೆ ಬೆಂಕಿ !
ಪ್ರಳಯಕಾಳಿ ಏ ರುದ್ರಕಾಳಿ ಎಲೆ ಎಲೆಲೆ ಮಹಾಂಕಾಳಿ !

### ೨

ನಿಂದಿಹರಿದೊ ಇಗೊ !
ಎಕ್ಕಡ ಮೆಟ್ಟಿಹ ಎಕ್ಕಲ ಬಂಟರು
ಉಕ್ಕಡ ಗಾತ್ರದ ಉಕ್ಕಡದವರು
ಕಕ್ಕಡ ಹೊತ್ತಿಸಿ ಕಣ್ಣುಗಳಲ್ಲಿ
ಮಾಡಿಸೆ ಕೆನ್ನೀರ್ ಜಳಕವನು
ಏರಿಸಿ ರುಂಡದ ಹೂವುಗಳ
ಹಾಕಲು ಮದ್ದಿನ ಧೂಪವನು
ಬಾರಿಸೆ ಗುಂಡಿನ ಗಂಟೆಗಳ
ಬಂದಿತು ಬಂದಿತು ನೈವೇದ್ಯ
ನೀತಿಯ ಭೂತವೆ ಹೊರಡಿಲ್ಲಿಂದ
ದಯಯ ದೆವ್ವವೆ ನೀ ಹೊರಡು
ಕರುಳಿನ ಮರುಳೇ ಓಡಿಲ್ಲಿಂದ
ನ್ಯಾಯರಾಕ್ಷಸನೆ ನೀನೋಡು
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು !
ಇದುವೆ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

೩

ಮುಪ್ಪಿನ ತಾಯ್ಗಳೆ, ಹೊಟ್ಟೆಯ ಡೊಳ್ಳ
ಮುದಿ ತಂದೆಗಳೇ, ಕೈ ಕೈ ತಾಳ
ಬಡೆಯಿರಿ ಬಾರಿಸಿರಿ !
ಚಿಕ್ಕ ಮಕ್ಕಳೇ, ಚೀರು ಸನಾದಿಯ
ಅಕ್ಕ ತಂಗಿಯರೆ, ಅಳಿಲಿನ ಕೊಳಲ
ಊದಿರಿ, ಉಸಿರಿಸಿರಿ !
ಮಂಡೆ ಮೋಚಿದಾ ಹೆಂಡಿರ ದಂಡೇ
ವಿವಿಧಾಲಾಪ ಪ್ರಚಂಡ ಪ್ರಲಾಪದ
ಓಲಗ ಬಾಜಿಸಿರಿ !
ಬೊಬ್ಬೆಯ ಕುಟ್ಟಲೆ ಕರುಣೆಗಳರಸೇ !
ಮಾನವನೆಂಬಾ ನಿನ್ನೀ ಕುನ್ನಿಯು ಮಾಡಿದ ಮಾಟಕ್ಕೆ
ಇಂತಹ ಪಾಪಿಯ ಲೋಭಿಯ ಕೋಪಿಯ ಹುಟ್ಟಿಸಿದೇತಕ್ಕೆ !

೪

"ಮುಕ್ಕಣ್ಣನ ಆ ಮೂರೂ ಕಣ್ಣುಗಳು
ಕುರುಡೇ ಕುರುಡೇ ?
ಭೂ–ಶ್ರೀಪತಿಯಾ ನಾಲ್ಕೂ ಕೈಗಳು
ಮೊಂಡೇ ಮೊಂಡೇ !
ವೇದವುಸಿರಿದನ ನಾಲ್ಕೂ ಮುಖಗಳು
ಮೂಕೇ ಮೂಕೇ ?
ಅಮರರೆಂಬುವರು ಕೊಳೆಯದ ಹೆಣಗಳೊ ?
ಮುಚ್ಚದ ಕಣ್ಗಳು ಮುಚ್ಚಿದ ಕಣ್ಗಳೊ ?"
ಏನಿದು ಏನಿದು ಏನನ್ಯಾಯ ?
ಶಾಂತಂ ಪಾಪಂ ಒಳಿತೋ ಒಳಿತು
ದೇವಿಯ ಪೂಜೆಗೆ ಹೆಸರಿಡಬೇಕೇ ?
ಇಂತಹದೆಂದದು ತಾ ಕೆಡಬೇಕೇ ?
ನೆತ್ತರಹೇಡಿಯೆ, ಮುಚ್ಚೆಲೆ ಬಾಯ !
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು !
ಇದುವೇ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

೫

ಬಲವೆಂಬುದು ಇದು ಬೆವರಿನ ಬಳ್ಳಿ
ಕಾಳಗವೆಂಬುದು ನೆತ್ತರ ಹೂವು
ಬಿಡುಗಡೆಯೆಂಬುದು ಸಾವಿನ ಹಣ್ಣು
ಇನ್ನೂ ಇನ್ನೂ ಇನ್ನೂ ಇನ್ನೂ
ಪಂಚಮರಾಧಿ ಪಂಚವರ್ಣವೇ
ಪುಟಿಸು ಪಾಂಚಜನ್ಯ !
ಭೂಮಿತಾಯಿಯೇ ಜ್ವಾಲಾಮುಖದಿಂದೂದು ಶಂಖವನ್ನು
ನಿಲ್ಲಲಿ ನಟರಾಜನ ನಾಟ್ಯ
ಭಂಗಪಡೆಯಲಿ ಬ್ರಹ್ಮಸಮಾಧಿ
ಹೋಗಲಿ ಹಾಲಿನ ಕಡಲಲಿ ಮಲಗಿದ
ದೇವನ ನಿದ್ದೆಯು ಹಾಳಾಗಿ !
ನೋಡಲಿ ನೋಡಲಿ ನೋಡಲಿ ಅವರು
ಮೂವರು ಕೂಡಿ, ರಚಿಸಿದ ಮೂರಾಬಟ್ಟೆಯ ನಾಟಕವ !
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು !
ಇದುವೇ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

೬

" ಏನಿದು ಏನಿದು ಏನಿದು " ಎಂದು
ದೇವರ ಜಂಗುಳಿ ಕಿರಿಚುವದೇಕೆ ?
ಇದು ಮಾನವತೆಯು ಮೊಳಗುವ ಕಾಲ !
ನಾಗರಿಕತೆಯೂ ಬೆಳಗುವ ಕಾಲ !
ಕ್ರೈಸ್ತನ ಬೋಧೆಯು ಉಬ್ಬಿಹ ಕಾಲ
ಬಿಳಿಛಾಯೆಯು ತಾ ಹಬ್ಬಿಹ ಕಾಲ !
ಜೀವದಯಾ ಸಂಘದ ಸುಳಿಗಾಲ !
ಹಿಂಸೆಯ ಕ್ರೌರ್ಯಕೆ ಇದು ಅಳಿಗಾಲ !
ಶಾಂತಿಪುರಾಣವ ಹೇಳುವ ಕಾಲ !
ಬುದ್ಧಚರಿತೆಯನು ಕೇಳುವ ಕಾಲ !
ಕೋಳಿಯ ಕೊಯ್ದರೆ ಕೆರಳುವರುಂಟು
ಕುರಿಯನು ಕೊಂದರೆ ಕೇಳುವರುಂಟು
ಕೋಣನ ಕಡಿದರೆ ಕಾಯುವರುಂಟು
ಗುಬ್ಬಿ ಮಾನವನ,
ಕೊಯ್ದರು, ಕೊಂದರು, ಕಡಿದರು ಏನು ?
ಕೊಂದನು ಆತನು ತನ್ನನೆ ತಾನು
ಸ್ವಾರ್ಥತ್ಯಾಗವಿದಾತ್ಮಹುತಿಯಿದು
ನರಬಲಿ ನರಮೇಧವು ಕೇಳು
ಅಶ್ವಮೇಧಕೂ ಸರಿಮೇಲು
ಇದುವೆ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ !

❑

## ಅನುಬಂಧ–೨

## ಗ್ರಂಥ ಋಣ


೧. ಗರತಿಯ ಹಾಡು (ತ್ರಿಪದಿ ಸಂಗ್ರಹ) ಹಲಸಂಗಿ ಗೆಳೆಯರ ಬಳಗದ ಸಂಗ್ರಹ

೨. ಆತ್ಮಶೋಧ (ಮಧುರಚೆನ್ನರ ಕಾವ್ಯ ಮತ್ತು ಆತ್ಮಕಥನಗಳ ಸಮಗ್ರ ಸಂಪುಟ) – ಡಾ. ಗುರುಲಿಂಗ ಕಾಪಸೆ

೩. ಮಧುರಚೆನ್ನರ ಜೀವನ ಹಾಗೂ ಕೃತಿಗಳ ಸಮೀಕ್ಷೆ– ಡಾ. ಗುರುಲಿಂಗ ಕಾಪಸೆ

೪. ಶ್ರೀ ಮಧುರಚೆನ್ನರ ಸ್ಮೃತಿಗಳು– ಸಿಂಪಿ ಲಿಂಗಣ್ಣ

೫. ಮಧುರಚೆನ್ನರ ಲೇಖನಗಳು / ಸಿಂಪಿ ಲಿಂಗಣ್ಣ (ಅಪ್ಪಟ ಜಾನಪದ ಪ್ರತಿಭೆ) – ಡಾ. ಗುರುಲಿಂಗ ಕಾಪಸೆ

೬. ಮಧುರಚೆನ್ನರ ಜೀವನ, ಅನುಭಾವ ಮತ್ತು ಕೃತಿ ಸಂಪದ – ಪ್ರೊ. ಆರ್. ಜಿ. ಕುಲಕರ್ಣಿ

೭. ಮಧುರಚೆನ್ನರ ಬದುಕು ಬರಹ – ಡಾ. ಎಂ. ಎನ್. ವಾಲಿ

೮. ಅಮೃತಧಾರೆ / ನೆನಪುಗಳು – ಪುರುಷೋತ್ತಮ ಗಲಗಲಿ

೯. ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ / ನೆಲಮೂಲ ಸಂಸ್ಕೃತಿ – ಡಾ. ಪ್ರಕಾಶ ಗ. ಖಾಡೆ

೧೦. ಕಾಳರಾತ್ರಿಯಲ್ಲೊಂದು ಬೆಳಕಿನ ಕಿರಣ (ಲೇಖನ)–ಜಿ. ಪಿ. ಬಸವರಾಜು

೧೧. ಮರೆಯಲಾಗದ ಮಹಾನುಭಾವರು (ವಿಜಯಪುರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು) – ದೇವರಾಜ ಜೆ. ಬಾಗೇವಾಡಿ


❑

## ಅನುಬಂಧ–೩

## ಮೌಖಿಕ ಋಣ

೧. ಗುರುಲಿಂಗ ಕಾಪಸೆ, ಧಾರವಾಡ

೨. ಜಿ. ಪಿ. ಬಸವರಾಜು, ಮೈಸೂರು

೩. ಡಾ. ಎಸ್. ಕೆ. ಕೊಪ್ಪ, ಇಂಡಿ

೪. ಡಾ. ಎಮ್. ಎಸ್.ಮದಭಾವಿ, ವಿಜಯಪುರ

೫. ಚನ್ನಪ್ಪ ಕಟ್ಟಿ, ಸಿಂದಗಿ

೬. ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ

❑

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |